# ಕೆಂಧೂಳಿ

ಹೊಸ ಸವಾಲುಗಳ ಕನಸು

ಪ್ರಧಾನ ಸಂಪಾದಕ: ತುರುವನೂರು ಮಂಜುನಾಥ

**KENDHOOLI** *Kannada Weekly*

kendhooli.com/e-paper/


**ಬಡಪಾಯಿ ಎಮ್ಮೆಗಳಿಗೂ ಥ್ಯಾಂಕ್ಸ್ ಹೇಳೋಣ ಬನ್ನಿ**



ಡಿ.ಉಮಾಪತಿ
ಅವರ ಲೇಖನದಲ್ಲಿ...





ಸಂಪುಟ - 01 | ಸಂಚಿಕೆ - 50 | ಪುಟ - 16 | ರೂ. 16/- | ಅಕ್ಟೋಬರ್ 28 ರಿಂದ ನವೆಂಬರ್ 03, 2021 MAG(2)Npp/49/2020-21




# ಅಂಬರ್ ಗ್ರೀಸ್ ಹೆಸರಲ್ಲಿ ತಿಮಿಂಗಿಲಗಳಿಗೂ ಗಂಡಾಂತರ..!!

## ನಾಡಗೀತೆಗೂ ರಾಜಕೀಯದ ಬಣ್ಣ

ಎಂ.ಕೆ. ಭಾಸ್ಕರ ರಾವ್
ಅವರ ಅಂಕಣದಲ್ಲಿ...

## ಕಾಂಗ್ರೆಸ್‌ಗೆ 'ಮಹಿಳಾ ಟ್ರಂಪ್ ಕಾರ್ಡ್' ಯಶಸ್ಸು ತರಲಿದೆಯೇ..?

## ಎರಡೂ ಕ್ಷೇತ್ರದಲ್ಲೂ ಬಿಜೆಪಿಗೆ ಬಿಎಸ್‌ವೈ ಅನಿವಾರ್ಯ

# ಇತಿಹಾಸದ ಕಸಾಪಕ್ಕೆ ರಾಜಕೀಯ ನಂಟು ಹಚ್ಚಿಸಬೇಡಿ..!



ಮನ ಮಿಡಿತ
ತುರುವನೂರು ಮಂಜುನಾಥ
ಪ್ರಧಾನ ಸಂಪಾದಕ

ಇದು ನಿಜಕ್ಕೂ ದುರಂತರವೇ ಅಪ್ಪಟ ಸಾಹಿತಿ ರಾಜಕೀಯದಿಂದ ಬಹುದೂರ ಉಳಿಯಬೇಕಾದ.ರಾಜಕಾರಣವೇ ಅಲ್ಲಿ ಸುಳಿಯದಂತೆ ಮಾಡಬೇಕಾದ ಅಪ್ಪಟ ಕನ್ನಡ ನಾಡು ನುಡಿ ಸಾಂಸ್ಕೃತಿಕ ಸಾಕ್ಷಿ ಪ್ರಜ್ಞೆಯಾಗಿ ಕಾರ್ಯನಿರ್ವಹಿಸಬೇಕಾದ ಕನ್ನಡ ಸಾಹಿತ್ಯ ಪರಿಷತ್‌ಗೆ ಈಗ ರಾಜಕೀಯ ನಂಟಿನ ರಂಗು ಮೆತ್ತಿಕೊಂಡಿದೆ. ಸಾಹಿತ್ಯ ಪರಿಷತ್‌ನ ಚುನಾವಣೆಗೆ ನಿಂತ ವ್ಯಕ್ತಿ ಒಂದು ಪಕ್ಷದ ಮೂಲಕ ಪ್ರಚಾರ ಮಾಡುತ್ತಾರೆ ಎಂದರೆ ಎಲ್ಲಿಗೆ ಸಾಗಿದೆ ಎನ್ನುವುದನ್ನು ಪ್ರಜ್ಞಾವಂತ ಸಾಹಿತಿಗಳು ಯೋಚಿಸಬೇಕಿದೆ. ಇಂತಹವರನ್ನು ಸಾಹಿತ್ಯ ಪರಿಷತ್‌ಗೆ ತಂದು ಕೂರಿಸಿದರೆ ಪರಿಷತ್ ಏನಾಗುತ್ತದೆ ಎನ್ನುವುದನ್ನು ಒಂದಿಷ್ಟು ಚಿಂತಿಸುವ ಅಗತ್ಯವೂ ಇದೆ.

ಮಾನಗೇಡಿಗಳು ಸಾಹಿತ್ಯ ಪರಿಷತ್‌ಗೆ ಬರುವುದನ್ನು ತಪ್ಪಿಸಬೇಕು, ಈಗಾಗಲೇ ಸಾಹಿತ್ಯ ಪರಿಷತ್ ಒಂದಿಷ್ಟು ಅಂತ ವಾತಾವರಣವನ್ನು ಕಳೆದುಕೊಂಡಿದೆ ಇನ್ನೂ ಸಂಪೂರ್ಣ ಒಂದು ಪಕ್ಷ ಆ ವ್ಯಕ್ತಿ ಬಗ್ಗೆ ಪ್ರಚಾರ ಮಾಡುತ್ತದೆ ಎಂದರೆ ಅದು ಸಹಿಸಲಾಗದ ವಿಷಯ ಹಾಗಾಗಿ ಸಾಹಿತಿಗಳು ,ಪ್ರಜ್ಞಾವಂತರು ಈ ಬಗ್ಗೆ ಎಚ್ಚರ ವಹಿಸಬೇಕಿದೆ.

ರಾಜಕೀಯ ಸೋಂಕು ತಗುಲ ಬಾರದು ಎಂದು ಹಿಂದೆ ತಿರುಮಲೆ ತೀತಾಚಾರ್ಯ ಮೊದಲಾದವರು 'ಸಾಹಿತ್ಯ ಕೇವಲ ಬರಹಗಾರರ ಕನ್ನಡಿಗರ ಸಾಕ್ಷಿಪ್ರಜ್ಞೆಯ ಪ್ರತೀಕವಾಗಬೇಕು ಅಲ್ಲಿ ಸಾಹಿತ್ಯದ ಗಂಧ ಬೀಸಬೇಕು ರಾಜಕಾರಣದ ಗಾಳಿ ಬೀಸಿದರೆ ಆಗ ಸಾಹಿತ್ಯದ ಮತ್ತು ಸಾಹಿತ್ಯ ಪರಿಷತ್ತಿನ ಅವಸಾನವೇ ಸರಿ" ಎಂದು ಹೇಳಿದ್ದರು. ಆದರೆ ಇಲ್ಲಿಯವರೆಗೂ ಅಂತಹ ರಾಜಕಾರಣದ ನೆರಳು ಬೀಸಿರಲಿಲ್ಲ, ಬೀಸಿದ್ದರು ಅದು ತೆರೆಮರೆಯಲ್ಲಿ ಎಲ್ಲೋ ಒಂದು ಕಡೆ ನಿಂತಿತ್ತು ಆದರೆ ಈಗ ಬಹಿರಂಗವಾಗಿ ರಾಜಕಾರಣದ ನೆರಳು ಬಿದ್ದಿದೆ.

ಸಾಹಿತ್ಯ ಪರಿಷತ್ ಚುನಾವಣೆಗೆ ಸ್ಪರ್ಧಿಸಿರುವ ಅಭ್ಯರ್ಥಿಗಳು ಒಂದು ಪಕ್ಷದ ವ್ಯಕ್ತಿ ಎಂದು ಗುರುತಿಸಿಕೊಳ್ಳುವ ಮೂಲಕ ರಾಜಕೀಯ ನೆರಳು ಬೀಸಿದೆ ಅಲ್ಲಿಗೆ ಸಾಹಿತ್ಯ ಪರಿಷತ್‌ನ ಸಾಹಿತ್ಯದ ಅವಸಾನಕ್ಕೆ ಕಾರಣವಾಗಬಹುದು ಹಾಗಾಗಿ ಅಂತವರನ್ನು ಸಾಹಿತ್ಯ ಪರಿಷತ್‌ನ ಒಳಗೂ ಸೇರಿಸದಂತೆ ನೋಡಿಕೊಳ್ಳುವ ಜವಾಬ್ದಾರಿ ಸಾಹಿತಿಗಳಿಗೆ, ಕನ್ನಡಪರ ಸಂಘಟನೆಗಳಿಗೆ ಇದೆ ಆದರೆ ಅದು ಎಷ್ಟರ ಮಟ್ಟಿಗೆ ಫಲಕಾರಿಯಗುತ್ತದೆ ಎನ್ನುವುದು ಬಹಳ ಕಷ್ಟ.ಯಾಕೆಂದರೆ ಈಗ ಸ್ಪರ್ಧಿಸಿರುವ ಬಹುತೇಕರು ರಾಜಕೀಯ ಪಕ್ಷಗಳ ರಾಜಕೀಯ ವ್ಯಕ್ತಿಗಳ ಒಂದು ಸಂಘಟನೆಯ ನೆರಳಲ್ಲಿ ಪ್ರಚಾರ ಮಡುತ್ತಿದ್ದರೆ ಇದೆಲ್ಲದಕ್ಕಿಂತಲೂ ಹೆಚ್ಚಾಗಿ ಒಂದು ಜಾತಿಯ ಆಧಾರದ ಮೇಲೆ ಮತ ಕೇಳುತ್ತಿದ್ದಾರೆ ಎಂದರೆ ಅಂತ ಸಾಹಿತಿಗಳಿಗೆ ಅಂತಹ ಅಭ್ಯರ್ಥಿಗಳಿಗೆ ನಾಚಿಕೆಯಾಗಬೇಕು ಒಬ್ಬ ಸಾಹಿತಿ ತಾನು ಮಾಡಿದ ಸಾಹಿತ್ಯದ ಕೃಷಿಮೇಲೆ, ಸಾಹಿತ್ಯಕ್ಕೆ ಸಲ್ಲಿಸಿರುವ ಸೇವೆಯ ಮೇಲೆ, ಕನ್ನಡಕ್ಕಾಗಿ ಮಾಡಿರುವ ಸೇವೆಗೆ ಕನ್ನಡಕ್ಕಾಗಿ ಮಾಡಿದ ಹೋರಾಟವೇ ಪ್ರಮುಖವಾಗಬೇಕೆ ಹೊರೆತು ಜಾತಿ,ರಾಜಕೀಯ ಬಲದ ಮೇಲೆ ಬಂದರೆ ಆತ ನಿಜಕ್ಕೂ ಸಾಹಿತ್ಯ ಸೇವೆ ಮಾಡುವುದಿಲ್ಲ ಬದಲಾಗಿ ಭ್ರಷ್ಟಾಚಾರದ ಕರಿನೆರಳಲ್ಲಿ ಬದುಕಿ ಏನು ಮಾಡಿದರೆ ಹಣ ಮಾಡಬಹುದು ಎನ್ನುವ ಚಿಂತನೆಯಲ್ಲಿರುತ್ತಾನೆ ಹಾಗಾಗಿ ಅಂತವರನ್ನು ದಯವಿಟ್ಟು ಆರಿಸುವ ಗೋಜಿಗೆ ಹೋಗದಿರುವುದೇ ಒಳಿತು ಎನಿಸುತ್ತದೆ.

ಕಸಾಪ ರಾಜ್ಯಾಧ್ಯಕ್ಷಗಿರಿಗಾಗಿನ ಚುನಾವಣಾ ಸ್ಪರ್ಧೆ ಸುಲಭದ ಮಾತು ಅಲ್ಲ. ನಿಜ ಹಾಗಂತ ಸಾಹಿತ್ಯ ಸೇವಕನಿಗೆ ಕನ್ನಡ ಸೇವಕನಿಗೆ ಹಣಬಲದಿಂದ ಅಳೆಯಬಾರದು ಚುನಾವಣಾ ಪ್ರಚಾರವಾನ್ನು ಅಬ್ಬರದಿಂದ ಮಾಡಬೇಕು ಎಂಬ ನಿಯವಮೇನೂ ಇಲ್ಲ. ಎಲ್ಲರನ್ನೂ ಸ್ಪಂದಿಸಬೇಕು ಎಂಬ ಜವಾಬ್ದಾರಿಯೂ ಇರಲಾರದು ಯಾಕೆಂದರೆ ತಾನು ಮಾಡಿದ ಸೇವೆ ಇದೆಯಲ್ಲ ಅದು ತನ್ನ ಆಯ್ಕೆಯನ್ನು ನಿರ್ಧರಿಸುತ್ತದೆ. ಹಿಂದೆ ಆದ ಅಂದರೆ ಕಳೆದ 20 ವರ್ಷಗಳ ಹಿಂದಿನ ಸಾಹಿತ್ಯ ಪರಿಷತ್‌ನ ಚುನಾವಣೆ ಇಷ್ಟೊಂದು ಅಬ್ಬರದಲ್ಲಿ ಇರುತ್ತಿರಲಿಲ್ಲ ಉತ್ತಮ ಸಾಹಿತಿ ಯನ್ನು ಆಯ್ಕೆ ಮಾಡುತ್ತಿದ್ದರು. ಅದೇ ಜಮಾನ ಈಗ ಬರಬೇಕಿದೆ ಆದರೆ ಈಗ ಅದರ ರೂಪವನ್ನೇ ಬದಲಾವಣೆ ಮಾಡಿದ್ದಾರೆ, ಯಾಕೆಂದರೆ ಇಂದು ಸಾಹಿತ್ಯ ಪರಿಷತ್‌ನ ಚುನಾವಣೆಗೆ ಸ್ಪರ್ಧಿಸುವವರು ಸಾಹಿತಿಗಳು ಕಡಿಮೆ ಇದ್ದಾರೆ. ಅವರ ಸೇವೆಯನ್ನು ಗಮನಿಸಿದರೆ ಯಾಕೋ ಸಾಹಿತ್ಯ ಪರಿಷತ್‌ಗೆ ಅವರು ಸೂಕ್ತರಲ್ಲ ಎನಿಸುತ್ತದೆ.

ಒಬ್ಬ ಅಧಿಕಾರಿ ಸೇವೆಯಿಂದ ನಿವೃತ್ತರಾಗುತ್ತಿದ್ದಂತೆ ಹಣಬಲದಿಂದ ಸಾಹಿತ್ಯ ಪರಿಷತ್ ಚುನಾವಣಗೆ ಸ್ಪರ್ಧಿಸಿ ಗೆಲ್ಲುತ್ತಾನೆ




ಎಂದರೆ ಅದು ಏನನ್ನ ಸೂಚಿಸುತ್ತದೆ? ಹಾಗಾಗಿಯೇ ಸಾಹಿತ್ಯ ಪರಿಷತ್ ಅಧ್ಯಕ್ಷರ ಅವಧಿ ಈಗ ವಿಸ್ತರಣೆಯಾಗಿದೆ. ಅಲ್ಲಿ ಸಾಹಿತ್ಯಕ್ಕಿಂತ ಹೆಚ್ಚಾಗಿ ಅಧಿಕಾರ ಮತ್ತು ಕಾರ್ಯಕ್ರಮಗಳೇ ಹೆಚ್ಚು ನಡೆದವೇ ವಿನಹ ಬೇರೇ ಏನು ಆಗಲಿಲ್ಲ ಎನ್ನುವುದು ಬೇರೆ ಮಾತು..

ಈಗಲೂ ಕೂಡ ಮತ್ತೊಬ್ಬ ನಿವೃತ್ತ ಅಧಿಕಾರಿಯೊಬ್ಬರು ಚುನಾವಣೆಗೆ ಸ್ಪರ್ಧಿಸಿದ್ದಾರೆ ಇವರ ಹಿಂದೆ ಹಣಬಲ ಜಾತಿ ಮತ್ತು ರಾಜಕಾರಣಿಗಳ ಮೂಲಕ ಸದಸ್ಯರನ್ನು ಮನವೊಲಿಸುವ ಕೆಲಸವೂ ನಡೆಯುತ್ತಿದೆ. ಆ ಅಧಿಕಾರಿಗೆ ಯಾವುದೇ ಸಾಹಿತ್ಯದ ಗಂಧವಿಲ್ಲ ಬದಲಾಗಿ ಹುಚ್ಚು ಮನಸ್ಸಿನ ವ್ಯಕ್ತಿ ಎನ್ನುವುದು ಬೇರೆ ಮಾತು. ಅಂತಹವರು ಸಾಹಿತ್ಯದ ಸೊಗಸಿನ ಹೂವಿನ ಕಂಪಿಗೆ ಯಾವ ಗಂಧ ಲೇಪನ ಮಾಡುತ್ತಾರೆ. ಬದಲಾಗಿ ಹಣದ ರಾಜಕಾರಣದ ದಂಧೆಯ ಕೆಲಸ ಮಾಡಿಯಾರು ಎನ್ನುವುದು ಬೇರೆ ಹೇಳಬೇಕಿಲ್ಲ. ಹಾಗಾಗಿ ಸಾಹಿತಿಗಳಿಗೆ ಕನ್ನಡ ಚಳವಳಿಗಾರರ ಮೇಲೆ ಜವಾಬ್ದಾರಿ ಇದೆ ಅದನ್ನು ಅರೆತು ಸಾಹಿತ್ಯ ಮತ್ತು ಚಳವಳಿಯ ನಿಜವಾದ ಸೇವಕನಿಗೆ ಅವಕಾಶ ನೀಡಿ. ಸಾಹಿತ್ಯ ಪರಿಷತ್ ಜಾತಿ.ರಾಜಕಾರಣದಿಂದ ದೂರವಾಗಲಿ ಎಂದು ಪಣತೊಡಬೇಕು.

ಇಲ್ಲಿ ಇನ್ನೊಂದು ಮಾತನ್ನು ಈ ಸಂದರ್ಭದಲ್ಲಿ ಹೇಳಲೇ ಬೇಕಾಗುತ್ತದೆ ಇದುವರೆಗೂ ಸಾಹಿತ್ಯ ಪರಿಷತ್‌ಗೆ ಮಹಿಳಾ ಸಾಹಿತಿಗಳು ಅಧ್ಯಕ್ಷರಾಗಿಲ್ಲ, ಹಾಗಾಗಿ ಮಹಿಳೆಯರಿಗೂ ಅವಕಾಶ ನೀಡಬೇಕು. ಯಾಕೆಂದರೆ ಹಲವಾರು ಸಾಹಿತಿಗಳಿದ್ದಾರೆ. ಒಳ್ಳೆಯ ಅಭಿರುಚಿಯುಳ್ಳವರಿದ್ದಾರೆ. ಅಂತವರಿಗೆ ಅವಕಾಶ ನೀಡಿ. ಒಮ್ಮೆ ಅವರ ಆಡಳಿತ ಮತ್ತು ಸಾಹಿತ್ಯ ಮತ್ತು ಸಾಂಸ್ಕೃತಿಕವಾಗಿ ಮೇಳೈಸಲು ಇಂತ ಅವಕಾಶ ನೀಡುವ ಸಂದರ್ಭವೂ ಇದೆ. ಹಾಗಾಗಿ ಕಸಾಪ ಸದಸ್ಯರು ಒಮ್ಮೆ ಯೋಚಿಸಿ ಯಾರಾದರೂ ಆಗಲಿ ಒಳ್ಳೆಯ ಮಹಿಳಾ ಸಾಹಿತಿಗೆ ಅವಕಾಶ ನೀಡಿ. ಹಾಗಾಂತ ಸಾಹಿತ್ಯದ ಗಂಧವೇ ಗೊತ್ತಿಲ್ಲದೆ ಬರುವವರಿಗೆ ಖಂಡಿತಾ ಅವಕಾಶ ಮಾಡಿಕೊಡಬೇಡಿ.

ಯಾಕೆಂದರೆ, ಕಸಾಪ ಪುರುಷ ಪ್ರಧಾನ ವ್ಯವಸ್ಥೆಯಿಂದ ಹೊರಬಂದಿಲ್ಲ ಎಂಬ ದೂರುಗಳು ಮೊದಲಿನಿಂದಲೂ ಕೇಳಿಬರುತ್ತಿವೆ. ಕಾವ್ಯ, ಗದ್ಯ, ಕಥೆ, ಕಾದಂಬರಿ, ಪ್ರಬಂಧ ಹೀಗೆ ಸಾಹಿತ್ಯದ ಎಲ್ಲಾ ಪ್ರಕಾರಗಳಲ್ಲೂ ತುಂಬಾ ಒಳ್ಳೆಯ ಮತ್ತು ಗಟ್ಟಿ ಸಾಹಿತ್ಯವನ್ನು ಮಹಿಳಾ ಲೇಖಕರು ಕನ್ನಡ ಸಾಹಿತ್ಯ ಜಗತ್ತಿಗೆ ನೀಡಿದ್ದಾರೆ. ವಚನ ಸಾಹಿತ್ಯದಿಂದಿಡಿದು ನವ್ಯ ಬಂಡಾಯ ದಲಿತ ಸಾಹಿತ್ಯದವರೆಗೂ ಕನ್ನಡ ಸಾಹಿತ್ಯ ಲೋಕದಲ್ಲಿ ಮಹಿಳೆಯರು ಸಾಕಷ್ಟು ಸಾಹಿತ್ಯ ಕೃಷಿ ಮಾಡಿದ್ದಾರೆ. ಮಹಿಳಾ ಸಾಹಿತಿಗಳು ಉತ್ತಮ ಸಂಘಟಕರು. ಹೀಗಾಗಿ, ಈ ಬಾರಿ ಕಸಾಪ ಅಧ್ಯಕ್ಷರಾಗಿ ಮಹಿಳೆಯೊಬ್ಬರು ಆಯ್ಕೆಯಾಗಬೇಕಾಗಿರುವುದು ಅವಶ್ಯಕವಾಗಿದೆ.

ಸಾಹಿತ್ಯ ಪರಿಷತ್‌ಗೆ ಆಗಬೇಕಾದ ಸಾಕಷ್ಟು ಕೆಲಸಗಳಿವೆ ಅಂತ ನೂರಾರು ಕೆಲಸಗಳನ್ನು ನಿರ್ವಹಿಸುವ ಉತ್ತಮ ಸಾಹಿತ್ಯ ಸಂಘಟಕ, ಕನ್ನಡ ಚಳವಳಿ ಸಂಘಟಕನೊಬ್ಬನ್ನು ಆರಿಸಿದರೆ ಅವರು,ಕನ್ನಡ ನಾಡು-ನುಡಿ, ನೆಲ-ಜಲ, ಸಂಸ್ಕೃತಿ, ಪುಸ್ತಕ ಪ್ರಕಟಣೆ, ಸಾಹಿತ್ಯದ ಉಳಿವು ಹಾಗೂ ಕನ್ನಡತನವನ್ನು ಸಾಕಾರಗೊಳಿಸುವ ಮೂಲ ಉದ್ದೇಶಗಳೊಂದಿಗೆ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಇಚ್ಛಾಶಕ್ತಿಯೊಂದಿಗೆ ಕಸಾಪ ಆರಂಭವಾಯಿತು. ರಾಜ್ಯಾಧ್ಯಕ್ಷರಾಗುವವರ ಮುಂದೆ ಸಾಕಷ್ಟು ಸವಾಲುಗಳಿವೆ ಮತ್ತು ಈ ಸವಾಲುಗಳನ್ನು ಎದುರಿಸಿ, ಪರಿಹಾರಗಳನ್ನು ಕಂಡುಕೊಂಡು, ಸರ್ಕಾರ ಮತ್ತು ಸಾಹಿತ್ಯ ಪರಿಷತ್ತಿನ ಮಧ್ಯೆ ಉತ್ತಮ ಬಾಂಧವ್ಯ ಇಟ್ಟುಕೊಂಡು ಕನ್ನಡದ ಕೆಲಸವನ್ನು ನಿಸ್ವಾರ್ಥ ಮನೋಭಾವದಿಂದ ಮಾಡುವ, ಕರ್ನಾಟಕದ ಸರ್ವಾಂಗೀಣ ಅಭಿವೃದ್ಧಿ ಸಾಧಿಸುವ ಹಂಬಲವಿರುವ, ನಿಸ್ವಾರ್ಥ ನಾಯಕನೊಬ್ಬನ ಅಗತ್ಯ ಕನ್ನಡ ಸಾಹಿತ್ಯ ಪರಿಷತ್ತಿಗೆ ಇಂದು ಅತ್ಯಗತ್ಯವಾಗಿ ಬೇಕಾಗಿದೆ. ಕಸಾಪಗೆ ಇಂದು ಬೇಕಾಗಿರುವುದು ಗಟ್ಟಿ ಮನಸ್ಸಿನ, ವಿಶಾಲ ಮನೋಭಾವದ ನಾಯಕತ್ವ. ರಾಜ್ಯಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸುವ ಆಕಾಂಕ್ಷಿಗಳು ಈ ಅಂಶಗಳನ್ನು ಗಮನದಲ್ಲಿಟ್ಟುಕೊಳ್ಳಬೇಕಾಗಿರುವುದು ಅವಶ್ಯಕವಾಗಿದೆ.

ಕೇವಲ ಸಾಹಿತ್ಯ ಸಮ್ಮೇಳನಗಳನ್ನು ಆಯೋಜಿಸುವುದು, ದತ್ತಿ ಉಪನ್ಯಾಸಗಳನ್ನು ಏರ್ಪಡಿಸುವುದು, ದತ್ತಿ ಪ್ರಶಸ್ತಿಗಳನ್ನು ಘೋಷಿಸುವುದಕ್ಕಷ್ಟೆ ಕಸಾಪ ಸೀಮಿತವಾಗಬಾರದು. ಕನ್ನಡ ಸಾಹಿತ್ಯ ಪರಿಷತ್ತು ಬದಲಾಗಿರುವ ಸನ್ನಿವೇಶಕ್ಕೆ ತಕ್ಕಂತೆ ಸಾಕಷ್ಟು ಬದಲಾವಣೆಗಳಿಗೆ ಮೈ ಒಡ್ಡಿಕೊಳ್ಳಬೇಕಾಗಿದೆ. ಬದಲಾವಣೆ ಜಗದ ನಿಯಮ. ಇದಕ್ಕೆ ವಿರುದ್ಧವಾಗಿ ಜಡ್ಡುಗಟ್ಟಿದ ಯಾವ ಸಂಸ್ಥೆಯು ಹೆಚ್ಚು ದಿನ ಯಶಸ್ವಿಯಾಗಲು ಸಾಧ್ಯವಿಲ್ಲ. ಪ್ರಾದೇಶಿಕ ಅಸಮಾನತೆಯತ್ತ ಕೂಡಾ ಕಸಾಪ ಗಮನಹರಿಸಬೇಕಾಗಿದೆ.

ಕರ್ನಾಟಕದ ಏಕೀಕರಣವಾಗಿ ದಶಕಗಳೇ ಕಳೆದರೂ ಏಕೀಕರಣದ ಉದ್ದೇಶ ಮತ್ತು ಆಶಯ ಇನ್ನೂ ಸಂಪೂರ್ಣವಾಗಿ ಈಡೇರಿಲ್ಲ. ಮಹಾರಾಷ್ಟ್ರ ಮತ್ತು ಕೇರಳ ರಾಜ್ಯಗಳ ಗಡಿ ವಿವಾದ ಇನ್ನೂ ಬಗೆಹರಿದಿಲ್ಲ. ಕರ್ನಾಟಕದ ಗಡಿ ವಿವಾದ ಕುರಿತು ರಚಿಸಲಾದ ಮಹಾಜನ್ ವರದಿ ಇದುವರೆಗೂ ಜಾರಿಗೆ ಬಂದಿಲ್ಲ. ಈ ವರದಿಯ ಪ್ರಕಾರ ಮಹಾರಾಷ್ಟ್ರದ ಸಂಪೂರ್ಣ ಅಕ್ಕಲಕೋಟೆ ತಾಲ್ಲೂಕು ಮತ್ತು ಇತರೆ 247 ಹಳ್ಳಿಗಳು, ಕಾಸರಗೂಡು ಸೇರಿದಂತೆ ಕೇರಳದ ಚಂದ್ರಗಿರಿ ನದಿಯ ಉತ್ತರ ಭಾಗ ಕರ್ನಾಟಕಕ್ಕೆ ಸೇರಬೇಕಾಗಿದೆ. ಬಹುದಿನಗಳ ಬೇಡಿಕೆಯಾದ ತುಮಕೂರು ಗಡಿ ಭಾಗವಾದ ಮಡಕಶಿರಾ ಹಾಗೂ ಚಾಮರಾಜನಗರ ಜಿಲ್ಲೆಯ ಗಡಿ ಭಾಗವಾದ ತಾಳವಾಡಿ ಫಿರ್ಕಾ ಇದುವರೆಗೂ ಕರ್ನಾಟಕಕ್ಕೆ ಸೇರಲಿಲ್ಲ. ಬೆಳಗಾವಿ ಸಮಸ್ಯೆ ದಿನ ಕಳೆದಂತೆ ಹೆಚ್ಚು ಜಟಿಲವಾಗುತ್ತಿದೆ. ಬೆಂಗಳೂರು ನಗರ ಕೆಜಿಫ್, ಚಾಮರಾಜನಗರ ಜಿಲ್ಲೆ ಮತ್ತು ಚಿಕ್ಕಮಗಳೂರಿನ ಕಾಫಿ ತೋಟಗಳಲ್ಲಿ ತಮಿಳರ ಸಂಖ್ಯೆ ಪ್ರಬಲವಾಗುತ್ತಿದ್ದರೆ, ಕೋಲಾರ, ತುಮಕೂರಿನ ಗಡಿ ಪ್ರದೇಶಗಳೂ, ಬಳ್ಳಾರಿ, ರಾಯಚೂರು, ಜಿಲ್ಲೆಗಳಲ್ಲಿ ತೆಲುಗರ ಪ್ರಾಬಲ್ಯ ಹೆಚ್ಚುತ್ತಿದೆ. ಬೆಳಗಾವಿಯಲ್ಲಿ ಮರಾಠಿಗರು ನೆಲೆ ಕಂಡುಕೊಂಡಿದ್ದಾರೆ. ಮೈಸೂರು ಮತ್ತು ಕೊಡಗು ಜಿಲ್ಲೆಯ ಗಡಿ ಭಾಗಗಳಲ್ಲಿ ಕೇರಳಿಗರು ಹೆಚ್ಚು ಸಂಖ್ಯೆಯಲ್ಲಿ ನೆಲೆ ಕಂಡುಕೊಳ್ಳುತ್ತಿದ್ದಾರೆ.

ನಮ್ಮ ಯುವಜನರಿಗೆ ಉದ್ಯೋಗದ ಭರವಸೆ ಒದಗಿಸುವ ಉದ್ಯೋಗ ಪೂರಕ ಪರೀಕ್ಷೆಗಳು ಇನ್ನೂ ಸಂಪೂರ್ಣವಾಗಿ ಕನ್ನಡ ಮಾಧ್ಯಮದಲ್ಲಿ ನಡೆಯುತ್ತಿಲ್ಲ. ರಾಜ್ಯದ ಒಟ್ಟಾರೆ ಅಭಿವೃದ್ಧಿಯಲ್ಲಿ ಪ್ರಾದೇಶಿಕ ಅಸಮಾನತೆಯ ಕೂಗು ಇನ್ನೂ ಮುಂದುವರಿದಿದೆ. ಅಭಿವೃದ್ಧಿಯ ಅಸಮತೋಲನದ ವಿರುದ್ಧ ಕಸಾಪ ಹೋರಾಟ ನಡೆಸಬೇಕಾಗಿದೆ.

ಪ್ರತ್ಯೇಕ ರಾಜ್ಯದ ಕೂಗು ಆಗಾಗ್ಗೆ ಕೇಳಿ ಬರುತ್ತಿದೆ. ಇದು ಬೃಹತ್ತಾಗಿ ಬೆಳೆಯುವ ಮುನ್ನ ಅಂತಹ ಅಸಮಾಧಾನಗಳನ್ನು ಸರಿಪಡಿಸಲು ಮುಂದಾಗಬೇಕಾಗಿದೆ. ಶಿಕ್ಷಣದಲ್ಲಿ ಕನ್ನಡದ ಸ್ಥಾನಮಾನ ಇನ್ನೂ ಚರ್ಚಿತ ವಸ್ತುವಾಗಿಯೇ ಉಳಿದಿದ್ದು ಮಾತೃಭಾಷಾ ಶಿಕ್ಷಣ ಮಾಧ್ಯಾಮವನ್ನು ಜಾರಿಗೆ ತರಲು ಶ್ರಮಿಸಬೇಕಾಗಿದೆ.

ಕನ್ನಡ ವಿಶ್ವವಿದ್ಯಾನಿಲಯದ ನೋವು-ನಲಿವುಗಳಿಗೂ ಸ್ಪಂದಿಸಬೇಕಾಗಿದೆ. ಮಾಹಿತಿ ತಂತ್ರಜ್ಞಾನ ಕ್ಷೇತ್ರ ರಾಜ್ಯ ಮತ್ತು ದೇಶದಲ್ಲಿ ಉತ್ತುಂಗ ಸ್ಥಿತಿಯಲ್ಲಿದ್ದರೂ ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಕನ್ನಡ ಭಾಷೆಗೆ ಸಂಬಂಧಿಸಿದಂತೆ ತೃಪ್ತಿಕರವಾದ ಕೆಲಸ ಇನ್ನೂ ನಡೆದಿಲ್ಲ. ಕನ್ನಡವನ್ನು ತಂತ್ರಜ್ಞಾನ ಭಾಷೆಯನ್ನಾಗಿಸುವ ನಿಟ್ಟಿನಲ್ಲೂ ಸಾಕಷ್ಟು ಕೆಲಸ ಆಗಬೇಕಾಗಿದೆ. ರಾಜಧಾನಿ ಬೆಂಗಳೂರನ್ನು ಸಿಲಿಕಾನ್ ಸಿಟಿ ಎಂದು ಕರೆದರೂ ಈ ಮಾಹಿತಿ ತಂತ್ರಜ್ಞಾನ ಸಂಸ್ಥೆಗಳಿಂದ ಕನ್ನಡ ಹಾಗೂ ಕನ್ನಡಿಗರಿಗೆ ಆಗಿರುವ ಅನುಕೂಲ ಅಷ್ಟರಲ್ಲೇ ಇದೆ. ಈ ದಿಕ್ಕಿನಲ್ಲಿ ನೋಡುವುದಾದರೆ ಕನ್ನಡ ತಂತ್ರಾಂಶದಲ್ಲಿಯೂ ಸಾಕಷ್ಟು ಪ್ರಗತಿಯಾಗಬೇಕಾಗಿದೆ. ಭಾಷಾಭಿಮಾನದ ವಿಷಯದಲ್ಲಿ ಬದ್ಧತೆ ಇನ್ನೂ ಕನಸಿನ ಮಾತೇ ಆಗಿದೆ. ಕನ್ನಡ ಚಲನಚಿತ್ರ ರಂಗ ಕೂಡಾ ಸಮಸ್ಯೆಗಳ ಸುಳಿಯಿಂದ ಹೊರಬಂದಿಲ್ಲ. ನೀರಾವರಿ ಸಮಸ್ಯೆಗಳು ದೂರವಾಗಿಲ್ಲ.

ಶಾಸ್ತ್ರೀಯ ಸ್ಥಾನಮಾನದ ಬಹುಮುಖ್ಯ ಉದ್ದೇಶ ಆ ಭಾಷೆಯ ಪಾರಂಪರಿಕ ಅಂತಃಸತ್ವ ಎತ್ತಿ ನಿಲ್ಲಿಸುವುದು ಮತ್ತು ಹೊಸ ತಲೆಮಾರಿಗೆ ಅದನ್ನು ಮುಟ್ಟಿಸುವುದು. ಆದರೆ, ಕನ್ನಡ ಭಾಷೆಗೆ ಶಾಸ್ತ್ರೀಯ ಸ್ಥಾನಮಾನ ದೊರೆತು ವರ್ಷಗಳೇ ಕಳೆದರೂ ಇದುವರೆಗೂ ಈ ನಿಟ್ಟಿನಲ್ಲಿ ಅಂತಹ ಉತ್ತಮ ಪ್ರಗತಿಯೇನೂ ಆಗಿಲ್ಲ. ಕನ್ನಡದ ಕುರಿತಾದ ನಿರ್ಲಕ್ಷ್ಯ ಹಾಗೂ ಪೂರ್ವಾಗ್ರಹಗಳು ಶಾಸ್ತ್ರೀಯ ಕನ್ನಡವನ್ನು ಬಡವಾಗಿಸಿವೆ. ಅನೇಕ ಕನ್ನಡ ಮಾಧ್ಯಮದ ಸರ್ಕಾರಿ ಪ್ರಾಥಮಿಕ ಶಾಲೆಗಳನ್ನು ರಾಜ್ಯದಲ್ಲಿ ವಿವಿಧ ಕಾರಣಗಳಿಂದಾಗಿ ಮುಚ್ಚಲಾಗುತ್ತಿದೆ. ವಿಶ್ವವಿದ್ಯಾನಿಲಯಗಳಲ್ಲಿ ಅಧ್ಯಯನ ಮಾಡುವ ಕನ್ನಡ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗುತ್ತಿದೆ. ಈ ಎಲ್ಲಾ ಸಮಸ್ಯೆಗಳಿಗೆ ಕಸಾಪ ಧ್ವನಿಯಾಗಬೇಕಾಗಿದೆ. ತಮ್ಮ ನಾಡಿನಲ್ಲಿಯೇ ಕನ್ನಡಿಗರು ಎರಡನೇ ದರ್ಜೆಯ ಪ್ರಜೆಗಳಂತೆ ಜೀವನ ಸಾಗಿಸುವುದು ಎಷ್ಟು ಸರಿ? ಕರ್ನಾಟಕದಲ್ಲಿ ಮೊದಲು ಕನ್ನಡ, ಕನ್ನಡಿಗರು ಗಟ್ಟಿಯಾಗಿ ನೆಲೆ ನಿಲ್ಲಬೇಕಾಗಿದೆ.





ಪ್ರಧಾನ ಸಂಪಾದಕ
ತುರುವನೂರು ಮಂಜುನಾಥ

ಪುಟ ವಿನ್ಯಾಸ
ಸೂರ್ಯಕುಮಾರ್ ಜಿ.ಎನ್.




# ಕನ್ನಡ ಸಾಂಸ್ಕೃತಿಕ ವೈಭವದ ಜೊತೆಗೆ ಸಮಸ್ಯೆಗೂ ಆದ್ಯತೆ ನೀಡಿ...

'ಕನ್ನಡಕ್ಕಾಗಿ ನಾವು' ಎಂಬ ಅಭಿಯಾನವೂ ಈ ಬಾರಿ ವಿಶೇಷವಾಗಿ ಆಚರಿಸಲಾಗುತ್ತಿದೆ ಸಾಮೂಹಿಕ ಕನ್ನಡ ಗೀತೆಗಳ ಗಾಯನದ ಮೂಲಕ ಎಲ್ಲೆಲ್ಲೂ ಕನ್ನಡದ ಡಿಂಡಿಮವ ಪಸರಿಸಲಾಗುತ್ತಿದೆ ಇಂತ ಕನ್ನಡತನವನ್ನು ಇಂತ ಸಾಂಸ್ಕೃತಿಕ ವೈಭವವನ್ನು ಆಚರಿಸಲು ಹೊರಟಿರುವ ಸರ್ಕಾರಕ್ಕೆ ನಿಜಕ್ಕೂ ಧನ್ಯವಾದಗಳು.

ಕೇವಲ ಇಂತ ಸಾಂಸ್ಕೃತಿಕ ವಾತಾವರಣವನ್ನು ಸೃಷ್ಟಿಸದರೆ ಕನ್ನಡ ಉದ್ಧಾರವಾಗುವುದಿಲ್ಲ ಕನ್ನಡತನ ಎಲ್ಲೆಡೆ ಪಸರಿಸಬೇಕು ಹಾಗೆ ವಾತವರಣ ನಿರ್ಮಾಣಮಾಡಬೇಕು ಅಂತ ವಾವಾವರಣವನ್ನು ಸೃಷ್ಟಿಸಲೇ ಈ ಕಾರ್ಯಕ್ರಮ ಎನ್ನುವುದು ಸರ್ಕಾರದ ನಿಲುವು ನಿಜ ಅದನ್ನು ನಾವು ನಂಬಲೇ ಬೇಕು ಸಚಿವ ಸುನಿಲ್ ಕುಮಾರ್ ಇಂತದ್ದೊಂದು ಸಾಂಸ್ಕೃತಿಕ ವೈಭವ ಪರಂಪರೆಗೆ ನಾಂಧಿ ಹಾಡುತ್ತಿದ್ದಾರೆ ಅವರ ಕ್ರಿಯಾಶೀಲತೆಗೆ ಇದೊಂದು ಉದಾಹರಣೆಯೂ ಎಂದು ಹೇಳಬೇಕು .

ಎಲ್ಲಾ 31 ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯತ್ ಸಿಇಒಗಳ ಜತೆ ಚರ್ಚಿಸಿ ಇದಕ್ಕಾಗಿ ಅಗತ್ಯ ಸಿದ್ಧತೆ ಮಾಡಿಕೊಳ್ಳಲಾಗಿದೆ. ಸುಮಾರು 1,000 ಕ್ಕೂ ಹೆಚ್ಚು ಸ್ಥಳಗಳಲ್ಲಿ ಗೀತ ಗಾಯನ ಕಾರ್ಯಕ್ರಮ ನಡೆಯಲಿದೆ, ಕನ್ನಡ ನಾಡಿನ ಎಲ್ಲ ವರ್ಗದ ಜನರೂ ಭಾಗವಹಿಸುತ್ತಾರೆ. ದೇಶದ ಇತರ ರಾಜ್ಯಗಳು ಮತ್ತು ವಿದೇಶಗಳಲ್ಲಿ ನೆಲೆಸಿರುವ ಕನ್ನಡಿಗರು, ಕನ್ನಡ ಕೂಟಗಳು ಸಹ ಕನ್ನಡ ಗೀತೆಗಳನ್ನು ಹಾಡಲಿದ್ದಾರೆ. ಇವರಿಗಾಗಿ ಒದಗಿಸಿರುವ ನಿರ್ದಿಷ್ಟ ಜಾಲತಾಣ ಸಂಪರ್ಕದ ಮೂಲಕ ಒಟ್ಟಿಗೆ ಹಾಡುವ ತಾಂತ್ರಿಕ ಸಂಯೋಜನೆ ರೂಪಿಸಲಾಗಿದೆ ನಾಡಿನ ಎಲ್ಲ ಸರ್ಕಾರಿ ಕಚೇರಿಗಳು, ಶಾಲಾ-ಕಾಲೇಜುಗಳ ಆವರಣ, ವಿಶ್ವವಿದ್ಯಾಲಯಗಳ ಆವರಣ, ತಾಂತ್ರಿಕ ಮತ್ತು ವೈದ್ಯಕೀಯ ವಿಶ್ವವಿದ್ಯಾಲಯಗಳ ಆವರಣ, ಮೈಸೂರು ಅರಮನೆ ಮುಂಭಾಗ, ಹಂಪಿಯ ಕಲ್ಲಿನ ರಥ, ಮಹಾನವಮಿ ದಿಬ್ಬ ಸೇರಿ ವಿವಿಧ ಜಿಲ್ಲೆಗಳ ಪ್ರಸಿದ್ಧ ಸ್ಮಾರಕಗಳ ಮುಂದೆ ಒಟ್ಟಿಗೆ ನಿಂತು ಗಾಯನ ಮಾಡಲಾಗುತ್ತದೆ ಎಂದರು.ಅಲ್ಲದೆ, ರಾಜ್ಯದ ಎಲ್ಲ ದೊಡ್ಡ ಮಾರುಕಟ್ಟೆಗಳು, ಆಟೋರಿಕ್ಷಾ ನಿಲ್ದಾಣಗಳು, ಕೈಗಾರಿಕಾ ಪ್ರದೇಶಗಳು ಮತ್ತು ಜನನಿಬಿಡ ಸ್ಥಳಗಳಲ್ಲಿ ಗೀತ ಗಾಯನ ನಡೆಯಲಿದೆ. ದೊಡ್ಡ ಸಂಖ್ಯೆಯ ಜನ ಸೇರುವ ಸ್ಥಳಗಳಲ್ಲಿ ಗೀತೆಗಳ ಧಾಟಿಯನ್ನು ಕಲಿಸಲು ಪರಿಣಿತ ಸಂಗೀತ ಗಾಯಕರನ್ನು ನಿಯೋಜಿಸಲಾಗಿದೆ .

ಆದರೆ ಇಷ್ಟಕ್ಕೆ ಕನ್ನಡಿಗರು ತೃಪ್ತಿ ಪಡಬೇಕಿಲ್ಲ ಇದೊಂದು ಸಾಂಸ್ಕೃತಿಕ ವೈಭವ ನವೆಂಬರ್ ತಿಂಗಳಲ್ಲಿ ಸಹಜವಾಗಿಯೇ ಆಗುವ ವೈಭವೋಪೇತ ಕಾರ್ಯಕ್ರಮವಷ್ಟೆ ..ಇದಕ್ಕೆ ಸರ್ಕಾರ ಸೀಮಿತವಾಗಬಾರದು ಈಗಾಗಲೇ ಗಡಿ ಪ್ರದೇಶಗಳಲ್ಲಿ ಕನ್ನಡದ ಬಗ್ಗೆ ನಿರ್ಲಕ್ಷ್ಯಮನೋಭಾವ ತಾಳಲಾಗುತ್ತಿದೆ ಇಂತ ಪ್ರದೇಶಗಳಲಿ ಕನ್ನಡ ಅಭಿವೃದ್ಧಿಬಗ್ಗೆಯೂ ಎಚ್ಚರ ವಹಿಸಬೇಕಿದೆ ವಿಶೇಷವಾಗಿ ಮಹಾರಾಷ್ಟ್ರದ ಗಡಿ ಭಾಗದಲ್ಲಿ ಕನ್ನಡದ ಹಳ್ಳಿಗಳು ಅಭಿವೃದ್ಧಿಯಿಂದ ವಂಚಿತವಾಗಿರುವುದು ಕಳವಳ ಉಂಟುಮಾಡುವ ಸಂಗತಿ. ಗಡಿಭಾಗದಲ್ಲಿ ಕನ್ನಡದ ವಾತಾವರಣವುಎದ್ದು ಕಾಣುವಂತೆ ಮಾಡಲು ಸರ್ಕಾರಕ್ಕೆ ಇನ್ನೂ ಸಾಧ್ಯವಾಗದಿರುವುದು ವಿಷಾದದ ಸಂಗತಿಯಾಗಿದೆ. ಅಲ್ಲದೆ ಪದೆ ಪದೇಎಂಇಎಸ್ ಉಪಟಳ ಅಲ್ಲಿಯ ನಿರಂತರ ಸಮಸ್ಯೆಯಾಗಿದೆ ಇಂತ ಪ್ರದೇಶದಲ್ಲಿ ಕನ್ನಡ ಅಭಿವೃದ್ಧಿಮತ್ತು ಶಾಶ್ವತ ನೆಲೆಕಂಡುಕೊಳ್ಳಬೇಕಿದೆ ಹಾಗೆಯೇ ,ಪ್ರತ್ಯೇಕ ರಾಜ್ಯದ ಕೂಗು ಆಗಾಗ್ಗೆ ಕೇಳಿ ಬರುತ್ತಿದೆ. ಇದು ಬೃಹತ್ತಾಗಿ ಬೆಳೆಯುವ ಮುನ್ನ ಅಂತಹ ಅಸಮಾಧಾನಗಳನ್ನು ಸರಿಪಡಿಸಲು ಮುಂದಾಗಬೇಕಾಗಿದೆ. ಶಿಕ್ಷಣದಲ್ಲಿ ಕನ್ನಡದ ಸ್ಥಾನಮಾನ ಇನ್ನೂ ಚರ್ಚಿತ ವಸ್ತುವಾಗಿಯೇ ಉಳಿದಿದ್ದು ಮಾತೃಭಾಷಾ ಶಿಕ್ಷಣ ಮಾಧ್ಯಾಮವನ್ನು ಜಾರಿಗೆ ತರಲು ಶ್ರಮಿಸ ಬೇಕಾಗಿದೆ.

ಮಾಹಿತಿ ತಂತ್ರಜ್ಞಾನ ಕ್ಷೇತ್ರ ರಾಜ್ಯ ಮತ್ತು ದೇಶದಲ್ಲಿ ಉತ್ತುಂಗ ಸ್ಥಿತಿಯಲ್ಲಿದ್ದರೂ ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಕನ್ನಡ ಭಾಷೆಗೆ ಸಂಬಂಧಿಸಿದಂತೆ ತೃಪ್ತಿಕರವಾದ ಕೆಲಸ ಇನ್ನೂ ನಡೆದಿಲ್ಲ. ಕನ್ನಡವನ್ನು ತಂತ್ರಜ್ಞಾನ ಭಾಷೆಯನ್ನಾಗಿಸುವ ನಿಟ್ಟಿನಲ್ಲೂ ಸಾಕಷ್ಟು ಕೆಲಸ ಆಗಬೇಕಾಗಿದೆ. ರಾಜಧಾನಿ ಬೆಂಗಳೂರನ್ನು ಸಿಲಿಕಾನ್ ಸಿಟಿ ಎಂದು ಕರೆದರೂ ಈ ಮಾಹಿತಿ ತಂತ್ರಜ್ಞಾನ ಸಂಸ್ಥೆಗಳಿಂದ ಕನ್ನಡ ಹಾಗೂ ಕನ್ನಡಿಗರಿಗೆ ಆಗಿರುವ ಅನುಕೂಲ ಅಷ್ಟರಲ್ಲೇ ಇದೆ. ಈ ದಿಕ್ಕಿನಲ್ಲಿ ನೋಡುವುದಾದರೆ ಕನ್ನಡ ತಂತ್ರಾಂಶದಲ್ಲಿಯೂ ಸಾಕಷ್ಟು ಪ್ರಗತಿಯಾಗಬೇಕಾಗಿದೆ. ಭಾಷಾಭಿಮಾನದ ವಿಷಯದಲ್ಲಿ ಬದ್ಧತೆ ಇನ್ನೂ ಕನಸಿನ ಮಾತೇ ಆಗಿದೆ. ಕನ್ನಡ ಚಲನಚಿತ್ರ ರಂಗ ಕೂಡಾ ಸಮಸ್ಯೆಗಳ ಸುಳಿಯಿಂದ ಹೊರಬಂದಿಲ್ಲ.

ಶಾಸ್ತ್ರೀಯ ಸ್ಥಾನಮಾನದ ಬಹುಮುಖ್ಯ ಉದ್ದೇಶ ಆ ಭಾಷೆಯ ಪಾರಂಪರಿಕ ಅಂತಃಸತ್ವ ಎತ್ತಿ ನಿಲ್ಲಿಸುವುದು ಮತ್ತು ಹೊಸ ತಲೆಮಾರಿಗೆ ಅದನ್ನು ಮುಟ್ಟಿಸುವುದು. ಆದರೆ, ಕನ್ನಡ ಭಾಷೆಗೆ ಶಾಸ್ತ್ರೀಯ ಸ್ಥಾನಮಾನ ದೊರೆತು ವರ್ಷಗಳೇ ಕಳೆದರೂ ಇದುವರೆಗೂ ಈ ನಿಟ್ಟಿನಲ್ಲಿ ಅಂತಹ ಉತ್ತಮ ಪ್ರಗತಿಯೇನೂ ಆಗಿಲ್ಲ.

ಕನ್ನಡದ ಕುರಿತಾದ ನಿರ್ಲಕ್ಷ್ಯ ಹಾಗೂ ಪೂರ್ವಾಗ್ರಹಗಳು ಶಾಸ್ತ್ರೀಯ ಕನ್ನಡವನ್ನು ಬಡವಾಗಿಸಿವೆ. ಅನೇಕ ಕನ್ನಡ ಮಾಧ್ಯಮದ ಸರ್ಕಾರಿ ಪ್ರಾಥಮಿಕ ಶಾಲೆಗಳನ್ನು ರಾಜ್ಯದಲ್ಲಿ ವಿವಿಧ ಕಾರಣಗಳಿಂದಾಗಿ ಮುಚ್ಚಲಾಗುತ್ತಿದೆ. ಇದರ ಬಗ್ಗೆ ಹೆಚ್ಚು ಗಮನಹರಿಸಬೇಕಿದೆ. ಇತ್ತೀಚೆಗೆ ಕಿತ್ತೂರು ಕರ್ನಾಟಕ ಎಂದು ಹೈದರಾಬಾದ್ ಕರ್ನಾಟಕವನ್ನು ಮರುನಾಮಕರಣ ಮಾಡಿದೆ

ಈಗ ಆ ಪ್ರದೇಶದ ಹೆಸರನ್ನು ನಾಡಿನ ಅಸ್ಮಿತೆಯೊಂದಿಗೆ ಜೋಡಿಸಿ, 'ಕಿತ್ತೂರು ಕರ್ನಾಟಕ' ಎಂದು ಬದಲಾವಣೆ ಮಾಡಲು ಹೊರಟಿರುವುದರಿಂದ ಜನರನ್ನು ಒಂದು ರೀತಿಯಲ್ಲಿ ಭಾವನಾತ್ಮಕವಾಗಿ ಬೆಸೆಯಲು ಸಾಧ್ಯವಾಗುವುದೇನೋ ನಿಜ. ಆದರೆ, ಬರೀ ಹೆಸರು ಬದಲಾವಣೆಯಿಂದ ಅಲ್ಲಿನ ಜನರ ಸ್ಥಿತಿಗತಿಯಲ್ಲಿ ಯಾವ ಬದಲಾವಣೆಯೂ ಆಗಲಾರದು. ಇದಕ್ಕೆ ತಕ್ಕ ಉದಾಹರಣೆ, ಹೈದರಾಬಾದ್ ಕರ್ನಾಟಕ ಪ್ರದೇಶದ ಹೆಸರು 'ಕಲ್ಯಾಣ ಕರ್ನಾಟಕ' ಎಂದು ಬದಲಾದದ್ದು. ಎರಡು ವರ್ಷಗಳಿಂದ ಆ ಪ್ರದೇಶ ಹೆಸರಿನಲ್ಲಷ್ಟೇ 'ಕಲ್ಯಾಣ'ವನ್ನು ಅಂಟಿಸಿಕೊಂಡು ಕುಳಿತಿದ್ದು, ಮರುನಾಮಕರಣದ ನಂತರವೂ ಅಲ್ಲಿ ಹೇಳಿಕೊಳ್ಳುವಂತಹ ಮಹತ್ವದ ಕಲ್ಯಾಣ ಕೆಲಸಗಳೇನೂ ಆಗಿಲ್ಲ. ಬದಲಾವಣೆ ಎನ್ನುವುದು ಅಭಿವೃದ್ಧಿ ಚಟುವಟಿಕೆಗಳಲ್ಲಿ ವ್ಯಕ್ತವಾಗದೇ ಹೋದಾಗ ಅಂತಹ ಕೆಲಸ ದೊಡ್ಡಸ್ತಿಕೆ ಪ್ರದರ್ಶನದ ಕಸರತ್ತಾಗಿ ಗೋಚರಿಸುವುದೇ ವಿನಾ ಹೆಚ್ಚಿನದೇನನ್ನೂ ಸಾಧಿಸುವುದಿಲ್ಲ. ರಾಜ್ಯದಲ್ಲಿ ಉಪಚುನಾವಣೆ ನಡೆಯುತ್ತಿರುವಾಗ 'ಕಿತ್ತೂರು ಕರ್ನಾಟಕ' ನಾಮಕರಣದ ಘೋಷಣೆ ಹೊರಬಿದ್ದಿರುವುದರ ಹಿಂದೆ ರಾಜಕೀಯ ಲೆಕ್ಕಾಚಾರವೂ ಅಡಕವಾಗಿದೆ ಎನ್ನುವ ಮಾತುಗಳಲ್ಲಿ ಕೂಡ ಹುರುಳಿಲ್ಲದೇ ಇಲ್ಲ.

ಅದರಲ್ಲೂ ತುಂಬಾ ಸೂಕ್ಷ್ಮ ಎನ್ನಬಹುದಾದ ಮಹಾರಾಷ್ಟ್ರದ ಗಡಿ ಭಾಗದಲ್ಲಿ ಕನ್ನಡದ ಹಳ್ಳಿಗಳು ಅಭಿವೃದ್ಧಿಯಿಂದ ವಂಚಿತವಾಗಿರುವುದು ಕಳವಳ ಉಂಟುಮಾಡುವ ಸಂಗತಿ. ಗಡಿಭಾಗದಲ್ಲಿ ಕನ್ನಡದ ವಾತಾವರಣವುಎದ್ದು ಕಾಣುವಂತೆ ಮಾಡಲು ಸರ್ಕಾರಕ್ಕೆ ಇನ್ನೂ ಸಾಧ್ಯವಾಗದಿರುವುದು ವಿಷಾದದ ಸಂಗತಿ. ಹೀಗಿರುವಾಗ ಕೇವಲ ಸಾಂಸ್ಕೃತಿಕ ವೈಭವದಿಂದ ಕನ್ನಡ ಅಭಿವೃದ್ಧಿಯಾಗಲಾರದು ನಿಜವಾದ ಅಭಿವೃದ್ಧಿ ಗಡಿ ಪ್ರದೇಶದಲ್ಲಿ ಆಗಬೇಕಿದೆ ಅಲ್ಲಿನ ಸಮಸ್ಯೆಗಳನ್ನು ಬಗೆಹರಿಸುವ ಶಾಶ್ವತ ನಿರ್ಧಾರಗಳನ್ನು ತಗೆದುಕೊಳ್ಳಬೇಕಿದೆ.

ನಾಡಗೀತೆ ವಿವಾದ ಇನ್ನೂ ಬಗೆಹರಿದಿಲ್ಲ ನಾಡಗೀತೆ ಎಷ್ಟು ನಿಮಿಷ ಇರಬೇಕು ಯಾರು ಸಂಯೋಜನೆ ಮಾಡಬೇಕು ಎನ್ನುವ ಕುರಿತ ವಿಷಯಕ್ಕೆ ಇನ್ನೂ ದಿಟ್ಟ ನಿಲುವನ್ನು ಪ್ರಕಟಿಸಲಾಗಿಲ್ಲ ..ಅಲ್ಲದೆ ರಾಷ್ಟ್ರಕವಿ ಬಿರುದು ಹಾಗೇಯೇ ಉಳಿದುಕೊಂಡಿದೆ ಇದರಬಗ್ಗೆಯೂ ಸರ್ಕಾರ ಮತ್ತೆ ಅದರ ಸೊಲ್ಲೆ ಎತ್ತಿಲ್ಲ ಇಂತ ಸಮಸ್ಯೆಗಳಿಗೆ ಮೊದಲುಆದ್ಯತೆ ನೀಡಬೇಕಿದೆ ಇನ್ನೂ ಇದೇ ವೇಳೆ ಕನ್ನಡ ಕಲಿಕೆ ಕಡ್ಡಾಯಗೊಳಿಸುವ ಕುರಿತು ಹೈಕೋರ್ಟ್ ಮತ್ತೊಂದು ಬಾರಿ ಯೋಚಿಸಿ ಎನ್ನುವ ಸಲಹೆ ನೀಡಿದೆ ಹೀಗಿರುವಾಗ ಕೇವಲ ಸಾಂಸ್ಕೃತಿಕ ವೈಭವವೇ ಮುಖ್ಯವಲ್ಲ ಕನ್ನಡದ ಸಮಸ್ಯೆಗಳಿಗೆ ಆದ್ಯತೆ ನೀಡಬೇಕಿದೆ. ಆ ನಿಟ್ಟಿನಲ್ಲಿ ಸಚಿವ ಸುನಿಲ್ ಕುಮಾರ್ ಯೋಚಿಸಬೇಕಿದೆ.


# ಆನ್‌ಲೈನ್ ಆಟಗಳ ರದ್ದು ಕುರಿತು ಸುದ್ದಿಗಳೇ ಸದ್ದಾಗಲಿಲ್ಲ

ಹಿಟ್ & ರನ್

ಬಹುಶಃ ಜನರಿಗೆ ಬೇಕಾದ ಅಗತ್ಯವೆನಿಸಿದ ಸುದ್ದಿಗಳು ಕೆಲವು ಬಾರಿ ಹೀಗೆ ಬಂದು ಹೋಗಿಬಿಡುತ್ತವೆ; ಹಲವಾರು ಜನರ ಮತ್ತು ಮಕ್ಕಳ ಜೀವವನ್ನೆ ಬಲಿ ತಗೆದುಕೊಂಡ ಆನ್‌ಲೈನ್ ಆಟಗಳನ್ನು ರದ್ದು ಪಡಿಸುವ ಕುರಿತು ರಾಜ್ಯ ಸರ್ಕಾರ ನಿಷೇಧ ಮಾಡಿ ಅನುಮೋದನೆ ನೀಡಿದ ಸುದ್ದಿ ಎಲ್ಲೋ ಒಂದರೆಡು ಬಾರಿ ಬಂದು ಹೋಯಿತಷ್ಟೆ.

ಆದರೆ ಟಿವಿ ಚಾನೆಲ್‌ಗಳು ಇಂತ ಸುದ್ದಿಗಳನ್ನು ಏಕೆ ವಿಶೇಷವಾಗಿ ಬಳಕೆ ಮಾಡಿಕೊಳ್ಳುವುದಿಲ್ಲ ಎನ್ನುವುದು ಎಲ್ಲರನ್ನು ಕಾಡುತ್ತಿರುವ ಪ್ರಶ್ನೆ, ಹಲವು ಬಾರಿ ಸುದ್ದಿಗಳಲ್ಲದೆ ಸುದ್ದಿಗಳನ್ನು ಇಡೀ ದಿನ ಪ್ರಸಾರ ಮಾಡುತ್ತಾರೆ, ಎಲ್ಲವೂ ಟಿಆರ್‌ಪಿಗೆ ಆದರೆ ಹೊಣೆಗಾರಿಕೆ ಎನ್ನುವ ಶಬ್ದಕ್ಕೆ ಅರ್ಥವೆಲ್ಲಿ, ಶಾಲಾ ಕಾಲೇಜುಗಳ ಆರಂಭ ಕುರಿತಂತೆ ಎರಡೆರಡು ದಿನಗಳ ಕಾಲ ಪ್ರಸಾರ ಮಾಡಿದ ಚಾನೆಲ್‌ಗಳು ಅದೇ ರೀತಿ ಆನ್‌ಲೈನ್ ಆಟಗಳ ರದ್ದು ಕುರಿತಂತೆ ಪ್ರಸಾರ ಮಾಡಬಹುದಿತ್ತು.

ಇದೊಮದು ಸಾಮಾಜಿಕ ಪಿಡುಗು ಇದ್ದ ಹಾಗೆ ಈ ಪಿಡುಗನ್ನು ಹೊಡೆದೋಡಿಸಲು ಸರ್ಕಾರವೆ ನಿರ್ಧಾರ ತಗೆದುಕೊಳ್ಳುತ್ತದೆ ಎಂದರೆ ಅದನ್ನು ವಿಶೇಷ ಸುದ್ದಿ ಎಂದು ಪರಿಗಣಿಸಿ ಪ್ರಸಾರ ಮಾಡಬಹುದಿತ್ತುಆದರೆ ಯಾವ ಚಾನೆಲ್‌ಗಳು ಇದನ್ನು ಅಷ್ಟಾಗಿ ಪರಿಗಣಿಸದೆ ಒಂದು ರೀತಿ ಹಿಟ್ ಅಂಡ್ ರನ್ ರೀತಿಯಲ್ಲಿ ಪ್ರಸಾರ ಮಾಡಿ




ಸುಮ್ಮಾನಾಗಿ ಬಿಟ್ಟವು;

ಗೃಹ ಸಚಿವ ಅರಗ ಜ್ಞಾನೇಂದ್ರ ಅವರು ಇತ್ತೀಚೆಗೆ ವಿಧಾನಸಭೆ ಅಧಿವೇಶದಲ್ಲಿ ಮಂಡಿಸಿದ ಮಸೂದೆಯನ್ನು ಇಟ್ಟುಕೊಂಡು ಅರ್ಧಗಂಟೆ ಪ್ಯಾನಲ್ ಡಿಸ್ಕಷನ್ ಆದರೂ ಮಾಡಬಹುದಿತ್ತು, ಆಗಲೇ ಹೇಳಿದ ಹಾಗೆ ಇದೊಂದು ವಿಶೇಷ ಸುದ್ದಿ ಹಾಗಾಗಿ ಇದಕ್ಕೆ ಉತ್ತರಮ ಪ್ರತಿಕ್ರಿಯೆಗಳು ಬರುತ್ತವೆ, ಒಂದೊಮ್ಮೆ ಚಾನೆಲ್‌ಗಳು ಬೇರೆ ಸುದ್ದಿಗಳಿದ್ದಾಗ ಇಂತ ಸುದ್ದಿಗಳನ್ನು ಹೆಚ್ಚಾಗಿ ಗಣನೆಗೆ ತಗೆದುಕೊಳ್ಳುವುದಿಲ್ಲ ಎನ್ನುವುದು ಸತ್ಯ.

ಕೆಲವು ಬಾರಿ ಯಾವುದೋ ಸುದ್ದಿಯನ್ನು ಅನಾವಶ್ಯಕವಾಗಿ ಪದೆ ಪದೆ ಪ್ರತಿ ಬುಲಿಟಿನ್‌ಗಳಲ್ಲೂ ಪ್ರಸಾರ ಮಾಡುತ್ತವೆ ಅದಕ್ಕೆ ವಿಶೇಷ ಮಾನ್ಯತೆ ಕೊಡುವ ಟಿವಿಗಳು ಇಂತ ಸುದ್ದಿಗಳನ್ನು ಬಲಸಿಕೊಳ್ಳಬೇಕು ಆದರೆ ಅದು ಅಗುತ್ತಿಲ್ಲ ಎನ್ನುವುದು ಇಲ್ಲಿ ಮುಖ್ಯವಾಗುತ್ತದೆ.

ಇದರಿಂದ ಮಕ್ಕಳಿಗೂ ಪೋಷಕರಿಗೂ ಇದರ ಕೆಟ್ಟ ಪರಿಣಾಮ ಅರಿವಾಗಿ ಮಕ್ಕಳನ್ನು ಆದಷ್ಟು ಆ ಆಟಗಳಿಂದ ದೂರವಿರುವಂತೆ ನೋಡಿಕೊಳ್ಳಲು ಅನುಕೂಲವಾಗುತ್ತದೆ ಅಂತಕೆಲಸವಾದರೂ ಮಾಡಬಹುದಿತ್ತು. ಆದರೆ ಆ ಕೆಲಸ ಆಗಲಿಲ್ಲ ಎನ್ನುವುದು ನಮ್ಮ ಬೇಸರ.

ಆನ್‌ಲೈನ್ ಈ ಆಟಕ್ಕೆಅದೆಷ್ಟೋಮಕ್ಕಳು ಬಲಿಯಾಗಿದ್ದಾರೆ ಕೆಲವರು ಅದರ ದಾಸರಾಗಿ ಹಣವನ್ನು ಕಳೆದುಕೊಂಡಿದ್ದಾರೆ ಸುಂದರ ಜೀವನವನ್ನುಕಳೆದುಕೊಂಡಿದ್ದಾರೆ ಹೀಗಿರುವಾಗ ಇಂತ ಒಂದು ಸುದ್ದಿಯನ್ನು ಯಾಕೆ ಹೆಚ್ಚು ಗಮನಕೊಡಲಿಲ್ಲ ಎನ್ನುವುದೇ ಇಲ್ಲಿನ ಪ್ರಶ್ನೆ.

ಮುದ್ರಣ ಮಾಧ್ಯಮಗಳು ಅದಕ್ಕೆ ಕೊಡಬೇಕಾದ ಮಾನ್ಯತೆಯನ್ನು ಕೊಟ್ಟಿವೆ ಒಂದು ಸುದ್ದಿಯನ್ನು ಪ್ರಕಟಿಸುವಾಗ ಜೊತೆಗೆ ಅದರ ಸಾಧಕ-ಬಾಧಕಗಳ ಕುರಿತು ಪ್ರಕಟಿಸಿವೆ ಆದರೆ ಚಾನೆಲ್‌ಗಳುಮಾತ್ರ ತನ್ನ ಗಂಭೀರತೆಯನ್ನು ಅರೆತುಕೊಂಡಿಲ್ಲ ಎನಿಸುತ್ತದೆ.

# ಬಡಪಾಯಿ ಎಮ್ಮೆಗಳಿಗೂ ಥ್ಯಾಂಕ್ಸ್ ಹೇಳೋಣ ಬನ್ನಿ



ದೆಹಲಿ ದೃಷ್ಟಿ
ಡಿ.ಉಮಾಪತಿ
ಹಿರಿಯ ಪತ್ರಕರ್ತರು



ದುರ್ಗಾ– ಮಹಿಷ ಕದನ ಮತ್ತು ಮಹಿಷಾಸುರ ಮರ್ದನದ ಪರಿಣಾಮ ಇದ್ದೀತು. ನಮ್ಮ ಎಲ್ಲ ಜಾನುವಾರುಗಳ ಪೈಕಿ ನಿಕೃಷ್ಟವೆಂದು ಕಳಂಕ ಹೊತ್ತ ಪ್ರಾಣಿಯಿದು. ಪರಮ ಕ್ರೌರ್ಯಕ್ಕೆ ಗುರಿಯಾಗುವ ಜೀವಿ. ಮನಸೇಚ್ಛೆ ಬಡಿತ ತಿನ್ನುತ್ತದೆ, ದೇವಿಯ ಮುಂದೆ ಕತ್ತು ಕಡಿಸಿಕೊಂಡು ಬಲಿಯಾಗುತ್ತದೆ. ಮೇವು ನೀರಿಲ್ಲದೆ ನೂರಾರು ಕಿ.ಮೀ. ದೂರ ಹಿಂಸೆಯ ಸಾಗಣೆಗೆ ತುತ್ತಾಗಿ ಕಸಾಯಿ ಖಾನೆಗಳಲ್ಲಿ ಅತ್ಯಂತ ಯಾತನೆಯ ಮರಣಕ್ಕೆ ಗುರಿಯಾಗುತ್ತದೆ.

ಕಪ್ಪು ವರ್ಣವನ್ನು ಕೀಳೆಂದೂ, ಗೌರವರ್ಣವನ್ನು ಮೇಲೆಂದೂ ನೂರಾರು ವರ್ಷಗಳಿಂದ ನಿತ್ಯ ಬದುಕಿನಲ್ಲಿ ಕಂಡೂ ಕಾಣದಂತೆ ಭೇದ ಭಾವ ಬಗೆಯುತ್ತ ಬಂದಿರುವ ವ್ಯವಸ್ಥೆ ಆಷಾಢಭೂತಿ.

1890ರ ಆಪ್ಟೆ ಸಂಸ್ಕೃತ ನಿಘಂಟಿನ ಪ್ರಕಾರ ಕೃಷ್ಣ ಎಂಬ ಶಬ್ದಕ್ಕೆ ಕಪ್ಪು, ಕತ್ತಲೆ, ಕಡು ನೀಲಿ, ದುಷ್ಟ, ಅನಿಷ್ಟ, ಕೃಷ್ಣಮೃಗ, ಕೋಗಿಲೆ, ಕೃಷ್ಣಪಕ್ಷ, ವಿಷ್ಣುವಿನ ಎಂಟನೆಯ ಅವತಾರ ಕೃಷ್ಣ, ಕೃಷ್ಣನ ಮಗ ಪ್ರದ್ಯುಮ್ನ, ಮಹಾಭಾರತದ ಅರ್ಜುನ ಎಂಬ ಅರ್ಥಗಳಿವೆ. ಕೃಷ್ಣ ಎಂಬುದು ದೇಶದ ಅತಿ ಜನಪ್ರಿಯ ಹೆಸರುಗಳಲ್ಲೊಂದು.

ವಿಷ್ಣುವಿನ ಮೂರು ಅವತಾರಗಳಾದ ರಾಮ, ಕೃಷ್ಣ ಹಾಗೂ ಮೋಹಿನಿಯ ಮೈಬಣ್ಣ ಕಪ್ಪು ಇಲ್ಲವೇ ಕಡುನೀಲಿ. ಮೂವರ ಸೌಂದರ್ಯವನ್ನು ಪುರಾಣಗಳು, ಭಾಗವತಗಳು ಕೊಂಡಾಡಿವೆ.

ಭಾರತದ ಅರ್ಥವ್ಯವಸ್ಥೆ ಹೊಳೆಯಲು ಬಡಪಾಯಿ ಎಮ್ಮೆ ಕೋಣಗಳು ಕೂಡ ಶ್ರಮಿಸಿವೆ. ಬೈಸಿಕೊಳ್ಳುವುದಷ್ಟೇ ಅಲ್ಲ ಬೈಗುಳವೇ ಆಗಿ ಹೋಗಿರುವ ಈ ಪಶುವಿನ ಹಿರಿಮೆ ಗರಿಮೆಯ ನೆನೆವುದು ಮಾನವೀಯ ನಡವಳಿಕೆ.

ಕಪ್ಪೆಂದು ಜರೆಯುವ ಬೈಗುಳವೇ ಆಗಿ ಹೋಗಿರುವ ಎಮ್ಮೆಗಳು–ಕೋಣಗಳು ಗದ್ದೆ ಉಳುತ್ತವೆ, ಹೇರು ಎಳೆಯುತ್ತವೆ, ಕನಿಷ್ಠ ತಿಂದು ಗರಿಷ್ಠ ಹಾಲು ಕರೆಯುತ್ತವೆ. ಎಮ್ಮೆ ಹಾಲಿನಲ್ಲಿ ಹೃದಯಕ್ಕೆ ಮಾರಕವಾದ ಕೊಲೆಸ್ಟ್ರಾಲ್ ಪ್ರಮಾಣ ಶೇ.45ರಷ್ಟು ಕಡಿಮೆ, ಒಮೇಗ–3 ಮೇದಸ್ಸು ಹೆಚ್ಚಿನ ಪ್ರಮಾಣದಲ್ಲಿದೆ, ಪ್ರೊಟೀನು, ಕಬ್ಬಿಣಾಂಶ ಹೇರಳ. ಜಾನುವಾರು ತಜ್ಞರು ಎಮ್ಮೆಯನ್ನು ಭಾರತದ ಹೆಮ್ಮೆ ಎಂದು ಬಣ್ಣಿಸುವುದುಂಟು.

ನಮ್ಮ ದೇಶದಲ್ಲಿರುವ ಎಮ್ಮೆಗಳ ಸಂಖ್ಯೆ ಸುಮಾರು 12 ಕೋಟಿ. ಪ್ರಪಂಚದ ಅರ್ಧಕ್ಕಿಂತ ಹೆಚ್ಚು ಎಮ್ಮೆಗಳಿಗೆ ಭಾರತವೇ ತವರು. ವರ್ಷಕ್ಕೆ ಉತ್ಪತ್ತಿಯಾಗುತ್ತಿರುವ ಎಮ್ಮೆ ಮಾಂಸದ ಪ್ರಮಾಣ ಹನ್ನೊಂದು ಲಕ್ಷ ಟನ್ನುಗಳಷ್ಟು. ಎಮ್ಮೆ ಮಾಂಸದ ರಫ್ತಿನಿಂದ ಬೊಕ್ಕಸಕ್ಕೆ ಭರ್ತಿಯಾಗುತ್ತಿರುವ ವಾರ್ಷಿಕ ವರಮಾನ 30 ಸಾವಿರ ಕೋಟಿ ರೂಪಾಯಿ ಮೀರಿದ್ದು. ಅರ್ಧಕ್ಕಿಂತ ಹೆಚ್ಚು ಪ್ರಮಾಣದ ಹಾಲನ್ನು ಉತ್ಪಾದಿಸುತ್ತಿರುವುದು ಎಮ್ಮೆಗಳೇ.

ಗೋಹತ್ಯೆ ವಿರುದ್ಧ ಸಿಡಿದೇಳುವವರನ್ನು ಮಹಿಷ ಹತ್ಯೆ ಯಾಕೆ ಬಾಧಿಸುವುದಿಲ್ಲ ಎಂದು ಕೇಳುತ್ತಾರೆ ಚಿಂತಕ ಕಂಚಾ ಐಲಯ್ಯ. ಗೋವುಗಳು, ದಲಿತರು– ಬಹುಜನರು ಈ ಎರಡೂ ಜಾನುವಾರುಗಳ ಕುರಿತು ತೋರುವ ಪ್ರೀತಿ ಮಮತೆಯನ್ನು ನೋಡಿದರೆ ಎರಡಕ್ಕೂ ಒಂದೇ ಬಗೆಯ ಸಮ್ಮಾನ ಸಿಗಬೇಕು ಎಂದು ವಾದಿಸುತ್ತಾರೆ. ಎಮ್ಮೆಯ ಹಾಲನ್ನು ಮೇಲ್ಜಾತಿಗಳೆಂದು ಹೇಳಿಕೊಳ್ಳುವವರೂ ಬಗೆ ಬಗೆಯಾಗಿ ಸೇವಿಸುವುದು ಸುಳ್ಳೇನೂ ಅಲ್ಲ. ಆದರೆ ಎಮ್ಮೆಗೆ ಬ್ರಾಹ್ಮಣ್ಯದಲ್ಲಿ ಯಾವುದೇ ಸ್ಥಾನಮಾನ ಇಲ್ಲ. ಆರ್ಥಿಕ ಸಮೀಕ್ಷೆಯೊಂದನ್ನು ನಡೆಸಿದ್ದೇ ಆದರೆ ಭಾರತದಲ್ಲಿ ಕೋಟ್ಯಂತರ ಜನರ ಜೀವನೋಪಾಯ ಮೂಲವಾಗಿ ಹೊಮ್ಮುವುದು ಎಮ್ಮೆಯೇ ವಿನಾ ಆಕಳು ಅಲ್ಲ. ಒಂದೇ ಹುಲ್ಲನ್ನು ತಿನ್ನುವ ಎರಡು ಪ್ರಾಣಿಗಳಲ್ಲಿ ಒಂದು ಆಧ್ಯಾತ್ಮಿಕವಾಗಿ ಮತ್ತು ರಾಜಕೀಯವಾಗಿ ಅಸ್ಪೃಶ್ಯ ಎನಿಸಿಕೊಳ್ಳುವುದು ಯಾಕಾಗಿ ಎಂದು ಅವರು ಕೇಳುತ್ತಾರೆ. ಎರಡರ ಪೈಕಿ ಯಾವುದು ಶ್ರೇಷ್ಠ ಮತ್ತು ಯಾವುದು ಕನಿಷ್ಠ ಎಂದು ತೀರ್ಮಾನ ಮಾಡಲೇಬೇಕಿದ್ದಲ್ಲಿ, ಅಂತಹ ಹಕ್ಕು– ಅಧಿಕಾರ ಇರಬೇಕಾದದ್ದು ಈ ಎರಡೂ ಪ್ರಾಣಿಗಳನ್ನು ತಲೆ ತಲಾಂತರಗಳಿಂದ ಸಾಕಿ ಸಲಹುತ್ತ ಬಂದಿರುವ ದಲಿತರು–ಬಹುಜನರಿಗೆ. ಕಪ್ಪು ಮೈ ಬಣ್ಣದ ಜನ ಸಮುದಾಯಗಳನ್ನು ವಿಕಾರವಾಗಿ ಚಿತ್ರಿಸಿ, ರಾಕ್ಷಸರೆಂದು ಕರೆದ ಬಿಳಿ ಮೈ ಬಣ್ಣದವರ ವರ್ಣಭೇದ ನೀತಿ ಜನಜನಿತ. ಇದೇ ನೀತಿ ಪ್ರಾಣಿ ಪ್ರಪಂಚಕ್ಕೂ ವಿಸ್ತ ರಿಸಿತು. ಈ ಅಹಮಿಕೆಗೆ ತಿರಸ್ಕಾರಕ್ಕೆ ತುತ್ತಾದ ಜಾನುವಾರು ಎಮ್ಮೆ. ಬೆಳ್ಳಗಿದ್ದುದು ಸುಂದರವಷ್ಟೇ ಅಲ್ಲ ಗೌರವಾನ್ವಿತ ಕೂಡ ಎನಿಸಿಕೊಂಡಿತು ಎನ್ನುತ್ತಾರೆ ಐಲಯ್ಯ.



ಆದರೂ ಮಹಿಷ ಪರಂಪರೆ ನಮ್ಮ ಅನೇಕ ಗಿರಿಜನರ ಆಚರಣೆಗಳಲ್ಲಿ ಇನ್ನೂ ಜೀವಂತವಿದೆ. ಮಧ್ಯಭಾರತದ ಗೊಂಡರು ಮತ್ತು ಮರಿಯಾ ಗೊಂಡರು, ಪಶ್ಚಿಮ ಭಾರತದ ಕಾಟಕಾರಿಗಳು ಹಾಗೂ ದಕ್ಷಿಣ ಭಾರತದ ತೋಡರು ಈ ಮಾತಿಗೆ ಉದಾಹರಣೆಯಾಗುತ್ತಾರೆ.



ನೀಲಗಿರಿಯ ಗಿರಿಜನರಾದ ತೋಡರ ಪಾಲಿಗೆ ಎಮ್ಮೆಗಳು ಪವಿತ್ರ ಪ್ರಾಣಿಗಳಾಗಿದ್ದವೇ ವಿನಾ ಆಕಳುಗಳಲ್ಲ. ಪವಿತ್ರ ಎಮ್ಮೆಯನ್ನು ಕಟ್ಟುತ್ತಿದ್ದ ಸ್ಥಳಗಳು ಅವರ ಪಾಲಿಗೆ ಆರಾಧಿಸುವ ಗುಡಿಗಳು. ಹೈನು ಮಂದಿರಗಳೆಂದೇ ಅವುಗಳನ್ನು ಕರೆಯಲಾಗುತ್ತಿತ್ತು.

ಸತ್ತ ತೋಡನ ಅಂತ್ಯ ಸಂಸ್ಕಾರದಲ್ಲಿ ಎಮ್ಮೆಯನ್ನು ಬಲಿ ಕೊಡುತ್ತಿದ್ದರು ತೋಡರು. ಈ ಎಮ್ಮೆ ಪರಲೋಕ ಸೇರಿದ ಮೃತನನ್ನು ಸೇರಿಕೊಳ್ಳಬೇಕು ಎಂಬುದು ಈ ಬಲಿಯ ಉದ್ದೇಶವಾಗಿತ್ತೇ ವಿನಾ ಅದನ್ನು ತಿನ್ನುವುದಲ್ಲ.

ಛತ್ತೀಸಗಢದ ಬಸ್ತರ್ ಜಿಲ್ಲೆಯ ಇಂದ್ರಾವತೀ ನದೀ ದಂಡೆಗುಂಟ ವಾಸಿಸುತ್ತಿದ್ದ ಮರಿಯಾ ಮತ್ತು ಮರಿಯಾ ಗೊಂಡ ಆದಿವಾಸಿಗಳು ತಮಗೆ ಮಹಿಷದೊಂದಿಗೆ ಆಧ್ಯಾತ್ಮಿಕ ಸಂಬಂಧವಿದೆ ಎಂದು ನಂಬಿದ್ದವರು. ಹೀಗಾಗಿ ಅವರ ಪಾಲಿನ ಆಧ್ಯಾತ್ಮಿಕ ಸಂಬಂಧದ ಚಿಹ್ನೆ ಮಹಿಷ. ಹಬ್ಬಗಳಲ್ಲಿ ಮಹಿಷದ ಕೊಂಬುಗಳನ್ನು ತಲೆಯ ಮೇಲೆ ಧರಿಸಿ, ಡೋಲಿನ ತಾಳಕ್ಕೆ ಹೆಜ್ಜೆ ಹಾಕಿ ಹುಸಿ ಕಾಳಗವನ್ನು ನಟಿಸುತ್ತಾರೆ. ತಮ್ಮ ಪ್ರಾಚೀನ ಮಹಿಷ ದೈವವನ್ನು ದಾಂತೇಶ್ವರಿ ಎಂದೇ ಪೂಜಿಸುತ್ತಾರೆ. ಮಹಿಷನನ್ನು ಮಹಸೋಬಾ (ಮಹಿಷಬಾಬಾ ಇಲ್ಲವೇ ತಂದೆ) ಎಂದು ಮಧ್ಯ ಭಾರತ ಮತ್ತು ಪಶ್ಚಿಮ ಭಾರತದ ಗಿರಿಜನರು ಪೂಜಿಸುತ್ತಿದ್ದರು. ಮಹಾರಾಷ್ಟ್ರದ ಕಾಟ್ಕರೀ ಗಿರಿಜನರು ಮತ್ತು ಶಿವಾಜಿಯ ವಂಶಜರೆನ್ನಲಾಗುವ ಭೋಸ್ಲೆಗಳು ಮಹಸೋಬನನ್ನು ಪೂಜಿಸುತ್ತಾರೆ. ನಂದಿತಾ ಕೃಷ್ಣ ಅವರ ಭಾರತದ ಪವಿತ್ರ ಪ್ರಾಣಿಗಳು ಎಂಬ ಕೃತಿಯಲ್ಲಿ ಈ ವಿವರಗಳು ಓದಲು ಸಿಗುತ್ತವೆ.

ದುರ್ಗೆಯ ಕೈಯಲ್ಲಿ ಅಸುರ ಮಹಿಷ ಹತನಾಗುವ ಕತೆಯಲ್ಲಿ ಯಾವ ನೈತಿಕ ಅಂಶವೂ ಇಲ್ಲ. ಭೂಮಿಯ ಫಲವತ್ತತೆಯ ಆವರ್ತ ಆಯಾ ಸುಗ್ಗಿಯೊಂದಿಗೆ ಕೊನೆಯಾಗುತ್ತದೆ. ಭೂಮಿ ಸಸ್ಯಶ್ಯಾಮಲೆಯಾಗಿ ಮತ್ತೆ ಮೈ ತುಂಬಿಕೊಂಡರೆ ಮತ್ತೊಂದು ಸುಗ್ಗಿ. ಮತ್ತೆ ದುರ್ಗೆಯ ಕೈಯಲ್ಲಿ ಹತನಾಗಲು ಅಸುರ ಪುನಃ ಸಿದ್ಧನಾಗುತ್ತಾನೆ. ಮಾನವನ ಅನ್ನದ ತಟ್ಟೆ ಹೀಗೆ ಬರಿದಾಗದೆ ಮತ್ತೆ ಮತ್ತೆ ತುಂಬುತ್ತ ಹೋಗುವುದೇ ಈ ಕತೆಯ ಆಶಯ ಎಂದು ವ್ಯಾಖ್ಯಾನಿಸುತ್ತಾರೆ ಪಟ್ನಾಯಕ್.

ರೂಪಕ ಇಲ್ಲವೇ ಪ್ರತಿಮೆಯ ಮಾತಿನಲ್ಲಿ ಭೂಮಿಯನ್ನು ಆಕಳು ಎಂದಿದ್ದಾರೆ ಪುರಾಣಶಾಸ್ತ್ರಜ್ಞ ದೇವದತ್ ಪಟ್ನಾಯಕ್. ಭೂಮಿಯೇ ದನಿಯೆತ್ತಿ ಪ್ರತಿಭಟಿಸುವ ಮಟ್ಟಿಗೆ ಭೂಮಿಯನ್ನು ಕೊಳ್ಳೆ ಹೊಡೆವ ದುಷ್ಟಶಕ್ತಿಗಳನ್ನು ನಿವಾರಿಸಲಾಗುತ್ತದೆ. ಭೂಮಿಯೆಂಬ ಆಕಳ ಕಣ್ಣೀರನ್ನು ಒರೆಸುವ ವಿಷ್ಣು, ಭೂದಾಹಿ ರಾಜ ಮಹಾರಾಜರ ಒಜ್ಜೆಯನ್ನು ಇಳಿಸುವ ವಚನ ನೀಡುತ್ತಾನೆಂದು ಪುರಾಣಗಳು ಹೇಳುತ್ತವೆ. ಆದರೆ ಇಂದು ಧನದಾಹೀ ಉದ್ಯಮಗಳು ಭೂಮಿಯ ಕೊಳ್ಳೆ ಹೊಡೆಯತೊಡಗಿವೆ. ಸರಕಾರಗಳು ಈ ಸಮತೋಲನವನ್ನು ನಿರ್ಲಕ್ಷಿಸಿವೆ. ಕೊಳ್ಳೆಯ ಕೈಗಳಿಗೆ ಹತಾರುಗಳನ್ನು ಇಡತೊಡಗಿವೆ. ಭೂಮಿಯೆಂಬ ಆಕಳಿನ ರಕ್ಷಣೆಗೆ ಮುಂದಾಗುವ ಸ್ವಯಂಸೇವಾ ಸಂಸ್ಥೆಗಳನ್ನು ಶಿಕ್ಷಿಸತೊಡಗಿವೆ.

ಹೀಗಾಗಿ ಸೊಂಟ ಕಟ್ಟುವುದೇ ಆದರೆ ಅದು ಭೂಮಿಯೆಂಬ ಆಕಳಿನ ರಕ್ಷಣೆಗೆ ಕಟ್ಟಬೇಕು. ಭೂಮಿಯೇ ಇಲ್ಲದೆ ಆಕಳು ಹೇಗೆ ಉಳಿದೀತು?

ಪ್ರಿಯ ಓದುಗರೆ

'ಕೆಂಧೂಳಿ' ಪತ್ರಿಕೆಯನ್ನು ಒಂದು ಒಳ್ಳೆ ಉದ್ದೇಶದಿಂದ ಆರಂಭಿಸಲಾಗಿದೆ, ಗುಣಮಟ್ಟ,ಓದುಗರಿಗೆ ಅಗತ್ಯ ವಿಶ್ಲೇಷಣಾತ್ಮಕ ವರದಿಗಳು ಸೇರಿದಂತೆ ಯಾವುದರಲ್ಲೂ ರಾಜೀಯಾಗದೆ ತನ್ನ ಗುಣಾತ್ಮಕವನ್ನು ಕಾಯ್ದುಕೊಂಡು ನಿಮ್ಮ ಮುಂದೆ ಬರಲಿದೆ. ಹೀಗಾಗಿ ಪತ್ರಿಕೆಗೆ ಓದುಗರೆ ಅಗತ್ಯವಾಗಿರುವುದರಿಂದ ಆದಷ್ಟು ಕೊಂಡು ಓದಿ ಪತ್ರಿಕೆಯನ್ನು ಬೆಳಸಿ ಎನ್ನುವುದು ನಮ್ಮ ಕಳಕಳಿಯ ಮನವಿ. ಅಲ್ಲದೆ ಪತ್ರಿಕೆ ಬೆಳವಣಿಗೆಗೆ ಆರ್ಥಿಕ ಸಹಾಯವೂ ಅಷ್ಟೆ ಅಗತ್ಯವಾಗಿದೆ, ಈ ಕಾರಣಕ್ಕಾಗಿ ತಾವು ಚಂದಾದಾರ ರಾಗುವ ಮೂಲಕ ತಮ್ಮ ಪತ್ರಿಕೆ ಬೆನ್ನೆಲುಬಾಗಿ ನಿಂತುಕೊಳ್ಳಬೇಕು ಎನ್ನುವುದು ತಮ್ಮ ಬೇಡಿಕೆ. –ಪ್ರಧಾನ ಸಂಪಾದಕ

| | |
|---|---|
| ವಾರ್ಷಿಕ | 1100 |
| ಅರ್ಧವಾರ್ಷಿಕ | 600 |
| ಎರಡು ವರ್ಷ | 2200 |
| ಆರು ವರ್ಷ | 6600 |
| ಪೋಷಕರು | 10,000 |
| ಮಹಾಪೋಷಕರು | 20,000 |


ಬೇಕಾಗಿದ್ದಾರೆ : 'ಕೆಂಧೂಳಿ' ವಾರ ಪತ್ರಿಕೆಗೆ ಜಿಲ್ಲಾ ವರದಿಗಾರರು/ಏಜೆಂಟರು ಬೇಕಾಗಿದ್ದಾರೆ. ಎಲ್ಲಾ ಜಿಲ್ಲೆಗಳಿಂದಲೂ ವರದಿಗಾರರನ್ನು ನೇಮಕ ಮಾಡಲಾಗುತ್ತಿದೆ ಆಸಕ್ತರು ಈ ದೂರವಾಣಿಗೆ ಸಂಪರ್ಕಿಸಬಹುದು. 9900633109



# ಅಂಬರ್ ಗ್ರೀಸ್ ಹೆಸರಲ್ಲಿ ತಿಮಿಂಗಿಲಗಳಿಗೂ ಗಂಡಾಂತರ..!!



**ಜಗತ್ತಿನ ಕೆಲವು ಪ್ರತಿಷ್ಠಿತ ಸುಗಂಧ ದ್ರವ್ಯ ತಯಾರಿಕ ಕಂಪನಿಗಳು ವಿಶೇಷವಾಗಿ ಈ ತಿಮಿಂಗಿಲ ವಾಂತಿಯೆಂಬ ಅಂಬರ್ ಗ್ರೀಸ್ ವಸ್ತುವಿಗಾಗಿ ಅಂತಾರಾಷ್ಟ್ರೀಯ ಮಾರುಕಟ್ಟೆಗೆ ಲಗ್ಗೆ ಇಟ್ಟಿವೆ! ಡಾರ್ಕ್ ನೆಟ್ ವೆಬ್ ಸೈಟ್ ನಲ್ಲೂ ಕೂಡ ಕಾಳಸಂತೆಯ ಕರಾಳ ದಂಧೆ ಕೋರರು ಇದೇ ಅಂಬರ್ ಗ್ರೀಸ್ ವಸ್ತುವಿಗಾಗಿ ಬೇಡಿಕೆ ಇಡುತ್ತಿದ್ದಾರೆಂಬ ಸುದ್ಧಿ ಎಲ್ಲೆಡೆ ವೈರಲ್ ಆಗುತ್ತಿದ್ದಂತೆ ಇದ್ದಕ್ಕಿದ್ದಂತೆ ಸಮುದ್ರದೊಳಗೆ ಮೀನು, ಮುತ್ತು,ರತ್ನ ಹವಳ, ಹುಡುಕುತಿದ್ದ ವರ್ತಕರು, ತಿಮಿಂಗಿಲ ಮೀನಿನ ಮಾಂಸ ಮೂಳೆಗಳಿಗಾಗಿ ಬೇಟೆಯಾಡುತಿದ್ದ ಕಡಲ್ಗಳ್ಳರು ಎಲ್ಲಾ ಬಿಟ್ಟು ತಲೆಕೆಡಿಸಿಕೊಂಡು ಈಗ ನೇರವಾಗಿ ಅಂಬರ್ ಗ್ರೀಸ್ಗಾಗಿ ಸಮುದ್ರದ ಮೇಲೆ ಸವಾರಿ ಹೊರಟಿದ್ದಾರೆ!**



● ಪರಶಿವ ಧನಗೂರು

ಇತ್ತೀಚೆಗೆ ಈ ಸ್ಮಗ್ಲಿಂಗ್ ಜಗತ್ತು ದೋ ನಂಬರ್ ದಂಧೆಕೋರರ ಗುಂಪುಗಳು ಕೋಟ್ಯಂತರ ರೂಪಾಯಿಗಳ ಆಸೆಯಿಂದ ತಿಮಿಂಗಿಲ ವಾಂತಿಯ ಹಿಂದೆ ಬಿದ್ದಿದ್ದಾರೆ!

ಈಗ ಎಲ್ಲೆಲ್ಲೂ ತೇಲುವ ಚಿನ್ನ! ಸಮುದ್ರ ನಿಧಿ! ಎಂದು ಕರೆಸಿಕೊಳ್ಳುವ ಅಂಬರ್ ಗ್ರೀಸ್ ಎಂಬ ತಿಮಿಂಗಿಲ ವಾಂತಿಯದ್ದೇ ವಾಸನೇ!! ಮಾಂಸಾಹಾರಿ ಸಸ್ತನಿಯಾದ ಅಳಿವಿನಂಚಿನಲ್ಲಿರುವ ಸ್ಪರ್ಮ್ ವೇಲ್ ಜಾತಿಯ ಈ ತಿಮಿಂಗಿಲ ವಾಂತಿಗೀಗ ಅಂತಾರಾಷ್ಟ್ರೀಯ ಮಟ್ಟದಲ್ಲಿ ಬಾರಿ ಬೇಡಿಕೆ! ಸದ್ಯಕ್ಕೆ ಭೂಮಿ ಮೇಲೆ ಅತಿ ದೊಡ್ಡ ಜೀವಿ ಎನಿಸಿಕೊಂಡಿರುವ ಈ ವೀರ್ಯ ತಿಮಿಂಗಿಲದ ಹೊಟ್ಟೆಯಲ್ಲಿ ಅಪರೂಪದ ನಿಧಿಯಿದೆ ಎನ್ನುವಷ್ಟರ ಮಟ್ಟಿಗೆ ತಿಮಿಂಗಿಲ ವಾಂತಿಯನ್ನು ಜನರು ಆರಾಧಿಸಲು ಸುರುಮಾಡಿದ್ದಾರೆ! ಮೀನಿನ ಮಲಕ್ಕೂ ಮಹಾನ್ ಗೌರವ! ಎಲ್ಲಾಕಡೆ ಅಂಬರ್ ಗ್ರೀಸ್ ನದ್ದೇ ಹವಾ! ವಾಂತಿ ಎಂದರೆ ಮಾರು ದೂರ ಓಡುವ ಮಾನವ ಈ ತಿಮಿಂಗಿಲ ವಾಂತಿಗಾಗಿ ಸಮುದ್ರತೀರದಲ್ಲಿ ಹಗಲು ರಾತ್ರಿ ನಿದ್ದೆಗೆಟ್ಟು ತಪಸ್ಸು ಮಾಡುತ್ತಾ ಕಾಯುತ್ತಿದ್ದಾನೆಂದರೇ ನೀವೂ ನಂಬಲೇಬೇಕು. ಏಕೆಂದರೆ ಈಗ ಜಗತ್ತಿನ ಬ್ಲಾಕ್ ಮಾರ್ಕೆಟ್ ನಲ್ಲಿ, ಕೆಲವು ದೇಶಗಳ ಓಪನ್ ಮಾರ್ಕೆಟ್ ನಲ್ಲೂ ಈ ಅಂಬರ್ ಗ್ರೀಸ್ ಸದ್ದು ಮಾಡುತ್ತಿದೆ; ದುಡ್ಡೂ ಮಾಡುತ್ತಿದೆ! ಇದರ ಬೆಲೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಕೆಜಿಗೊಂದು ಕೋಟಿಯಂತೇ!! ಹಾಗಾದರೇ ಕೋಟಿ ಯಾರಿಗೆ ತಾನೇ ಬೇಡವೇಳಿ? ಅದಕ್ಕಾಗಿಯೇ ಈಗ ಕೋಟ್ಯಂತರ ರೂಪಾಯಿ ಹಣ ಸಂಪಾದಿಸಲು ಸಾರ್ಟ್ ಕಟ್ ವಿದ್ಯೆ.. ವಾಂತಿ ವ್ಯಾಪಾರ! ಐಷಾರಾಮಿ ಭಂಗಲೆಯ ಜನರಿಗಾಗಿ ದುಬಾರಿ ಬೆಲೆಯ ಸುಗಂಧ ದ್ರವ್ಯ (ಸೆಂಟ್) ತೈಲ ತಯಾರಿಸಲು ಈ ತಿಮಿಂಗಿಲ ವಾಂತಿಯನ್ನು ಉಪಯೋಗಿಸುತ್ತಾರೆ ಎಂಬ ಸೆನ್ಸೇಷನಲ್ ಸುದ್ಧಿ ಅದ್ಯಾವಾಗಿನಿಂದ ಪ್ರಸಾರವಾಯ್ತೋ ಗೊತ್ತಿಲ್ಲ ಈಗದು ಜಗತ್ತಿನ ಎಲ್ಲೆಡೆ ವೈರಲ್ ಆಗಿದೆ ಆದ ಕಾರಣಕ್ಕಾಗಿಯೆ ಈಗ ಪಾಪ ಅಪರೂಪದ ಅಳಿವಿನಂಚಿನ ಸಮುದ್ರ ಜಲಚರ ಜೀವಿಗಳಾದ ತಿಮಿಂಗಿಲಗಳಿಗೆ ಗಂಡಾಂತರ ಎದುರಾಗಿದೆ! ಕಡಲ್ಗಳ್ಳರು ಈ ತಿಮಿಂಗಿಲ ವಾಂತಿಗಾಗಿ ಸಮುದ್ರದ ಅಲೆಗಳನ್ನೂ ಲೆಕ್ಕಿಸದೇ ಆಳಸಮುದ್ರಕ್ಕೆ ಲಗ್ಗೆ ಇಟ್ಟು ತಿಮಿಂಗಿಲಗಳನ್ನು ವಾಂತಿಗಾಗಿ ಕೊಂದು ಮಾರಣಹೋಮ ನಡೆಸುತ್ತಿರುವ ವರದಿಗಳು ಆತಂಕಕ್ಕೆ ಕಾರಣವಾಗಿದೆ!

## ಅಂಬರ ಗ್ರೀಸ್ಗಾಗಿ ಕಡಲಗಳ್ಳರು ಸವಾರಿ

ಜಗತ್ತಿನ ಕೆಲವು ಪ್ರತಿಷ್ಠಿತ ಸುಗಂಧ ದ್ರವ್ಯ ತಯಾರಿಕ ಕಂಪನಿಗಳು





ವಿಶೇಷವಾಗಿ ಈ ತಿಮಿಂಗಿಲ ವಾಂತಿಯೆಂಬ ಅಂಬರ್ ಗ್ರೀಸ್ ವಸ್ತುವಿಗಾಗಿ ಅಂತಾರಾಷ್ಟ್ರೀಯ ಮಾರುಕಟ್ಟೆಗೆ ಲಗ್ಗೆ ಇಟ್ಟಿವೆ! ಡಾರ್ಕ್ ನೆಟ್ ವೆಬ್ ಸೈಟ್ ನಲ್ಲೂ ಕೂಡ ಕಾಳಸಂತೆಯ ಕರಾಳ ದಂಧೆ ಕೋರರು ಇದೇ ಅಂಬರ್ ಗ್ರೀಸ್ ವಸ್ತುವಿಗಾಗಿ ಬೇಡಿಕೆ ಇಡುತ್ತಿದ್ದಾರೆಂಬ ಸುದ್ಧಿ ಎಲ್ಲೆಡೆ ವೈರಲ್ ಆಗುತ್ತಿದ್ದಂತೆ ಇದ್ದಕ್ಕಿದ್ದಂತೆ ಸಮುದ್ರದೊಳಗೆ ಮೀನು, ಮುತ್ತು,ರತ್ನ ಹವಳ, ಹುಡುಕುತಿದ್ದ ವರ್ತಕರು, ತಿಮಿಂಗಿಲ ಮೀನಿನ ಮಾಂಸ ಮೂಳೆಗಳಿಗಾಗಿ ಬೇಟೆಯಾಡುತಿದ್ದ ಕಡಲ್ಗಳ್ಳರು ಎಲ್ಲಾ ಬಿಟ್ಟು ತಲೆಕೆಡಿಸಿಕೊಂಡು ಈಗ ನೇರವಾಗಿ ಅಂಬರ್ ಗ್ರೀಸ್ಗಾಗಿ ಸಮುದ್ರದ ಮೇಲೆ ಸವಾರಿ ಹೊರಟಿದ್ದಾರೆ! ಅವರ ಕಣ್ಣುಗಳಲ್ಲೀಗ ಕೋಟಿಯ ಕನಸು! ತಿಮಿಂಗಿಲ ವಾಂತಿಯ ಹೊಳಪು! ಸ್ಪರ್ಮ್ ವೇಲ್ ಜಾತಿಯ ಜಲಚರ ಸಸ್ಥನಿಯಾದ ಈ ತಿಮಿಂಗಿಲದ ಹೊಟ್ಟೆಯಲ್ಲಿ ವಿಶಿಷ್ಟ ರೀತಿಯ ಕೆಮಿಕಲ್ ಸಂಯೋಜನೆ ಯಿಂದ ಉಂಟಾಗುವ ಬೂದುಬಣ್ಣದ ಅಂಟು ಅಂಟಾದ ಕೆಲವೊಮ್ಮೆ ಗಟ್ಟಿಯಾದ ಕಲ್ಲಿನಂತಹ ವಸ್ತು ವನ್ನು ತಿಮಿಂಗಿಲದ ಹೊಟ್ಟೆ ಬಗೆದು ಕೊಂದು ತರಲು ಹಿಂಡು ಗಟ್ಟಲೇ ಸ್ಮಗ್ಲರ್ ಗಳು ಆಯ್ದ ಕಡಲತಡಿಯಲ್ಲಿ ಅವಿತುಕೊಂಡು ಕಾರ್ಯಾಚರಣೆ ನಡೆಸುತ್ತಿರುವ ವಿಚಾರ ಹರಿದಾಡುತ್ತಿದೆ! ಪ್ರಾಚೀನ ಕಾಲದಿಂದಲೂ ಇತಿಹಾಸ ಹೊಂದಿರುವ ಈ ಅಂಬರ್ ಗ್ರೀಸ್ ಅನ್ನು ಜಗತ್ತಿನ ಮೊದಲ ಮಹಾಮಾರಿ ಪ್ಲೇಗ್ ವಿರುದ್ಧ ಮುಲಾಮಿನಂತೆ ಬಳಸಲಾಗಿತ್ತಂತೇ! ಆಗಲೇ ಹಲವಾರು ರೋಗಗಳನ್ನು ಗುಣಪಡಿಸುವ ವೈದ್ಯಕೀಯ ಪರ್ಯಾಯವಾಗಿ ಈ ತಿಮಿಂಗಿಲ ವಾಂತಿಯನ್ನು ಉಪಯೋಗಿಸಿದ್ದಾರೆ ಎನ್ನಲಾಗುತ್ತಿದೆ! ನಮ್ಮ ಪೂರ್ವಜರು ಪರಿಮಳ ದ್ರವ್ಯದ ಜೊತೆಗೆ ಮಸಾಲ ಪದಾರ್ಥಗಳಲ್ಲೂ ಬಳಕೆ ಮಾಡುವ ಅಭ್ಯಾಸವಿಟ್ಟುಕೊಂಡಿದ್ದರಂತೇ! ಹಲವು ವಿಧದ ಮದ್ಯಪಾನಗಳಿಗೆ ಸುವಾಸನೆ ತರಲು ಈ ಅಂಬರ್ ಗ್ರೀಸ್ ವಸ್ತುವನ್ನು ಬಳಸುತಿದ್ದರಂತೇ! ಈಜಿಪ್ಟ್ ನವರು ಇದನ್ನು ದೂಪದ ದ್ರವ್ಯ ವಾಗಿ ಸುಡುತ್ತಿದ್ದರಂತೆ! ಚೀನಾದವರು ಇದನ್ನು ಡ್ರಾಗನ್ಸ್ ಸ್ಪಿಟಲ್ ಸುಗಂಧವೆಂದು ಬಳಸುತ್ತಿದ್ದರಂತೆ!

## ಒಂದೇ ದಿನಕ್ಕೆ ಕೋಟಿಗಳಿಕೆ..!

ಈ ಎಲ್ಲಾ ಊಹಾಪೋಹ ಉದಾಹರಣೆಗೆ ಯಾವುದೇ ಸರಿಯಾದ ವೈಜ್ಞಾನಿಕ ಪುರಾವೆಗಳಿಲ್ಲದಿದ್ದರೂ ಈಗ ಸದ್ಯಕ್ಕೆ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತಿಮಿಂಗಿಲ ವಾಂತಿಗಾಗಿ ಮಾತ್ರ ಬೇಡಿಕೆ ಇರುವುದಂತೂ ಸುಳ್ಳಲ್ಲ. ಆದ ಕಾರಣದಿಂದಲೇ ಅಂಬರ್ ಗ್ರೀಸ್ ಸಿಕ್ಕರೆ ಒಂದೇ ಸಲಕ್ಕೆ ಒಂದೇ ದಿನಕ್ಕೆ ಕೋಟಿ ಕೋಟಿ ಹಣ ಗಳಿಸಬಹುದೆಂಬ ಲೆಕ್ಕಾಚಾರ ಹಾಕುತ್ತಾ ಹಲವಾರು ಮಾಫಿಯಾ ಗ್ಯಾಂಗ್ ಗಳು ದೋ ನಂಬರ್ ದಂಧೆಕೋರರು ಈ ತಿಮಿಂಗಿಲ ವಾಂತಿಯನ್ನು ಹುಡುಕಿಕೊಂಡು ಸಮುದ್ರದಾಳದಲ್ಲಿ ಬೆಲೆ ಬೀಸುತ್ತಾ ಅಲೆಯುತ್ತಿದ್ದಾರಂತೆ! ಕರಾವಳಿ ತೀರಗಳಲ್ಲಿ ಹಗಲು ರಾತ್ರಿ ಚಳಿಮಳೆಯೆನ್ನದೇ ಕಾಯುತ್ತಾ ತಿಮಿಂಗಿಲ ವಾಂತಿಯು ತೇಲಿಬರುವುದೇನೋ ಎಂಬ ಭ್ರಮೆಯಲ್ಲಿ ಕೆಲವರು ಅಲ್ಲಿಯೇ ಟೆಂಟ್ ಹಾಕಿ ಕಾರ್ಯಾಚರಣೆ ಗಿಳಿದಿರುವ ಸುದ್ದಿಯೂ ಹರಿದಾಡುತ್ತಿವೆ. ಇನ್ನೂ ಕೆಲವು ದಂಧೆ ಕೋರ ವಂಚಕರು ಈ ತಿಮಿಂಗಿಲ ವಾಂತಿಯನ್ನು ಹೋಲುವ ನಕಲೀ ಮೇಣದ ಅಂಬರ್ ಗ್ರೀಸ್ ತಯಾರಿಸಿ ಇಟ್ಟುಕೊಂಡು ಕೋಟ್ಯಂತರ ರೂಪಾಯಿ ಹಣ ಸಂಪಾದಿಸಲು , ವ್ಯಾಪಾರ ಮಾಡಿ ಯಾಮಾರಿಸಿ ಮೋಸ ಮಾಡಲು ಕಾದು ಕುಳಿತಿದ್ದಾರೆ ಎಂಬ ಮಾಹಿತಿಯೂ ಇದೆ. ರೈಸ್ ಪುಲ್ಲಿಂಗ್ ದಂಧೆಕೋರರು ತಯಾರಿಸಿರುವ ಈ ನಕಲೀ ಅಂಬರ್ ಗ್ರೀಸ್ ಕೂಡ ಈಗ ಕೆಲವರ ಬಳಿಯಿವೆ! ರೆಡ್ ಮರ್ಕ್ಯುರಿ, ಈಸ್ಟ್ ಇಂಡಿಯಾ ಕಂಪನಿ ಬಾಂಡ್ ಪೇಪರ್ ಗಳು, ತಾಮ್ರದ ಚೆಂಬಿನ ಜೊತೆಗೆ ಈ ನಕಲಿ ತಿಮಿಂಗಿಲ ವಾಂತಿಯನ್ನು ವ್ಯಾಪಾರಕ್ಕಿಟ್ಟು ವಂಚನೆ ನಡೆಸುವ ಗುಂಪುಗಳು ಈಗ ದೇಶಾದ್ಯಂತ ಅಲ್ಲಲ್ಲಿ ಸಕ್ರಿಯವಾಗಿವೆ! ಯಾಮಾರಿದರಂತೂ ಚೆಂಬು ಗ್ಯಾರಂಟಿ. ನಕಲೀ ಪ್ರಾಡೆಕ್ಟ್ ಗಳನ್ನೇ ಒರಿಜಿನಲ್ ಎಂದು ನಂಬಿಸಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಇವುಗಳಿಗೆ ಕೋಟ್ಯಂತರ ರೂಪಾಯಿ ಬೆಲೆ ಇದೆಯೆಂದು ಯಾಮಾರಿಸಿ ರಿಯಲ್ ಎಸ್ಟೇಟ್ ಉದ್ಯಮಿಗಳನ್ನು ಬಿಸಿನೆಸ್ ಮ್ಯಾನ್ ಗಳನ್ನು, ವಂಚಿಸುವ ನೆಟ್ವರ್ಕ್ ಜಾಲಗಳೇ ಕೊರೋನೋತ್ತರ



ವಿಶ್ವದಲ್ಲಿ ಈಗ ಹೆಚ್ಚು ಸಕ್ರಿಯವಾಗಿವೆ.ಈಗ ಭಾರತದಲ್ಲಷ್ಟೆ ಅಲ್ಲದೆ ಹಲವಾರು ದೇಶಗಳಲ್ಲೂ ಇಂತದೇ ಅಂಬರ್ ಗ್ರೀಸ್ ಹವಾ ಜೋರಾಗಿಯೇ ಎದ್ದಿದೆ. ಕೆಲವರು ರೈಸ್ ಪುಲ್ಲಿಂಗ್ ಎಂಬ ತಾಮ್ರದ ವಸ್ತುವಿಗಾಗಿ ಹಿಂದೆ ಬಿದ್ದಿದ್ದಂತೆ ಈ ತಿಮಿಂಗಿಲ ವಾಂತಿಗಾಗಿ ಹಿಂದೆ ಬಿದ್ದು ಕೋಟಿಗಟ್ಟಲೆ ಹಣ ಗಳಿಸುವ ಆಸೆಯಿಂದ ಜನರನ್ನು ವಂಚಿಸುತ್ತಾ ಪೊಲೀಸರ ಅತಿಥಿಗಳಾಗುತ್ತಾ ಜೈಲು ಸೇರುತ್ತಿದ್ದಾರೆ. ಇತ್ತೀಚೆಗೆ ಕರ್ನಾಟಕ ದ ಹಲವಾರು ಜಿಲ್ಲೆಗಳಲ್ಲಿ ಇಂತಹ ಹಲವಾರು ಅಂಬರ್ ಗ್ರೀಸ್ ಗ್ಯಾಂಗ್ ಗಳನ್ನು ಹಿಡಿದು ಹೆಡೆಮುರಿ ಕಟ್ಟಿ ಜೈಲಿಗೆ ಅಟ್ಟಿರುವ ಕರ್ನಾಟಕ ಪೊಲೀಸರು ಈ ತಿಮಿಂಗಿಲ ವಾಂತಿಯ ಹಿಂದಿನ ಕರಾಳ ದಂಧೆಯನ್ನು ಬೇಧಿಸಲು ಸತತವಾಗಿ ಪ್ರಯತ್ನಿಸುತ್ತಲೆ ಇದ್ದಾರೆ. ಈ ಅಂಬರ್ ಗ್ರೀಸ್ ನಮ್ಮ ಭಾರತದಲ್ಲಿ ನಿಷೇಧಿತ ವಸ್ತುವಾಗಿದ್ದು ಈ ಸ್ಪರ್ಮ್ ವೇಲ್ ಜಾತಿಯ ಜಲಚರ ಪ್ರಾಣಿಗಳ ಶಿಕಾರಿಯನ್ನು ,ದಾಸ್ತಾನು, ಸ್ಮಗ್ಲಿಂಗ್ ಮಾರಾಟವನ್ನು ಸಂಪೂರ್ಣ ವಾಗಿ ಕಾನೂನು ಬಾಹಿರವಾಗಿ ನಿಷೇಧಿಸಲಾಗಿದೆ. ಈಗ ಈ ತಿಮಿಂಗಿಲಗಳನ್ನು ಜಗತ್ತಿನಲ್ಲಿ ಅಳಿವಿನಂಚಿನಲ್ಲಿರುವ ವನ್ಯ ಪ್ರಾಣಿಗಳೆಂದು ಘೋಷಣೆ ಮಾಡಲಾಗಿದೆ. ವನ್ಯಜೀವಿ ಸಂರಕ್ಷಣಾ ಕಾಯ್ದೆ ನಿಯಮಗಳ ಅಡಿ ಕೊಲ್ಲುವ, ಸ್ಮಗ್ಲಿಂಗ್ ಮಾಡುವ ಆರೋಪಿಗಳನ್ನು ಪ್ರಕರಣ ದಾಖಲಿಸಿಕೊಂಡು ಬಂಧಿಸಿ ಜೈಲಿಗಟ್ಟಬಹುದಾಗಿದೆ.

● 11ನೇ ಪುಟಕ್ಕೆ...

# ಮುಸ್ಲಿಂ ಮತಗಳಿಕೆಯತ್ತ ಮೂರುಪಕ್ಷಗಳ ಕಿರುಚಾಟ..!



ಇದ್ದಕ್ಕಿದ್ದ ಹಾಗೆ ಮುಸ್ಲಿಂ ಪ್ರೇಮ ಈ ರಾಜಕೀಯ ಪಕ್ಷಗಳಿಗೆ ಹುಟ್ಟಿಕೊಂಡಿದ್ದು ಯಾಕೆ ಎನ್ನುವ ಬಗ್ಗೆ ವಿಶ್ಲೇಷಿಸುತ್ತಾ ಹೋದರೆ ಅದರ ಇಂದೆ ರಾಜಕಾರಣದ ವಾಸನೆ..ಮತಗಳಿಕೆಯ ಪ್ರೇಮವೇ ಹೊರೆತು ನಿಜವಾದ ಮುಸ್ಲಿಂ ಬಗ್ಗೆ ಖಾಳಜಿಯಾಗಲಿ ಅಥವಾ ಅವರ ಬಗ್ಗೆ ಅನುಕಂಪವಾಗಲಿ ಇಲ್ಲ ಎನ್ನುವುದು ಎಲ್ಲರಿಗೂ ಗೊತ್ತಿರುವ ಸತ್ಯ.

ಯಾಕೆ ಈಗ ಈ ಟ್ರಪ್ ಕಾರ್ಡ್ ಮುನ್ನೆಲೆಗೆ ತಂದರು ಎನ್ನುವುದು ಹುಡುಕುತ್ತಾ ಹೋದರೆ ಎರಡು ಸಿಂದಗಿ ಮತ್ತು ಹಾನಗಲ್ ನಲ್ಲಿ ಎರಡು ಪಕ್ಷಗಳು ಮತಗಳಿಕೆಗೆ ಇದನ್ನು ಬಳಸಲು ಎನ್ನುವುದು ಬೇರೆ ಮಾತು ಆದರೆ ಇದು ಎಲ್ಲಿಂದ ಆರಂಭವಾಯಿತು.. ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಬಳಸಿದ ಮುಸ್ಲಿಂ ಪ್ರೇಮದಿಂದ ಆರಂಭವಾಗಿದ್ದು ಎಲ್ಲೆಲ್ಲಿಗೋ ಹೋಗಿಬರುತ್ತಿದೆ.

ಕುಮಾರಸ್ವಾಮಿ ಸಿಂದಗಿ ಉಪ ಚುನಾವಣೆಯಲ್ಲಿ ಮುಸ್ಲಿಂ ಮಹಿಳಾ ಅಭ್ಯರ್ಥಿಯನ್ನು ಹಾಕುವ ಮೂಲಕ ಎಲ್ಲೋ ಒಂದು ಕಡೆ ಬಿಜೆಪಿಗೆ ಅನುಕೂಲ ಮಾಡಿಕೊಟ್ಟಿದ್ದಾರೆ ಎನ್ನುವ ಆರೋಪಗಳು ಕೇಳಿ ಬರುತ್ತಿವೆ..ಹಾಗೆ ಅಭ್ಯರ್ಥಿಯನ್ನು ಕಣಕ್ಕಿಳಿಸುತ್ತಿದ್ದಂತೆ ಇತ್ತ ಮುಸ್ಲಿಂ ಓಲೈಕೆಯ ಮಾತುಗಳನ್ನು ಆರಂಭಸಿದರು ಯಾಕೆಂದರೆ ಸದ್ಯ ಈಗ ಜೆಡಿಎಸ್ ಪಕ್ಷಕ್ಕೆ ಮುಸ್ಲಿಂ ಮತಗಳು ಅನಿವಾರ್ಯ ತೆಲುಂಟಾಗಿದೆ ಇನ್ನೊಂದೆಡೆ ಮುಂದಿನ 2023ರ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ಮುಸ್ಲಿಂ ಮತಗಳ ಓಲೈಕೆಯಲ್ಲಿ ಮುಂದಾದರು ಹೀಗಾಗಿಯೇ ಇದ್ದಕ್ಕಿದ್ದಂತೆ ಅವರು ಆರ್‌ಎಸ್‌ಎಸ್ ಮೇಲೆ ಅಟ್ಯಾಕ್ ಮಾಡಿದರು..ಆ ಮೂಲಕ ಆದ ಚರ್ಚೆಗಳು ಮಾತಿಗೆ ಮಾತು ಇನ್ನೂ ಕೊನೆಗೊಂಡಿಲ್ಲ.. ಚುನಾವಣೆ ಮುಗಿದರೂ ಅದು ಮುಗಿಯುವ ಲಕ್ಷಣಗಳು ಕಡಿಮೆ ಎನಿಸುತ್ತದೆ. ಇತ್ತ ಸಿದ್ದರಾಮಯ್ಯ ಕೂಡ ತಾಲೀಬಾನ್ ಬಗ್ಗೆ ಮಾತನಾಡುವುದರೊಂದಿಗೆ ಚರ್ಚೆಗೆ ಮತ್ತಷ್ಟು ತೀವ್ರತೆ ತಂದರು ಬಿಜೆಪಿ ಅದಕ್ಕೆ ಉತ್ತರಿಸುವ ಬರದಲ್ಲಿ ಸಾಲು ಸಾಲು ನಾಯಕರು ಸಿದ್ದು ವಿರುದ್ಧ ತಿರುಗಿ ಬಿದ್ದರು ಇನ್ನು ಜೆಡಿಎಸ್ ಮುಸ್ಲಿಂ ಪ್ರೇಮಕ್ಕೆ ಕಾಂಗ್ರೆಸ್ ಜಮೀರ್ ಅಹಮದ್ ಅವರನ್ನು ಬಿಟ್ಟು ಸುಮ್ಮನಾದರು ಜಮೀರ್ ನಿರಂತರವಾಗಿ ಎಚ್‌ಡಿಕೆ ವಿರುದ್ಧ ವಾಗ್ದಾಳಿ ನಡೆಸುತ್ತಲೇ ಇದ್ದಾರೆ ಹಾಗಾದರೆ ಈ ಮುಸ್ಲಿಂ ಮತಗಳು ಬೇಕಿದರುವುದು ಈಗ ಒಂದು ಕಾಂಗ್ರೆಸ್ ಇನ್ನೊಂದು ಜೆಡಿಎಸ್‌ಗೆ ಹಾಗಾಗಿ ಜೆಡಿಎಸ್ ಈ ಮುಸ್ಲಿಂ ಟ್ರಪ್ ಕಾರ್ಡ್ ಉಪಯೋಗಿಸುತ್ತಿದ್ದಂತೆ ಎಲ್ಲಿ ನಮ್ಮ ಸಂಪ್ರದಾಯ ಮತಗಳು ಕಡಿಮೆಯಾಗುತ್ತವೋಎನ್ನವು ಕಾರಣಕ್ಕೆ ಇದ್ದಕ್ಕಿದ್ದಂತೆ ತಮ್ಮ ಹೊಸ ವರಸೆಯನ್ನು ಆರಂಭಮಾಡಿಕೊಂಡಿತು.

ಎಚ್‌ಡಿಕೆ ವಿರುದ್ಧ ತಿರುಗಿ ಬಿದ್ದ ನಾಯಕರು ಜೆಡಿಎಸ್ ಪಕ್ಷ ಕೇವಲ ತೋರಿಕೆಯಷ್ಟೆ ಮುಸ್ಲಿಂ ಸಮುದಾಯಕ್ಕೆ ಯಾವುದೇ ಅನುಕೂಲ ಮಾಡಿಕೊಡುವುದಿಲ್ಲ ಕೇವಲ ಕುಟುಂಬ ರಾಜಕಾರಣವೇ ಅವರಿಗೆ ಮುಖ್ಯ ಎನ್ನುವ ಹೇಳಿಕೆ ಮೂಲಕ ರೊಚ್ಚಿಗೆಬ್ಬಿಸಿತು ತಂದೆ ಮಕ್ಕಳು ಮೊಮ್ಮಕ್ಕಳು ಈಗ ಕಾಂಗ್ರೆಸ್ ಈ ಮುಸ್ಲಿಂ ಮತಗಳ ಕಸಿಯುವುದನ್ನು ಸಹಿಸದೆ ಸಿದ್ದು ,ಜಮೀರ್ ಮತ್ತು ಡಿಕೆಶಿ ವಿರುದ್ಧ ಒಂದು ರೀತಿ ರೊಚ್ಚಿಗೆದ್ದು ಹೇಳಿಕೆಗಳನ್ನು ನೀಡುತ್ತಾ ಹೋದರು.. ಹೆಚ್ ಡಿ ಕುಮಾರಸ್ವಾಮಿ ಅವರಂತೂ ಕಾಂಗ್ರೆಸ್ ಪ್ರಬಲ ನಾಯಕ ಸಿದ್ದರಾಮಯ್ಯ ಅವರನ್ನು ಮುಸ್ಲಿಂ ನಾಯಕರ ಟರ್ಮಿನೇಟರ್ ಎಂದು ಕರೆದು ತೀಕ್ಷ್ಣ ವಾಗ್ದಾಳಿಯನ್ನು ಕಾಂಗ್ರೆಸ್ ಹಾಗೂ ಸಿದ್ದರಾಮಯ್ಯ ವಿರುದ್ಧ ಮಾಡಿದ್ದರು. ಅಲ್ಲದೆ, ಆರ್‌ಎಸ್‌ಎಸ್ ವಿರುದ್ಧ ಸತತ ಟೀಕೆಯನ್ನು ಮಾಡುತ್ತಾ ಅಲ್ಪಸಂಖ್ಯಾತರ ಅದರಲ್ಲೂ ಮುಸ್ಲಿಮರ ಮತಗಳನ್ನು ಸೆಳೆಯಲು ಪ್ರಯತ್ನ ಪಡುತ್ತಿದ್ದಾರೆ.

ಸಾಂದರ್ಭಿಕ ಚಿತ್ರ ಇದಕ್ಕೆ ಪ್ರತಿಯಾಗಿ ಕಾಂಗ್ರೆಸ್ ಕೂಡಾ ಅಲ್ಪಸಂಖ್ಯಾತ ಮತಗಳನ್ನು ತನ್ನಲ್ಲೇ ಉಳಿಸಿಕೊಳ್ಳಲು ಶತಾಯಗತಾಯ ಯತ್ನಿಸುತ್ತಿದೆ. ಜೆಡಿಎಸ್ ಪಕ್ಷಕ್ಕೆ ಅಲ್ಪಸಂಖ್ಯಾತರ ಮೇಲೆ ಅಷ್ಟೊಂದು ಪ್ರೀತಿಯಿದ್ದರೆ ಜೆಡಿಎಸ್ ಪ್ರಭಾವ ಹೆಚ್ಚಾಗಿರುವ ಮಂಡ್ಯ, ರಾಮನಗರ ಭಾಗದಲ್ಲೇ ಮುಸ್ಲಿಮರಿಗೆ ಟಿಕೆಟ್ ಕೊಟ್ಟು ಕಣಕ್ಕೆ ಇಳಿಸಲಿ ಎಂದು ಸವಾಲು ಹೂಡಿದೆ. ಕಾಂಗ್ರೆಸ್ ತನ್ನ ಅಲ್ಪಸಂಖ್ಯಾತ ಪ್ರಭಾವಿ ನಾಯಕ ಝುಮೀರ್ ಅಹ್ಮದ್ ಅವರನ್ನೇ ಜೆಡಿಎಸ್ ವಿರುದ್ಧ ಛೂಬಿಟ್ಟಿದ್ದು, ಮಾಜಿ ಜೆಡಿಎಸ್ ನಾಯಕನೂ ಆಗಿರುವ ಝುಮೀರ್, ಜೆಡಿಎಸ್ ವಿರುದ್ಧ ತನ್ನ ಪಕ್ಷಕ್ಕೆ ಅನುಕೂಲವಾಗುವ ರೀತಿಯಲ್ಲಿ ಸರಣಿ ಟೀಕಾಸ್ತ್ರ ಹೂಡುತ್ತಿದ್ದಾರೆ.

ಹೆಚ್ ಡಿ ಕುಮಾರಸ್ವಾಮಿ ಅವರ ವಿರುದ್ಧ ನೇರವಾಗಿಯೇ ವಾಗ್ದಾಳಿಗೆ ಇಳಿದಿರುವ ಝುಮೀರ್, ಜೆಡಿಎಸ್ ಪಕ್ಷದ ಹಾಗೂ ಹೆಚ್‌ಡಿಕೆ ಅವರ ಮುಸ್ಲಿಮರ ಮೇಲಿನ ಕಾಳಜಿಯನ್ನು ಪ್ರಶ್ನಿಸುತ್ತಿದ್ದಾರೆ. ಇನ್ನೊಂದೆಡೆ ಜೆಡಿಎಸ್, ಮುಸ್ಲಿಮರ ಮತಗಳನ್ನು ಸೆಳೆಯಲು ಅಲ್ಪಸಂಖ್ಯಾತರ ಕಾರ್ಯಾಗಾರವನ್ನೂ ನಡೆಸಿದ್ದು, ಸ್ಥಳೀಯ ಮುಸ್ಲಿಂ ನಾಯಕರನ್ನು ಪಕ್ಷಕ್ಕೆ ಸೇರಿಸಿಕೊಳ್ಳುವ ಕಡೆಗೆ ಗಮನ ಕೇಂದ್ರೀಕರಿಸಿದೆ. ಕಾಂಗ್ರೆಸ್ ಎಂಎಲ್‌ಸಿ ಸಿಎಂ ಇಬ್ರಾಹಿಂ ಅವರು ಇನ್ನೇನು ಜೆಡಿಎಸ್ ಸೇರ್ಪಡೆಗೊಳ್ಳಲಿದ್ದಾರೆ. ಅದಕ್ಕೆ ಪೂರಕವಾಗಿ, ಇಬ್ರಾಹಿಂ ಅಲ್ಪಸಂಖ್ಯಾತರ ಕಲ್ಯಾಣಕ್ಕೆ ಕಾಂಗ್ರೆಸ್ ಪ್ರಾಮಾಣಿಕವಾಗಿ ಪ್ರಯತ್ನ ಪಡುತ್ತಿಲ್ಲ ಎಂದು ಆರೋಪ ಮಾಡುತ್ತಿದ್ದಾರೆ. ಸ್ವಪಕ್ಷದ ಮೇಲೆ ಬಹಿರಂಗವಾಗಿಯೇ ಟೀಕಾಸ್ತ್ರ ಹೂಡುತ್ತಿರುವ ಸಿಎಂ ಇಬ್ರಾಹಿಂ ಹಿಂದೆ ಜೆಡಿಎಸ್ ಹಿತಾಸಕ್ತಿ ಕೆಲಸ ಮಾಡುತ್ತಿದೆ ಎನ್ನುವುದು ಸತ್ಯ. ಹಾಗಾಗಿಯೇ, ಇತ್ತೀಚೆಗೆ ಕುಮಾರಸ್ವಾಮಿ ಇಬ್ರಾಹಿಂ ಅವರನ್ನು ಅವರ ನಿವಾಸದಲ್ಲಿಯೇ ಭೇಟಿಯಾಗಿ ಮಾತುಕತೆ ನಡೆಸಿ ಬಂದಿದ್ದರು. ಇದೀಗ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಕೂಡಾ ಅಲ್ಪಸಂಖ್ಯಾತರ ಹೆಸರು ಹೇಳಿಕೊಂಡು ಕಾಂಗ್ರೆಸ್ ವಿರುದ್ಧ ಅಖಾಡಕ್ಕೆ ಇಳಿದಿದ್ದು, ಚುನಾವಣೆ ಬಂದಾಗ ಅಲ್ಪಸಂಖ್ಯಾತರ ಮೇಲೆ ಕಾಂಗ್ರೆಸ್ ಅತಿ ಪ್ರೀತಿ ತೋರಿಸುತ್ತದೆ ಎಂದು ಹೇಳಿದ್ದಾರೆ. ಕಾಂಗ್ರೆಸ್ ಚುನಾವಣೆ ಬಂದಾಗ ಮಾತ್ರ ನಿಮ್ಮ ರಕ್ಷಣೆ ಮಾಡುತ್ತದೆ ಎಂದು ನಂಬಿಸುತ್ತದೆ. ಅಲ್ಪಸಂಖ್ಯಾತರಿಗೆ ದೊಡ್ಡ ಅನ್ಯಾಯ ಮಾಡಿದ ಯಾವುದಾದರೂ ಪಕ್ಷವಿದ್ದರೆ ಅದು ಕಾಂಗ್ರೆಸ್ ಎಂದು ಬೊಮ್ಮಾಯಿ ಹೇಳಿದ್ದಾರೆ. ಕಾಂಗ್ರೆಸ್‌ನ ಅಲ್ಪಸಂಖ್ಯಾತ ಮತಬ್ಯಾಂಕ್ ಅನ್ನು ಒಡೆಯುವಲ್ಲಿ ಜೆಡಿಎಸ್ ಹಾಗೂ ಬಿಜೆಪಿ ನಿರತವಾಗಿದ್ದು, ತಮಗೂ ಅಲ್ಪಸಂಖ್ಯಾತರ ಮೇಲೆ ಕಾಳಜಿ ಇದೆ ಎಂದು ಘೋಷಿಸಿಕೊಳ್ಳುತ್ತಾ ಇದೆ.

ಚುನಾವಣಾ ಪ್ರಚಾರ ಸಭೆಯಲ್ಲಿ ಮಾಜಿ ಮುಖ್ಯಮಂತ್ರಿ ಬಿಎಸ್ ಯಡಿಯೂರಪ್ಪ ಕೂಡಾ ಇದೇ ಅರ್ಥದಲ್ಲಿ ಮಾತನಾಡಿದ್ದರು. ನನ್ನಿಂದ ಅಥವಾ ಬಿಜೆಪಿಯಿಂದ ಅಲ್ಪಸಂಖ್ಯಾತರಿಗೆ ಒಂದು ಅನ್ಯಾಯ ಆಗಿದ್ದರೆ ಒಂದೇ ಒಂದು ಉದಾಹರಣೆ ತೋರಿಸಿ ಎಂದು ಸವಾಲು ಹಾಕಿದ್ದಾರೆ. ವಿಜಯಪುರದಲ್ಲಿ ಚುನಾವಣಾ ಪ್ರಚಾರಾರ್ಥಕವಾಗಿ ಮಾತನಾಡಿದ ಬಿಎಸ್‌ವೈ, ಮುಸ್ಲಿಮರಿಗೆ ನಾನು ಯಾವತ್ತೂ ಬೇಧಭಾವ ಮಾಡಿಲ್ಲ. ಮುಸ್ಲಿಂ ಬಾಂಧವರಿಗೆ ತಪ್ಪಿಸಿ, ಹಿಂದುಗಳಿಗೆ ಏನೂ ಹೆಚ್ಚು ಕೊಟ್ಟಿಲ್ಲ. ನೀವ್ಯಾಕೋ ನನ್ನಿಂದ ದೂರ ಹೋಗ್ತಿರೋ ಹಾಗೆ ಕಾಣುತ್ತಿದೆ. ನನ್ನ ಮೇಲೆ ನಂಬಿಕೆಯಿಡಿ, ನಮಗೆ ಬೆಂಬಲಿಸಿ ಎಂದು ಮುಸ್ಲಿಮರನ್ನು ಉದ್ದೇಶಿಸಿ ಮನವಿ ಮಾಡಿದ್ದಾರೆ. ಇತ್ತೀಚಿನ ಘಟನೆಗಳನ್ನೇ ಗಮನಿಸುವುದಾದರೆ, ರಾಜ್ಯದಲ್ಲಿ ಕೋಮು ಭಾವನೆಗಳನ್ನು ಉದ್ದೀಪನಗೊಳಿಸಲಾಗುತ್ತಿದೆ. ಹಿಂದೂ ಪರ ಸಂಘಟನೆಗಳು ಮತಾಂತರ, ಹಿಂದು ಮಹಿಳೆಯರ ರಕ್ಷಣೆಯೆಂದು ಬಹಿರಂಗವಾಗಿ ಆಯುಧ ದೀಕ್ಷೆಗಳನ್ನು ನಡೆಸುತ್ತಾ ಬಂದಿದ್ದೇವೆ. ಬಹಿರಂಗವಾಗಿಯೇ ಮಾರಣ ಹೋಮದ ಬೆದರಿಕೆಗಳನ್ನು ಹಾಕಲಾಗುತ್ತಿದೆ. ಆದರೆ, ಸಿಎಂ ಬೊಮ್ಮಾಯಿ ಇವುಗಳನ್ನು ಕ್ರಿಯೆಗೆ ಪ್ರತಿಕ್ರಿಯೆ ಎಂಬುದಾಗಿ ಸಹಜವೆಂಬಂತೆ ಬಿಂಬಿಸುತ್ತಿದ್ದಾರೆ. ಆದರೆ, ಹಿಂದೂ ಪರ ಬಲಪಂಥೀಯ ಸಂಗಟನೆಗಳು ಹುಟ್ಟುಹಾಕುತ್ತಿರುವ ದ್ವೇಷದ ವಾತಾವರಣ ಅಲ್ಪಸಂಖ್ಯಾತರ ಆತಂಕಕ್ಕೆ ಕಾರಣವಾಗಿದೆ. ಅದಾಗ್ಯೂ ಬಿಎಸ್ ಯಡಿಯೂರಪ್ಪ ಬಿಜೆಪಿಯಿಂದ ಮುಸ್ಲಿಮರಿಗಾದ ಅನ್ಯಾಯವನ್ನು ಉದಾಹರಿಸಿ ಎಂದು ಕೇಳುತ್ತಿರುವುದು ಹಾಸ್ಯಾಸ್ಪದವಲ್ಲದೆ ಮತ್ತೇನೂ ಅಲ್ಲ. ಒಂದೆಡೆ ಕಾಂಗ್ರೆಸ್ ಹಾಗೂ ಜೆಡಿಎಸ್ ಮುಸ್ಲಿಮರ ಮತಕ್ಕೆ ನಿರ್ಲಜ್ಜವಾಗಿ ಬಲೆ ಬೀಸಿ, ತಮಗೆ ಬರಬಹುದಾದ ಮತಗಳನ್ನು ಎಣಿಸುತ್ತಲೇ ಮುಸ್ಲಿಮರ ರಾಜಕೀಯ ಪ್ರಾತಿನಿಧ್ಯ, ಸಾಮಾಜಿಕ ಸ್ಥಿತಿಗತಿಗಳನ್ನು ಕಡೆಗಣಿಸುತ್ತಿದೆ. ಬಿಜೆಪಿಯಂತೂ ಬಂದಷ್ಟು ಬರಲಿ ಎಂಬಂತೆ ತಾನು ಮಾಡಿದ ಕೋಮು ಆಧಾರಿತ ರಾಜಕಾರಣವನ್ನು ಮರೆತಂತೆ ನಟಿಸಿ ಮುಸ್ಲಿಮರ ಓಲೈಕೆಯಲ್ಲಿ ತೊಡಗಿದೆ. ಸಿಂದಗಿ, ಹಾನಗಲ್ ಕ್ಷೇತ್ರದ ಈ ಉಪಚುನಾವಣೆ ಮೂರು ಪಕ್ಷಗಳ ಮುಸ್ಲಿಂ ಪ್ರೇಮ ವನ್ನು ಜಾಹಿರುಗೊಳಿಸಿದ್ದಂತೂ ಸುಳ್ಳಲ್ಲ!

---

## ಅಂಬರ್ ಗ್ರೀಸ್ ಹೆಸರಲ್ಲಿ ತಿಮಿಂಗಿಲಗಳಿಗೂ ಗಂಡಾಂತರ..!!



● 5ನೇ ಪುಟದಿಂದ...

ಕೆ.ಜಿ.ಗೊಂದು ಕೋಟಿ ಬೆಲೆ ಬಾಳುವ ವಸ್ತುವೆಂದು ಈ ತಿಮಿಂಗಿಲ ವಾಂತಿಯನ್ನು ಬೆನ್ನತ್ತಿ, ರಾತ್ರಿ ಬೆಳಗಾಗುವುದರಲ್ಲಿ ಕೋಟ್ಯಾಧಿಪತಿಯಾಗುವ ಹುಚ್ಚು ಮೋಹಕ್ಕೆ ಬಿದ್ದು ವಾರಕ್ಕೊಂದು ತಂಡ ಈಗ ರಾಜ್ಯದಲ್ಲಿ ಬಂದೀಖಾನೆಗೆ ಅಂದರ್ ಆಗುತ್ತಿವೆ.

ನಿಜವಾಗಲೂ ಈ ತಿಮಿಂಗಿಲ ವಾಂತಿಗೆ (ಅಂಬರ್ ಗ್ರೀಸ್) ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಅಷ್ಟೊಂದು ಕಿಮ್ಮತ್ತು ಇದೆಯಾ? ಒಂದು ಕೆ.ಜಿ. ಅಂಬರ್ ಗ್ರೀಸ್ ಒಂದು ಕೋಟಿ ಬೆಲೆಬಾಳುತ್ತಾ? ಎಂಬುದು ಈಗಲೂ ಬಗೆಹರಿಯದ ಪ್ರಶ್ನೆಯೇ. ಏಕೆಂದರೆ ಹಲವಾರು ವಂಚಕರ ಜಾಲಗಳು ಹೆಣೆದಿರುವ ಬಲೆಯಾಗಿರಲೂಬಹುದು. ಸುಗಂಧ ದ್ರವ್ಯಗಳನ್ನು ಉತ್ಪಾದಿಸುವ ಪ್ರಕ್ರಿಯೆಯಲ್ಲಿ ಈ ತಿಮಿಂಗಿಲ ವಾಂತಿಯ ಯಾವ ಪಾತ್ರ ವಹಿಸುತ್ತದೆ? ನಿಜವಾಗಲೂ ಈ ಅಂಬರ್ ಗ್ರೀಸ್ ಗೆ ಅಂತಹ ವಿಶೇಷ ಗುಣವಿದೆಯೇ? ಎಂಬ ಅನುಮಾನಗಳು ಈಗ ತನಿಖೆ ನಡೆಸುತ್ತಿರುವ ಪೊಲೀಸರಿಗೂ ಕಾಡುತ್ತಿವೆ. ಏಕೆಂದರೆ ಇದುವರೆಗೂ ಹಲವಾರು ಸುಗಂಧ ದ್ರವ್ಯ ತಯಾರಿಕೆಯಲ್ಲಿ ಹೂವು, ಹೆಣ್ಣುಗಳು ಮತ್ತು ಕೆಲವು ಸಸ್ಯಗಳು ಮರಗಳ ಎಲೆಗಳು, ತೊಗಟೆಯನ್ನು ಬಳಸಿ ಸುವಾಸನಾ ಭರಿತವಾದ ವೈವಿಧ್ಯಮಯವಾದ ಹಲವಾರು ಸುಗಂಧ ದ್ರವ್ಯಗಳನ್ನೂ, ಆಹಾರ ಪದಾರ್ಥಗಳಿಗೆ ಬಳಸುವ ಸುಗಂಧವನ್ನು ಸೂಸುವ ಎಣ್ಣೆ ಗಳನ್ನೂ, ಮದ್ಯಪಾನಕ್ಕೆ ಬೆರೆಸುವ ದ್ರವ್ಯಗಳನ್ನು ತಯಾರಿಸಲಾಗುತ್ತಿದೆ ಆದರೆ ಎಲ್ಲಿಯೂ ತಿಮಿಂಗಿಲ ವಾಂತಿಯ ಮಹತ್ವದ ಬಗ್ಗೆಯಾಗಲೀ ಪ್ರಾಮುಖ್ಯತೆ ವಿಚಾರವಾಗಲೀ ಸುದ್ದಿಗೆ ಬಂದಿರಲಿಲ್ಲ. ಆದರೂ ಈಗ ಎಲ್ಲಾ ಕಡೆಯೂ ಸುವಾಸನೆ ಭರಿತ ಸೆಂಟುಗಳ ಹಿಂದೆ ವಾಂತಿಯ ವಾಸನೆ ಹರಿದಾಡುತ್ತಿದೆ! ಮಧ್ಯ ಪ್ರಾಚ್ಯದ ಅರಬ್ ಯೆಮೆನ್ ನಾ ದಕ್ಷಿಣ ಭಾಗದ ಕಡಲಿನಲ್ಲಿ ಮೀನು ಬೇಟೆಗೆ ಹೋಗಿದ್ದ 35 ಜನ ಮೀನುಗಾರರಿಗೆ 127 ಕೆ.ಜಿ. ತಿಮಿಂಗಿಲ



ವಾಂತಿ ಸಿಕ್ಕಿದ್ದರಿಂದ ಅವರೆಲ್ಲಾ ರಾತ್ರೋರಾತ್ರಿ ಕೋಟ್ಯಾಧಿಪತಿ ಗಳಾದರೂ! ಜಪಾನಲ್ಲೊಬ್ಬ ಮೀನು ಹಿಡಿಯಲು ಹೋಗಿದ್ದ ಬಡವನೊಬ್ಬ ಅಂಬರ್ ಗ್ರೀಸ್ ಸಿಕ್ಕು ಶ್ರೀಮಂತನಾದ! ಎಂಬಿತ್ಯಾದಿ ಸುದ್ದಿಗಳು ಸಾಮಾಜಿಕ ಜಾಲತಾಣಗಳಲ್ಲಿ ಪ್ರತಿನಿತ್ಯ ಹರಿದಾಡುತ್ತಿವೆ. ಬ್ಲಾಕ್ ಗೋಲ್ಡ್ ಎಂದು ಕರೆಯುವ ಈ ಅಂಬರ್ ಗ್ರೀಸ್ ರೂಪುಗೊಳ್ಳಲು ಹಲವಾರು ವರ್ಷಗಳೇ ಬೇಕಾಗುತ್ತದೆ. ಆದರೇ ಈ ಅಂಬರ್ ಗ್ರೀಸ್ ಕದಿಯಲು ಕಡಲ್ಗಳ್ಳರು ಕ್ಷಣದಲ್ಲೇ ತಿಮಿಂಗಿಲಗಳನ್ನು ಕೊಂದು ನಿರ್ನಾಮ ಮಾಡಲು ಹೊರಟಿದ್ದಾರೆ. ಸುಗಂಧ ದ್ರವ್ಯಗಳು ಹೆಚ್ಚು ಕಾಲ ಕೆಡದಂತೆ ಸುವಾಸನೆ ಭರಿತ ವಾಗಿರಲು ಈ ಅಂಬರ್ ಗ್ರೀಸ್ ಬೇಕಾಗುತ್ತದೆ ಎಂದು ಹೇಳಲಾಗುತ್ತಿದೆ. ಈ ಅಂಬರ್ ಗ್ರೀಸ್ ಗಾಗಿ ತಿಮಿಂಗಿಲ ಗಳನ್ನು ಕೊಲ್ಲಬೇಕಿರುವುದರಿಂದ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಇದರ ಬೆಲೆ ದಿನೇ ದಿನೇ ದುಬಾರಿ ಯಾಗುತ್ತಿದೆಯಂತೇ! ಈ ವೀರ್ಯ ತಿಮಿಂಗಿಲಗಳು ಅಪರೂಪದ ಪ್ರಭೇದಗಳಾಗಿರುವುದರಿಂದ ಕಳ್ಳ ಸಾಗಾಣಿಕೆದಾರರು ಈ ವೀರ್ಯ ತಿಮಿಂಗಿಲ(ಸ್ಪೆರ್ಮ್ ವೆಲ್) ಪ್ರಭೇದಗಳನ್ನೇ ಗುರಿಯಾಗಿಸಿಕೊಂಡಿದ್ದಾರೆ. ಇಂಡೋನೇಷ್ಯಾ, ಯು. ಕೆ. ಶ್ರೀಲಂಕಾ ಮುಂತಾದ ದೇಶಗಳ ಸಮುದ್ರಯಾನಗಳ ಮೂಲಕ ಈ ಅಂಬರ್ ಗ್ರೀಸ್ ಅನ್ನು ಕಳ್ಳ ಸಾಗಾಣಿಕೆ ಮಾಡಲಾಗುತ್ತಿದೆಯಂತೆ. ತಮಿಳು ನಾಡು, ಮುಂಬೈ, ಗುಜರಾತ್, ಅಹಮದಾಬಾದ್,ಕೇರಳದ ಕಡಲ ತೀರಗಳಲ್ಲಿ ಈ ಅಂಬರ್ ಗ್ರೀಸ್ ಅನ್ನು ಹೆಚ್ಚಾಗಿ ಪೊಲೀಸರು ಇದುವರೆಗೂ ವಶಪಡಿಸಿಕೊಂಡಿದ್ದಾರೆ. ಬೆಂಗಳೂರು.ಮೈಸೂರು. ಮಡಿಕೇರಿ.ಶಿರಸಿ.ಕಾರವಾರ.ಸೋಮವಾರಪೇಟೆ.ಮುಂತಾದ ಕಡೆ ದಾಸ್ತಾನು ಮಾಡಿ ಅಡಗಿಸಿಟ್ಟಿದ್ದ ಕೋಟ್ಯಂತರ ರೂಪಾಯಿ ಬೆಲೆ ಬಾಳುವ ತಿಮಿಂಗಿಲ ವಾಂತಿಯನ್ನು ಕರ್ನಾಟಕ ಪೊಲೀಸರು ವಶಕ್ಕೆ ಪಡೆದು ಸ್ಮಗ್ಲರ್ ಗಳನ್ನು ಬಂಧಿಸಿ ಜೈಲಿಗಟ್ಟಿದ್ದಾರೆ. ದಂಧೆಕೋರರ ಬಂಧನ-ಬಿಡುಗಡೆ ಹೀಗೆಯೇ ನಡೆಯುತ್ತಿದೆ. ಆದರೇ ಒಳಗೊಳಗೇ ಮಾತ್ರ ಅಪರೂಪದ ಅಳಿವಿನಂಚಿನ ಸಮುದ್ರ ಜಲಚರ ಜೀವಿಗಳಾದ ತಿಮಿಂಗಿಲಗಳ ಮಾರಣಹೋಮ ಸದ್ದಿಲ್ಲದೆ ನಡೆಯುತ್ತಲೇ ಇದೆ. ಈ ದುರಾಸೆಯ ದುರುಳ ಮಾನವ ಇನ್ಯಾವ್ಯಾವ ಜೀವಿಗಳ ಮೇಲೆ ತನ್ನ ವಕ್ರದ್ರಷ್ಠಿ ಬೀರುತ್ತಾನೋ..? ಅವನೆಗದೆಷ್ಟು ಹಣದ ಹಸಿವೋ..?






**ನಮ್ಮ ನಾಡಗೀತೆಯಾಗಿ ಕುವೆಂಪು ಕೃತ "ಜಯ ಭಾರತ ಜನನಿಯ ತನುಜಾತೆ, ಜಯಹೇ ಕರ್ನಾಟಕ ಮಾತೆ"ಯನ್ನು ಅಧಿಕೃತವಾಗಿ ಅಂಗೀಕರಿಸಿ ಬರೋಬ್ಬರಿ 21 ವರ್ಷವಾಗಿದೆ. ಆದರೆ ಅದನ್ನು ಹಾಡುವ ರಾಗ ಶೈಲಿ ಲಯ ಹೇಗಿರಬೇಕೆಂಬ ವಿಚಾರದಲ್ಲಿ ಯುದ್ಧೋಪಾದಿ ಹೇಳಿಕೆ ಪ್ರತಿ ಹೇಳಿಕೆ ಸಾಗಿದೆ. ಇದೇ ನೆಪದಲ್ಲಿ ಸಿ.ಅಶ್ವಥ್ ಗುಂಪು, ಮೈಸೂರು ಅನಂತಸ್ವಾಮಿ ಗುಂಪಿನ ನಡುವೆ ರಮಾರಂಪಾಟ ನಡೆದಿದೆ.**

# ನಾಡಗೀತೆಗೂ ರಾಜಕೀಯದ ಬಣ್ಣ


ರಾಜಸೂತ್ರ
ಎಂ.ಕೆ. ಭಾಸ್ಕರ ರಾವ್
ಹಿರಿಯ ಪತ್ರಕರ್ತರು




"ಜಯ ಭಾರತ ಜನನಿಯ ತನುಜಾತೆ
ಜಯಹೇ ಕರ್ನಾಟಕ ಮಾತೆ...

ಕರ್ನಾಟಕದ ಮನೆ ಮನೆಗಳಲ್ಲಿ; ಕರುನಾಡಿನ ಮನಮನಗಳಲ್ಲಿ ನಿತ್ಯವೂ ಒಸರುವ; ಕನ್ನಡ ಭಾಷೆ ನೆಲದ ಸಂಸ್ಕೃತಿಯ ಸೊಗಡನ್ನು ಉತ್ತುಬಿತ್ತುವ ಗೀತೆ ಇದು. ಕುವೆಂಪು ನಾಮಾಂಕಿತ ರಾಷ್ಟ್ರಕವಿ, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಸಾಹಿತಿ ಕುಪ್ಪಳಿ ವೆಂಕಟಪ್ಪ ಪುಟ್ಟಪ್ಪ ದಶಕಗಳ ಹಿಂದೆ ರಚಿಸಿದ ಈ ಹಾಡು ಕೇವಲ ಕವನವಾಗಷ್ಟೇ ಉಳಿದಿಲ್ಲ, ಅದು ಕನ್ನಡದ ಅಸ್ಮಿತೆ. 21 ವರ್ಷದ ಹಿಂದೆ 2000ದಲ್ಲಿ ಅಧಿಕೃತವಾಗಿ ಘೋಷಿಸಲಾದ ನಾಡ ಗೀತೆ ಇದು. ಸರ್ಕಾರದ ನಿರ್ಧಾರವನ್ನು ಕನ್ನಡಿಗರು ಹೃದಯಪೂರ್ವಕವಾಗಿ ಒಪ್ಪಿಕೊಂಡು ಆನಂದಿಸಿದ್ದಾರೆ. ಒಳ್ಳೆಯ ಕೆಲಸಕ್ಕೆ ನೂರೆಂಟು ವಿಘ್ನ ಎನ್ನುತ್ತಾರಲ್ಲ, ಹಾಗೆ ನಾಡಗೀತೆಯ ಸ್ಥಿತಿ ಕೂಡಾ. ಬಹುತೇಕರಲ್ಲಿ ಹೃದ್ಗತವಾಗಿರುವ ಕವಿತೆಯನ್ನು ಹೀಗೇ ಹಾಡಬೇಕೆಂಬ ನಿಯಮ ಇನ್ನೂ ಜಾರಿಗೆ ಬಂದಿಲ್ಲ. ತಮತಮಗೆ ತೋಚಿದಂತೆ ಹಾಡುತ್ತಿರುವ ಪರಿ ನಾಡಗೀತೆಯ ಘನತೆಯನ್ನೂ ಗೌರವವನ್ನೂ ಅಧೋಮುಖಿಯಾಗಿಸಿದೆ.

ಹಾಡೊಂದನ್ನು ಹೇಗೆ ಹಾಡಬೇಕು ಎನ್ನುವುದನ್ನು ಕವಿ ತೀರ್ಮಾನಿಸುವುದಿಲ್ಲ. ಅಂಥ ಪ್ರಕರಣಗಳಿದ್ದರೆ ಅವು ಅಪರೂಪ. ಸ್ವರಪ್ರಸ್ತಾರವನ್ನು ಹಾಕಿ ರಾಗ ಸಂಯೋಜನೆ ಮಾಡುವ ಸಂಗೀತ ನಿರ್ದೇಶಕನ ಸಂತೋಷದ ಘನೀಕೃತ ರೂಪವಾಗಿ ಕವನವೊಂದು ಹಾಡಾಗಿ ಹೊರಹೊಮ್ಮುತ್ತದೆ. ಅದನ್ನು ಜನ ಸ್ವೀಕರಿಸುವುದು ಇಲ್ಲವೇ ತಿರಸ್ಕರಿಸುವುದು ನಂತರದ ಮಾತು. ಮೊದಲಿಗೆ ಮೈಸೂರು ಅನಂತಸ್ವಾಮಿ ಸಂಯೋಜನೆಯ ಹಾಡು ಬಂದಾಗ ಕನ್ನಡಿಗರು ಅದನ್ನು ಆನಂದೋಲ್ಲಾಸದಲ್ಲಿ ಸ್ವೀಕರಿಸಿದರು. ಆದರೆ ಇದು ಹಳೆಯ ಕಥೆ. ನಮ್ಮ ನಾಡಗೀತೆಯ ವಿಚಾರದಲ್ಲಿ ಇದನ್ನು ಹೀಗೇ ಹಾಡಬೇಕೆಂಬುದು ಒತ್ತಡದ ಮೂಲವಾಗಿದೆ. ಈ ಒತ್ತಡದ ಕಾರಣವಾಗಿ ನಾಡಗೀತೆ ಎನ್ನುವುದು ಐಕ್ಯಗಾನವಾಗುವ ಬದಲಿಗೆ ಒಡಕಿನ ರಾಗವಾಗುವ ಸೂಚನೆ ಕಾಣಿಸುತ್ತಿದೆ. ಮೈಸೂರು ಅನಂತಸ್ವಾಮಿ ಗುಂಪು; ಸಿ. ಅಶ್ವಥ್ ಗುಂಪು ಎಂಬ ಎರಡು ಕವಲುಗಳು ಪಿತ್ರಾರ್ಜಿತ ಆಸ್ತಿಗಾಗಿ ಕಚ್ಚಾಡುವ ಮಕ್ಕಳ ರೀತಿಯಲ್ಲಿ ವರ್ತಿಸುತ್ತಿರುವ ರೀತಿ ನಾವೆಲ್ಲ ನಾಚಿ ತಲೆ ತಗ್ಗಿಸುವಂತೆ ಮಾಡುತ್ತಿದೆ.







ಎಂಭತ್ತರ ದಶಕದಲ್ಲಿ ಮೈಸೂರಿನಲ್ಲಿ ನಡೆದ ಮೊದಲ ವಿಶ್ವ ಕನ್ನಡ ಸಮ್ಮೇಳನದಲ್ಲಿ ಇದನ್ನು ಸ್ವಾಗತ ಗೀತೆಯಾಗಿ ಹಾಡುವುದಕ್ಕೆ ಪೂರ್ವದಲ್ಲೆ "ಮನ ಮೆಚ್ಚಿದ ಮಡದಿ" ಚಲನ ಚಿತ್ರದಲ್ಲಿ ಈ ಹಾಡನ್ನು ಬಳಸಿಕೊಳ್ಳಲಾಗಿತ್ತು. ಸಂಗೀತ ನಿರ್ದೇಶಕ ಜಿ.ಕೆ. ವೆಂಕಟೇಶ್ ರಾಗ ಸಂಯೋಜನೆಯಲ್ಲಿ ಗಾಯಕ ಪಿ.ಬಿ.ಶ್ರೀನಿವಾಸ್ ಹಾಡಿದ್ದರು. ಆ ಕಾಲದಲ್ಲಿ ಆ ಹಾಡನ್ನು ಕೇಳಿದವರು ಈ ಕ್ಷಣದಲ್ಲೂ ಅದನ್ನು ಮೆಲುಕು ಹಾಕುತ್ತಾರೆ; ಅದೇ ಧಾಟಿಯಲ್ಲಿ ಗುನುಗುತ್ತಾರೆ. ಹಾಡು ಹರಿದ ಲಯಕ್ಕೆ ಮನಸೋಲುತ್ತಾರೆ. ಸಿನಿಮಾದಲ್ಲಿ ಬಳಕೆಯಾದ ಹಾಡು ಎಂದರೆ ಅದಕ್ಕೆ ನಮ್ಮಲ್ಲಿ ತೂಕ ಕಡಿಮೆ. ಕೊಂಚ ತಾತ್ಸಾರವೂ ಸೇರಿದೆ. ಸಿನಿಮಾಕ್ಕೆ ಬರೆಯುವ ಸಾಹಿತ್ಯವೆಲ್ಲವೂ ಮೂರು ನಿಮಿಷದ ಬರಹ ಎಂಬಂಥ ಮೂದಲಿಕೆ ಮಾತುಗಳನ್ನು ಕನ್ನಡದ ದೊಡ್ಡ ದೊಡ್ಡ ಕವಿಗಳೆ ಹೇಳಿರುವುದೂ ಉಂಟು. ಆದರೆ ಕುವೆಂಪು ಈ ಪದ್ಯವನ್ನು ಸಿನಿಮಾಕ್ಕಾಗಿ ಬರೆದಿರಲಿಲ್ಲ, ಇಂದಲ್ಲ ನಾಳೆ ಸಿನಿಮಾಕ್ಕೆ ಬಳಕೆ ಆಗಬಹುದೆಂಬ ಸಣ್ಣ ಯೋಚನೆಯೂ ಅವರಲ್ಲಿರಲಿಲ್ಲ. ಅದೇನೇ ಇರಲಿ ಆ ಸಿನಿಮಾ ಬಿಡುಗಡೆ ಆದ ತರುವಾಯದಲ್ಲಿ ಬಹುತೇಕ ಕನ್ನಡಿಗರ ಬಾಯಲ್ಲಿ ಅದು ಹೊತ್ತುಗೊತ್ತಿನ ಪರಿಧಿಯನ್ನು ದಾಟಿ ಅನುರಣಿಸಿದ್ದು ಈಗಲೂ ಮುಂದುವರಿದಿದೆ. ಶಾಲೆ ಕಾಲೇಜುಗಳಲ್ಲಿ ಆಗಾಗ ನಡೆಯುವ ಸಮಾರಂಭಗಳಲ್ಲಿ, ಕಾರ್ಯಕ್ರಮಗಳಲ್ಲಿ ಮಕ್ಕಳು ಸಿನಿಮಾ ಧಾಟಿಯಲ್ಲಿ ನಾಡಗೀತೆಯನ್ನು ಹಾಡುವುದು ಸಾಮಾನ್ಯವಾಗಿದೆ. ಹಾಡನ್ನು ಹೇಗೆ ಹಾಡಬೇಕು ಎನ್ನುವುದು ಆ ಮಕ್ಕಳಿಗೂ ಗೊತ್ತಿಲ್ಲ. ಕಲಿಸುವ ಶಿಕ್ಷರಿಗೂ ಗೊತ್ತಿಲ್ಲ. ನಾಡ ಗೀತೆಯನ್ನು ಹೀಗೇ ಹಾಡತಕ್ಕದ್ದು ಎಂಬ ಲಿಖಿತ ಆದೇಶ ಇಲ್ಲದ ಕಾರಣವಾಗಿ ಅವರವರ ಭಾವಕ್ಕೆ ಅವರವರ ಮನಸ್ಸಿಗೆ ತೋಚಿದಂತೆ ಹಾಡುವುದು ರೂಢಿಯಾಗಿದೆ. ಇದಕ್ಕೆ ನೇರ ಹೊಣೆ ಸರ್ಕಾರ.



ವಿಶ್ವ ಕನ್ನಡ ಸಮಾವೇಶವನ್ನು ನಡೆಸಬೇಕೆಂಬ ಸ್ವಾಗತಾರ್ಹ ತೀರ್ಮಾನವನ್ನು ತೆಗೆದುಕೊಂಡಿದ್ದು ಆರ್.ಗುಂಡೂರಾವ್ ನೇತೃತ್ವದ ಕಾಂಗ್ರೆಸ್ ಸರ್ಕಾರ. ಪುಸ್ತಕ ಪ್ರಕಟಣೆಯೂ ಸೇರಿದಂತೆ ವಿವಿಧ ಕಾರ್ಯಕ್ರಮಗಳ ರೂಪುರೇಖೆಗೆ ಅವರ ಸರ್ಕಾರವೇ ಕಾರಣವಾಗಿತ್ತು. ಆದರೆ ಈ ನಿರ್ಧಾರ ಹೊರಬಿದ್ದ ಬೆನ್ನಲ್ಲೇ ಚುನಾವಣೆ ಘೋಷಣೆಯಾಯಿತು. ಕಾಂಗ್ರೆಸ್ ಅಧಿಕಾರ ಕಳೆದುಕೊಂಡಿತು. ರಾಜ್ಯದ ಪ್ರಥಮ ಕಾಂಗ್ರೆಸ್ಸೇತರ ಜನತಾ ಪಕ್ಷದ ಸರ್ಕಾರ ರಾಮಕೃಷ್ಣ ಹೆಗಡೆ ನೇತೃತ್ವದಲ್ಲಿ ಅಸ್ತಿತ್ವಕ್ಕೆ ಬಂತು. ಹಿಂದಿದ್ದ ಕಾಂಗ್ರೆಸ್ ಸರ್ಕಾರ ತೆಗೆದುಕೊಂಡಿದ್ದ ಹಲವು ತೀರ್ಮಾನಗಳನ್ನು ಹೆಗಡೆ ಸರ್ಕಾರ ರದ್ದುಗೊಳಿಸಿತು. ಆದರೆ ವಿಶ್ವ ಕನ್ನಡ ಸಮ್ಮೇಳನ ನಡೆಸುವ ತೀರ್ಮಾನವನ್ನು ಮಾತ್ರ ಆದ್ಯತೆಯ ಮೇಲೆ ಕೈಗೆತ್ತಿಕೊಂಡಿತು. ಕುವೆಂಪು, ಖ್ಯಾತ ಕಾದಂಬರಿಕಾರ, ಇನ್ನೊಬ್ಬ ಜ್ಞಾನಪೀಠ ಪುರಸ್ಕೃತ ಬರಹಗಾರ ಶಿವರಾಮ ಕಾರಂತರ ಸಮ್ಮುಖದಲ್ಲಿ ವಿಶ್ವ ಕನ್ನಡ ಸಮ್ಮೇಳನ ಮೈಸೂರಿನಲ್ಲಿ ಯಶಸ್ವಿಯಾಗಿ ನಡೆಯಿತು. ಅದರ ಉದ್ಘಾಟನಾ ಕಾರ್ಯಕ್ರಮದಲ್ಲಿ ಮೈಸೂರು ಅನಂತಸ್ವಾಮಿ ರಾಗ ಸಂಯೋಜನೆಯಲ್ಲಿ "ಜಯ ಭಾರತ ಜನನಿಯ ತನುಜಾತೆ; ಜಯಹೇ ಕರ್ನಾಟಕ ಮಾತೆ... ಹಾಡಲಾಯಿತು. ನೆರೆದಿದ್ದವರೆಲ್ಲರ ಕರತಾಡನ, ಹರ್ಷೋದ್ಗಾರ, ಮುಕ್ತ ಶ್ಲಾಘನೆ ಅದಕ್ಕೆ ದೊರೆಯಿತು. ಅನಂತಸ್ವಾಮಿ ಸಂಯೋಜನೆಯ ಧಾಟಿ ಎಲ್ಲರಿಗೂ ಇಷ್ಟವಾಗಿದ್ದಷ್ಟೇ ಅಲ್ಲ, ಮುಂದೆ ನಾಡಗೀತೆಯಾಗಿ ಕುವೆಂಪು ಕೃತಿಯನ್ನು ಆಯ್ಕೆ ಮಾಡುವ ಸಂದರ್ಭದಲ್ಲಿ ಇದೇ ರಾಗ ಸಂಯೋಜನೆಯ ಸ್ಥಾಪಿತ ಧಾಟಿಯ ಗಾಯನಕ್ಕೆ ಹೆಚ್ಚಿನ ಒಲವು ವ್ಯಕ್ತವಾಯಿತು. ಅನಂತಸ್ವಾಮಿಯವರು ಹೇಳಿದಂತೆ ಹಾಡಿನ ಧಾಟಿಯನ್ನು ಸ್ವತಃ ಕುವೆಂಪು ಕೂಡಾ ಮೆಚ್ಚಿದ್ದರು. ಸಮೂಹ ಗಾಯನದಲ್ಲಿ ಪ್ರಸ್ತುತ ಪಡಿಸುವುದಕ್ಕೆ ಒಲವು ತೋರಿದ್ದರು.

ನಾಡಗೀತೆಯಾಗಿ ಇದನ್ನು ಆಯ್ಕೆ ಮಾಡಬೇಕೆಂಬ ಪ್ರಕ್ರಿಯೆ ಸಾಗಿದ್ದ ಸಮಯದಲ್ಲಿ ವಿವಾದವೊಂದು ಉದ್ಭವಿಸಿತ್ತು. ಆಚಾರ್ಯತ್ರಯರಲ್ಲಿ ಇಬ್ಬರಾದ ಶಂಕರಾಚಾರ್ಯ, ರಾಮಾನುಜಾಚಾರ್ಯರ ಹೆಸರು ಬಸವೇಶ್ವರರ ಜೊತೆಯಲ್ಲಿದೆ. ಆಚಾರ್ಯತ್ರಯರಲ್ಲಿ ಇನ್ನೊಬ್ಬ ಪ್ರಮುಖರಾದ ಮಧ್ವಾಚಾರ್ಯರ ಹೆಸರನ್ನು ಬಿಡಲಾಗಿದೆ. ಶಂಕರಾಚಾರ್ಯರು ಅಥವಾ ರಾಮಾನುಜಾಚಾರ್ಯರು ಕರ್ನಾಟಕದವರಲ್ಲ. ಶಂಕರರದು ಕೇರಳ; ರಾಮಾನುಜರದು ತಮಿಳುನಾಡು. ಹೀಗಿರುವಾಗ ಅಪ್ಪಟ ಕನ್ನಡಿಗರಾದ ಮಧ್ವಾಚಾರ್ಯರ ಹೆಸರನ್ನು ಬಿಟ್ಟರೆ ಅಪಚಾರ ಎಸಗಿದಂತೆ ಆಗದೆ ಎಂಬ ಕೂಗು ಗರಿಗಟ್ಟಿಕೊಂಡಿತು. ತಾವು ಆಚಾರ್ಯ ಮಧ್ವರ ಹೆಸರನ್ನು ಉದ್ದೇಶಪೂರ್ವಕವಾಗಿಯೇ ಬಿಟ್ಟಿದ್ದಾಗಿ ಕುವೆಂಪು ಹೇಳಿದ್ದಾರೆಂಬ ಮಾತೂ ಕೆಲವು ವಲಯದಲ್ಲಿ ತೇಲಾಡಿತು. ಮಧ್ವರ ಹೆಸರನ್ನು ಬಿಟ್ಟು ನಾಡಗೀತೆಯಾಗಿ ಈ ಹಾಡನ್ನು ಒಪ್ಪಿಕೊಳ್ಳುವುದು ಕಷ್ಟವಾದೀತೆಂಬ ಹಿನ್ನೆಲೆಯಲ್ಲಿ ಅಂದಿನ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಜಿ.ನಾರಾಯಣ, ಕುವೆಂಪು ಮನವೊಲಿಸಿ ಮಧ್ವರ ಹೆಸರನ್ನು ಸೇರಿಸಲು ಒಪ್ಪಿಗೆ ಪಡೆದರೆಂಬ ಮಾಹಿತಿಯೂ ಮಾಧ್ಯಮಗಳಲ್ಲಿ ವರದಿಯಾಯಿತು. ಆದರೆ ಕವನದ ಮೇಲಿನ ಹಕ್ಕು ಹೊಂದಿದ್ದ ಕುವೆಂಪು ಪುತ್ರ, ಖ್ಯಾತ ಸಾಹಿತಿ ಪೂರ್ಣಚಂದ್ರ ತೇಜಸ್ವಿ ಮಧ್ವಾಚಾರ್ಯರ ಹೆಸರಿನ ಸೇರ್ಪಡೆಗೆ ವಿರೋಧ ಸೂಚಿಸಿದರೂ ಅದು ಗಾಳಿಯಲ್ಲಿ ತೇಲಿ ಹೋಯಿತು.





ಇಷ್ಟೆಲ್ಲ ಆಗುವ ಹೊತ್ತಿಗೆ ಸಿ.ಅಶ್ವಥ್ ಹೊಸ ಸ್ವರೂಪದಲ್ಲಿ ರಾಗಸಂಯೋಜಿಸಿದ್ದ "ಜಯ ಭಾರತ ಜನನಿಯ ತನುಜಾತೆ ಜಯಹೇ ಕರ್ನಾಟಕ ಮಾತೆ' ಅಪ್ಪಳಿಸಿತು. ಹೊಸ ರಾಗ ಸಂಯೋಜನೆಯಲ್ಲಿ ಬಂದ ಈ ಹಳೆ ಹಾಡು ಮತ್ತೆ ಜನಮನ ಸೂರೆಗೊಂಡಿತು. ಅಶ್ವಥ್‌ರು ಹಾಡಿದ ಹಾಡಿನ ಸಿಡಿ/ ಕ್ಯಾಸೆಟ್‌ಗಳು ಬಿಸಿ ದೋಸೆಯಂತೆ ಖರ್ಚಾದವು. ಆರ್ಕೆಸ್ಟ್ರಾಗಳಲ್ಲಿ, ಸುಗಮ ಸಂಗೀತ ಕಾರ್ಯಕ್ರಮಗಳಲ್ಲಿ ಅಶ್ವಥ್ ಹಾಡು ವಿಜೃಂಭಿಸಿತು. ಶಾಲೆ ಕಾಲೇಜುಗಳಲ್ಲಿಯೂ ಸಿನಿಮಾ ಹಾಡಿನ ಬದಲಿಗೆ ಅಶ್ವಥ್ ರಾಗಾಲಾಪ ಮೇಲುಗೈ ಪಡೆಯಿತು. ಅಷ್ಟರ ಮಟ್ಟಿಗೆ ಅನಂತಸ್ವಾಮಿ ಹಾಕಿದ ಧಾಟಿಯ ಹಾಡಿಗೆ ಹಿನ್ನಡೆ ಉಂಟಾಯಿತು. ಅಶ್ವಥ್‌ರ ಹಾಡನ್ನು ಜನಮನ ಅಂಗೀಕರಿಸಿರುವುದರಿಂದ ಮತ್ತು ಅತ್ಯಂತ ಜನಪ್ರಿಯ ಗಾಯನವಾಗಿ ಗಾಯಕ ಸಮುದಾಯ ಅದನ್ನು ಒಪ್ಪಿಕೊಂಡಿರುವುದರಿಂದ ಅಶ್ವಥ್ ಸಂಯೋಜನೆಯ ಹಾಡನ್ನೇ ಅಧಿಕೃತವಾಗಿ ನಾಡಗೀತೆಯೆಂದು ಸರ್ಕಾರ ಘೋಷಿಸಬೇಕೆಂಬ ಒತ್ತಡ ಶುರುವಾಯಿತು. ಅನಂತ ಸ್ವಾಮಿ ಸಂಯೋಜನೆ ಪರವಾಗಿಯೂ ವಾದ ಮಂಡನೆ ಹುರಿಗಟ್ಟಿಕೊಂಡಿತು. ಅನಗತ್ಯ ವಾದ, ಪ್ರತಿವಾದ ಬಗೆಹರಿಯದ ವಿವಾದ ಆಗುತ್ತಿರುವುದನ್ನು ಗಮನಿಸಿದ ಸರ್ಕಾರ, ನಾಡಗೀತೆ ಸ್ವರೂಪ ನಿರ್ಧರಿಸುವುದಕ್ಕೆ ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪ ನೇತೃತ್ವದಲ್ಲಿ ಸಮಿತಿಯೊಂದನ್ನು ರಚಿಸಿ ತತ್‌ಕ್ಷಣದ ತಲೆನೋವಿನಿಂದ ಪಾರಾಯಿತು. ಯಾವುದೇ ವಾದ ವಿವಾದವನ್ನು ಆರಂಭಿಕ ಹಂತದಲ್ಲಿಯೇ ಉಭಯಸಮ್ಮತ ರೀತಿಯಲ್ಲಿ ಇತ್ಯರ್ಥಗೊಳಿಸದೆ ಉದಾಸೀನ ತೋರಿಸಿದರೆ ಭವಿಷ್ಯದಲ್ಲಿ ಅದೇ ದೊಡ್ಡ ತಲೆನೋವಾಗಿ ಬೆಳೆಯುತ್ತದೆ ಎನ್ನುವುದಕ್ಕೆ ನಾಡಗೀತೆ ವಿವಾದ ನಮ್ಮ ಕಣ್ಮುಂದಿನ ನಾಚಿಕೆಗೇಡಿನ ನಿದರ್ಶನ. ಸರ್ಕಾರ ಇಂಥ ವಿಚಾರಗಳಲ್ಲಿ ತತ್‌ಕ್ಷಣದ ನಿರ್ಧಾರ ತೆಗೆದುಕೊಳ್ಳುವ ಬದಲಿಗೆ ಮಗುವನ್ನು ಒಂದು ಕೈಯಲ್ಲಿ ಚಿವುಟುತ್ತ ಮತ್ತೊಂದು ಕೈಯಲ್ಲಿ ತೊಟ್ಟಿಲು ತೂಗುವ ಕೆಲಸವನ್ನು ಮಾಡುತ್ತದೆ. ಇತ್ಯರ್ಥಕ್ಕೆ ಕಾದಿರುವ ಯಾವುದೇ ಸಂಗತಿ ಅದು ದೊಡ್ಡದಿರಲಿ, ಅಥವಾ ಚಿಕ್ಕದಿರಲಿ ಬಗೆ ಹರಿಯುವುದು ಸರ್ಕಾರಕ್ಕೆ ಒಪ್ಪಿತವಲ್ಲ. ನಾಡಗೀತೆ ವಿಚಾರದಲ್ಲೂ ಅದು ಈ ಇಪ್ಪತ್ತೊಂದು ವರ್ಷ ಮಾಡಿದ್ದು ಮತ್ತು ಈಗ ಮಾಡುತ್ತಿರುವುದು ಇದನ್ನೇ.

ಜಿಎಸ್‌ಎಸ್ ಸಮಿತಿ ಸುದೀರ್ಘ ಅಧ್ಯಯನ ನಡೆಸಿ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿತು. ಅನಂತಸ್ವಾಮಿ ಸಂಯೋಜಿಸಿದ ರಾಗದ ಧಾಟಿಯಲ್ಲೇ ನಾಡಗೀತೆ ಹಾಡುವುದನ್ನು ಆದೇಶದ ಮೂಲಕ ಸರ್ಕಾರ ಜಾರಿಗೆ ತರಬೇಕೆಂದು ವರದಿಯಲ್ಲಿ ಸ್ಪಷ್ಟವಾಗಿ ಬರೆಯಿತು. ಸರ್ಕಾರ ತಾನು ಸ್ವೀಕರಿಸಿದ ವರದಿಯನ್ನು ಸಂಬಂಧಿಸಿದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಕಳಿಸಿತು. ಇಲಾಖೆ ವರಿಷ್ಠರು ಆ ಫೈಲನ್ನು ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯಕ್ಕೆ ಕಳುಹಿಸಿ ಕೈ ತೊಳೆದುಕೊಂಡರು. ಅಷ್ಟು ಹೊತ್ತಿಗೆಲ್ಲ ಅಶ್ವಥ್ ಪರ ಗುಂಪು ಹೇಳಿಕೆ ಸಮರಕ್ಕೆ ತೋಳೇರಿಸಿ ಮುಂದಾಗಿತ್ತು. ಅನಂತಸ್ವಾಮಿ ರಾಗ ಸಂಯೋಜನೆಯ ನಾಡಗೀತೆ ಬೇಡ, ಅಶ್ವಥ್‌ರದು ಬೇಕು ಎಂಬ ವಾದ ಶುರುವಾಯಿತು. ಅನಂತ ಸ್ವಾಮಿ ಪರವಾಗಿರುವ ಗುಂಪು ಕೈಕಟ್ಟಿ ಕೂರಲಿಲ್ಲ. ಪರವಿರೋಧದ ಹೇಳಿಕೆಗಳಿಗೆ ಸಮರ್ಥನೆಗಳಿಗೆ ಮಾಧ್ಯಮ ವೇದಿಕೆಯಾಯಿತು. ಅವರು ಇವರು ಹೇಳಿದ್ದಕ್ಕೆ ಮಣಿಯುತ್ತ ಬಂದ ಸರ್ಕಾರ ತಾನೇನು ಮಾಡಬೇಕು ಎನ್ನುವುದರ ಅರಿವೇ ಇಲ್ಲದಂತೆ ಕಾಲು ಸೋತಂತೆ ಕೂತಿತು. ಯಾವುದೇ ಸರ್ಕಾರವಾಗಿರಲಿ ಅದರ ಇಂಥ ವರ್ತನೆ ಅಸಹ್ಯಕರ, ಅಪ್ರಬುದ್ಧ. ನಾಡಗೀತೆ ವಿಚಾರದಲ್ಲಿ ವರದಿ ಕೊಟ್ಟವರು ರಾಷ್ಟ್ರಕವಿಯೂ ಆಗಿದ್ದ ಜಿಎಸ್‌ಎಸ್. ಕುವೆಂಪು ಅವರ ನೇರ ಶಿಷ್ಯರಲ್ಲಿ ಮುಖ್ಯರಾದವರು. ಯಾವುದೇ ರಾಜಿ ಮುಲಾಜು ಒಲ್ಲದ ಗಂಭೀರ ಸ್ವಭಾವದ, ನೇರ ನಿಷ್ಟುರ ಸ್ವಭಾವದ ಜಿಎಸ್‌ಎಸ್. ವರದಿ ಒಪ್ಪಿಸಿದ ಬಳಿಕ ಸರ್ಕಾರದ ತೀರ್ಮಾನಕ್ಕೆ ಕಾದೂ ಕಾದೂ ಕುಳಿತರು.

ಕಾಲಾಯ ತಸ್ಮೈ ನಮಃ ಎನ್ನುತ್ತಾರಲ್ಲ. ಕುವೆಂಪು ಕಾಲದ ಕರೆಗೆ ಓಗೊಟ್ಟರು. ಅನಂತಸ್ವಾಮಿ, ಅಶ್ವಥ್ ತಿರುಗಿ ಬಾರದ ಲೋಕಕ್ಕೆ ಹೋದರು. ಜಿಎಸ್‌ಎಸ್ ವಿಧಿವಶರಾದರು. ನಾಡಗೀತೆ ವಿವಾದ ಮಾತ್ರ ಶಮನ ಆಗಲಿಲ್ಲ. ನಿಲ್ಲದ ವಿವಾದಕ್ಕೆ ಒಂದು ಕೊನೆ ಹಾಡುವ ಆಶಯದೊಂದಿಗೆ ಹಿರಿಯ ಕವಿ ಚನ್ನವೀರ ಕಣವಿ ನೇತೃತ್ವದಲ್ಲಿ ಇನ್ನೊಂದು ಸಮಿತಿಯನ್ನು ಸರ್ಕಾರ ರಚಿಸಿತು. ಅದರ ಸದಸ್ಯರು ಜಿಎಸ್‌ಎಸ್ ಸಮಿತಿಯ ವರದಿಯನ್ನು ಓದಿ ನೋಡುವ ಕುತೂಹಲ ವ್ಯಕ್ತಪಡಿಸಿದರು. ಆಸಕ್ತಿ ಸಹಜವಾದುದೆ ಆಗಿತ್ತು. ಆದರೆ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ "ಫೈಲು ಕಳೆದುಹೋಗಿದೆ" ಎಂಬ ಸಬೂಬನ್ನು ಮುಂದಿಟ್ಟಿತು. ಸರ್ಕಾರಿ ಕಚೇರಿಯಲ್ಲಿ ಫೈಲುಗಳು ಯಾವುಯಾವುದೋ ಕಾರಣಕ್ಕೆ ನಾಪತ್ತೆ ಆಗುವುದು ಹೊಸದೇನಲ್ಲ. ಕಳೆದು ಹೋದ ಫೈಲುಗಳು ಯಾರ್ಯಾರದೋ ಮನೆಯಲ್ಲಿ ಪತ್ತೆ ಆಗುವುದೂ ಹೊಸದಲ್ಲ. ಆದರೆ ನಿರ್ದೇಶನಾಲಯ ನಾಪತ್ತೆಯಾದ ಫೈಲನ್ನು ತಲಾಶ್ ಮಾಡುವ ಯತ್ನಕ್ಕೆ ಮುಂದಾಗಲೇ ಇಲ್ಲ. ಅಧಿಕೃತ ಸಮಿತಿಯೊಂದು ಸಲ್ಲಿಸಿದ ಅಧಿಕೃತ ಫೈಲೊಂದು ಕಳುವಾದರೆ ಅದಕ್ಕೆ ಕಾರಣ ಹುಡುಕುವ ತನಿಖೆ ನಡೆಯಬೇಡವೆ? ಇಲ್ಲ ಆ ಕೆಲಸ ಆಗಲೇ ಇಲ್ಲ. ಫೈಲು ನಾಪತ್ತೆಯಾಗಿದೆ ಎನ್ನುವುದು ಗೊತ್ತಾದ ಸಮಯದಲ್ಲಿ ಜಿಎಸ್‌ಎಸ್ ಮತ್ತು ಸಮಿತಿಯ ಅನೇಕ ಸದಸ್ಯರು ಜೀವಂತವಿದ್ದರು. ಮತ್ತೊಂದು ವರದಿಯನ್ನು ಸಿದ್ಧಪಡಿಸಿಕೊಡಿ ಎಂದು ಕೋರಬಹುದಾಗಿತ್ತು. ಊಹೂಂ ಇಂಥ ಯಾವ ಕೆಲಸವನ್ನೂ ಇಲಾಖೆ ಮಾಡದೇ ಇರುವುದು ಯಾವುದೋ ಸ್ಥಾಪಿತ ಹಿತಾಸಕ್ತಿ ಪರವಾಗಿ ಅಧಿಕಾರಿ/ ಸಿಬ್ಬಂದಿ ಕೆಲಸ ಮಾಡುತ್ತಿದ್ದಾರೆಂಬ ಅನುಮಾನ ಮೂಡುವುದಕ್ಕೆ ಕಾರಣವಾಯಿತು.

ಕಣವಿ ನೇತೃತ್ವದ ಸಮಿತಿ ಹಾಡನ್ನು 90 ಸೆಕೆಂಡ್‌ಗೆ ಸೀಮಿತಗೊಳಿಸಿತು. ಪದ್ಯ ಒಟ್ಟು ನಲವತ್ತು ಸಾಲುಗಳಲ್ಲಿದೆ. ಅದನ್ನು ಯಥಾವತ್ ಹಾಡುವುದಕ್ಕೆ ನಾಲ್ಕೈದು ನಿಮಿಷವಾದರೂ ಬೇಕು. ಅಷ್ಟೆಲ್ಲ ಹೊತ್ತು ಎದ್ದು ನಿಲ್ಲುವುದು ವಯಸ್ಸಾದವರಿಗೆ ಖಂಡಿತವಾಗಿಯೂ ಅಸಾಧ್ಯ. ಎಂದೇ ಸ್ಥೂಲಾರ್ಥದೊಂದಿಗೆ ಎಡಿಟ್ ಮಾಡಿ ಕಣವಿ ಸಮಿತಿ ವರದಿ ಒಪ್ಪಿಸಿತಷ್ಟೇ ಅಲ್ಲ ಅನಂತಸ್ವಾಮಿ ರಾಗ ಸಂಯೋಜನೆಯ ಹಾಡಿಗೆ ತನ್ನ ಅನುಮೋದನೆಯನ್ನು ಕೊಟ್ಟಿತು. ವರದಿಯ ಗತಿ ಏನಾಯಿತೆಂದು ಪ್ರತ್ಯೇಕವಾಗಿ ಕೇಳಬೇಡಿ. ಅದನ್ನು ಸ್ವೀಕರಿಸಿದ ಸರ್ಕಾರ ಕೆಳಗೆ ಹಾಕಿಕೊಂಡು ಕುಳಿತಿತು. ಈ ವರದಿ ಬಂದಾಗಲೂ ಪರ ವಿರೋಧ ಹೇಳಿಕೆಗಳು ರಾಚಿದವು. ಸರ್ಕಾರಕ್ಕೆ ಇಷ್ಟು ಹೊತ್ತಿಗೆ ನಾಚಿಕೆ ಆಗಬೇಕಿತ್ತು. 21 ವರ್ಷದ ಹಿಂದೆ ನಾಡಗೀತೆಯಾಗಿ ಅಂಗೀಕರಿಸಿದ ಹಾಡೊಂದರ ಅಧಿಕೃತ ಗಾಯನ ಹೇಗಿರಬೇಕೆಂಬ ತೀರ್ಮಾನವನ್ನು ತೆಗೆದುಕೊಳ್ಳಲಾಗದೇ ಹೋಗಿದ್ದಕ್ಕೆ.

ಇಷ್ಟಾದ ನಂತರವಾದರೂ ಸಕಾರಾತ್ಮಕ ಬೆಳವಣಿಗೆ ಘಟಿಸಿತೇ ಇಲ್ಲ... ಖಂಡಿತವಾಗಿಯೂ ಇಲ್ಲ. ಮತ್ತೊಂದು ಸಮಿತಿಯನ್ನು ಗಾಯಕಿ ಎಚ್.ಆರ್. ಲೀಲಾವತಿ ನೇತೃತ್ವದಲ್ಲಿ ರಚಿಸಿದ ಸರ್ಕಾರ ಇದೀಗ ಆ ವರದಿಯನ್ನು ತರಿಸಿಕೊಂಡಿದೆ. ಈ ವರದಿಯೂ ಅನಂತಸ್ವಾಮಿ ರಾಗ ಸಂಯೋಜನೆಯ ನಾಡಗೀತೆಗೆ ಸಮ್ಮತಿ ನೀಡಿದೆ. ವರದಿಯನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಕಚೇರಿಗೆ ಅವರ ಅನುಮತಿ ಕೋರಿ ಕಳಿಸಲಾಗಿದೆಯೆಂದೂ; ಸಿಂದಗಿ, ಹಾನಗಲ್ ಉಪ ಚುನಾವಣೆ ಪ್ರಚಾರ ಅಂತ್ಯಗೊಂಡ ಬಳಿಕ ಅವರು ತೀರ್ಮಾನ ತೆಗೆದು ಕೊಳ್ಳಲಿದ್ದಾರೆಂದೂ ಕನ್ನಡ ಸಂಸ್ಕೃತಿ ಸಚಿವ ಸುನಿಲ್ ಕುಮಾರ್ ಹೇಳಿದ್ದಾರೆ. ಇಷ್ಟೆಲ್ಲ ಅಧ್ವಾನಗಳ ನಡುವೆ ಇದೊಂದು ಸಮಾಧಾನಕರ ಬೆಳವಣಿಗೆ. ಏಕೆಂದರೆ ತಥಾಕಥಿತ ಈ ಫೈಲು ಇನ್ನೂ ಕಳುವಾಗಿಲ್ಲ.!!!!

# ಕಾಂಗ್ರೆಸ್‌ಗೆ 'ಮಹಿಳಾ ಟ್ರಂಪ್ ಕಾರ್ಡ್' ಯಶಸ್ಸು ತರಲಿದೆಯೇ..?

● ತುರುವನೂರು ಮಂಜುನಾಥ

ಈಗ ಉತ್ತರ ಪ್ರದೇಶದ ಮುಂದಿನ ವರ್ಷದ ಚುನಾವಣೆಯ ಅಬ್ಬರ ಈಗಿನಿಂದಲೇ ಆರಂಭವಾಗಿದೆ ಎಲ್ಲ ಕಡೆ ಜಾತಿ ಧರ್ಮದ ಮೇಲೆ ಹೊರಟಿದ್ದ ರಾಜಕಾರಣಿಗಳು ಈಗ ಇದ್ದಕ್ಕಿದ್ದಂತೆ ಮಹಿಳೆಯರ ಮೇಲಿನ ಪ್ರೀತಿ ಹೆಚ್ಚಾಗಿದೆ.. ಹೌದು ಇತ್ತೀಚೆಗೆ ಕಾಂಗ್ರೆಸ್‌ನ ಪ್ರಿಯಾಂಕ ಗಾಂಧಿ ಶೇಕಡ 40 ರಷ್ಟು ಮಹಿಳೆಯರಿಗೆ ಟಿಕೆಟ್ ನೀಡಲಾಗುತ್ತದೆ ಎಂದು ಘೋಷಿಸಿದ್ದಾರೆ ಹೀಗೆ ಹೇಳುತ್ತಿದ್ದಂತೆ ಬಿಜೆಪಿ ಬೆಚ್ಚಿಬಿದ್ದಿದೆ ಹಾಗಂತ ಹೆದರಿದೆ ಎಂದು ಅಲ್ಲ ಎಲ್ಲೋ ಒಂದು ಕಡೆ ಮಹಿಳೆಯರತ್ತ ಉತ್ತರ ಪ್ರದೇಶದ ರಾಜಕಾರಣ ಈಗ ಗಮನ ಸೆಳೆಯುತ್ತಿದೆ.

ಇಲ್ಲಿ ಹೀಗೆ ಹೇಳುವ ಮೂಲಕ ಪ್ರಿಯಾಂಕ ಗಾಂಧಿ ಪೂರ್ಣ ಪ್ರಮಾಣದ ರಾಜಕೀಯಕ್ಕೆ ಇಳಿದಿದ್ದಾರೆ ಪಂಜಾಬ್‌ನ ದಲಿತ ಮುಖ್ಯಮಂತ್ರಿ ಚರಣ್ ಜಿತ್ ಸಿಂಗ್ ಚನ್ನಿ ಅವರನ್ನು ಆರಿಸಿದ್ದರಲ್ಲೂ ಪ್ರಿಯಾಂಕಾ ನಿರ್ಧಾರ ಇತ್ತು ..ಹಾಗಾಗಿ ಎಲ್ಲೆಲ್ಲೂ ಪ್ರಿಯಾಂಕ ಸದ್ದು ಮಾಡುತ್ತಿದ್ದಾರೆ ಹಾಗಾಗಿ ಅವರ ಈ ಪೂರ್ಣ ಪ್ರಮಾಣದ ರಾಜಕೀಯ ಅವರ ಭವಿಷ್ಯದ ಅಡಿಗಲ್ಲಾಗಲಿದೆ ಎಂದು ರಾಜಕೀಯ ವಿಶ್ಲೇಷಣೆ ಮಾಡಲಾಗುತ್ತದೆ ಯಾಕೆಂದರೆ ಅವರ ಕೆಲವು ರಾಜಕೀಯ ನಿರ್ಧಾರಗಳು ಫಲಕಾರಿಯಾಗುತ್ತಿವೆ ಎನ್ನುವ ಮಾತು.. ಅಲ್ಲದೆ ಸಂದರ್ಭಕ್ಕೆ ತಕ್ಕಂತೆ ಹೇಳಿಕೆಗಳು ಮೋದಿ ಮೇಲೆ ನಡೆಸುವ ಅಟ್ಯಾಕ್ ಇವೆಲ್ಲವೂ ರಾಹುಲ್ ಗಾಂಧಿಗಿಂತಲೂ ಹೆಚ್ಚು ಪ್ರಚಾರ ಪಡೆಯುತ್ತಿವೆಯಲ್ಲದೆ ಮಹಿಳೆ ಎನ್ನುವ ಟ್ರಪ್‌ಕಾರ್ಡ್ ಹೆಚ್ಚು ಬಲವಾಗುತ್ತಿದೆ ಹೀಗಾಗಿಯೇ ಜಾತಿ-ಧರ್ಮ ಮೀರಿ ಮಹಿಳಾ ಮೀಸಲಾತಿ ಈ ಟ್ರಪ್ ಕಾರ್ಡ್ ಬಳಕೆ ಮಾಡಿದ್ದಾರೆ ಸಹಜವಾಗಿ ಇದು ಒಂದಿಷ್ಟು ಉತ್ತರ ಪ್ರದೇಶದಲ್ಲಿ ಅನುಕೂಲವಾಗಲೂ ಬದಹುದು.







ಕಳೆದ ಲೋಕಸಭಾ ಚುನಾವಣೆಯಲ್ಲಿ ಹೆಚ್ಚಿನ ಪರಿಣಾಮ ಮಾಡದ ಪ್ರಿಯಾಂಕಾ ಈ ಸಲ ಉತ್ತರಪ್ರದೇಶದಲ್ಲಿ ಕಾಂಗ್ರೆಸ್ಸಿನ ಮುಖ್ಯಮಂತ್ರಿ ಅಭ್ಯರ್ಥಿಯಂತೆಯೇ ಮುನ್ನುಗ್ಗುತ್ತಿರುವುದು ಪಕ್ಷದ ಕಾರ್ಯಕರ್ತರಲ್ಲಿ ಹೊಸ ನಿರೀಕ್ಷೆಯನ್ನಂತೂ ಹುಟ್ಟಿಸಿದೆ,ಈ ನಿರೀಕ್ಷೆಗೆ ಬಲ ತುಂಬುವಂತೆ ಪ್ರಿಯಾಂಕಾ ಹಠಾತ್ತನೆ ಮಹಿಳಾ ಕಾರ್ಡ್ ಚಲಾಯಿಸಿದ್ದಾರೆ; ಉತ್ತರಪ್ರದೇಶ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಶೇಕಡ 40 ಸ್ಥಾನಗಳನ್ನು ಮಹಿಳೆಯರಿಗೆ ಮೀಸಲಿಡಲಿದೆ ಎಂದು ಘೋಷಿಸಿದ್ದಾರೆ. ಈ ಘೋಷಣೆ ಈಚೆಗೆ ನಿಶ್ಚಿತ ಮತದಾರ ವಲಯವಿಲ್ಲದ ಕಾಂಗ್ರೆಸ್ಸಿನ ಅನಿವಾರ್ಯ ಜೂಜಿನಂತೆಯೂ ಕಾಣುತ್ತಿದೆ! 'ವಿಧಾನಸಭಾ ಚುನಾವಣೆಗೆ ನಿಲ್ಲುತ್ತೀರಾ' ಎಂಬ ಪ್ರಶ್ನೆಗೆ ಪ್ರಿಯಾಂಕಾ, 'ಯಾಕಾಗಬಾರದು?' ಎಂದಿದ್ದಾರೆ; ವಿಧಾನಸಭೆಯ ನೇರ ಚುನಾವಣೆಯನ್ನು ಎದುರಿಸದಿರುವ 'ಉತ್ತರ ಪ್ರದೇಶದ ಹಾಲಿ ಮುಖ್ಯಮಂತ್ರಿಯ ಎದುರು ಚುನಾವಣೆಗೆ ನಿಲ್ಲುತ್ತೀರಾ' ಎಂಬ ಪ್ರಶ್ನೆಗೂ ಪ್ರಿಯಾಂಕಾ 'ಯಾಕಾಗಬಾರದು?' ಎಂದಿದ್ದಾರೆ. ಉತ್ತರಪ್ರದೇಶ ವಿಧಾನಸಭಾ ಚುನಾವಣೆಯಲ್ಲಿ ಪ್ರಿಯಾಂಕಾ ಅವರು ಪಕ್ಷವನ್ನು ಮುನ್ನಡೆಸುತ್ತಾ, ಅಲ್ಲಿ ಸ್ಪರ್ಧಿಸುವುದು ಬಹುತೇಕ ಗ್ಯಾರಂಟಿಯಾಗಿದೆ; ಹೊಸ ತಲೆಮಾರಿನ ಕೈಗೆ ನಾಯಕತ್ವವನ್ನು ದಾಟಿಸಲೇಬೇಕಾದ ಅನಿವಾರ್ಯವನ್ನು ಕಾಂಗ್ರೆಸ್ ಒಪ್ಪಿಕೊಳ್ಳಲೇಬೇಕಾಗಿದೆ.

## ಪ್ರತಿಪಕ್ಷಗಳು ಗಂಭೀರ ಯೋಚನೆ

ಉತ್ತರ ಪ್ರದೇಶದಲ್ಲಿ ಕಾಂಗ್ರೆಸ್‌ಗೆ ದೊಡ್ಡ ನೆಲೆಯೇನೂ ಇಲ್ಲ. ಹಾಗಿದ್ದರೂ ಇತರ ಪ್ರಮುಖ ಪಕ್ಷಗಳು ಪ್ರಿಯಾಂಕಾ ಅವರ ಘೋಷಣೆಗೆ ಎದುರೇಟು ನೀಡುವುದು ಹೇಗೆ ಎಂಬ ಬಗ್ಗೆ ಗಂಭೀರವಾಗಿ ಯೋಚಿಸುತ್ತಿವೆ. ಏಕೆಂದರೆ, ಉತ್ತರ ಪ್ರದೇಶದ ಒಟ್ಟು 14.40 ಕೋಟಿ ಮತದಾರರಲ್ಲಿ ಮಹಿಳೆಯರ ಸಂಖ್ಯೆ 6.60 ಕೋಟಿ. ಪ್ರಮಾಣ ಶೆ 45.89ರಷ್ಟು. ಪ್ರಿಯಾಂಕಾ ಮಾಡಿರುವ ಘೋಷಣೆಯು ಮಹಿಳೆಯರ ಮನ ಮುಟ್ಟಿದರೆ, ಫಲಿತಾಂಶದಲ್ಲಿ ದೊಡ್ಡ ಬದಲಾವಣೆಗೆ ಅದು ಕಾರಣವಾಗಬಲ್ಲುದು ಎಂಬುದು ಎಲ್ಲ ರಾಜಕೀಯ ಪಕ್ಷಗಳಿಗೂ ತಿಳಿದಿದೆ

ಆದರೆ, ರಾಜಕೀಯ ಪಕ್ಷಗಳ ಇಂತಹ ಘೋಷಣೆಯ ಹಿಂದೆ ಪ್ರಾಮಾಣಿಕವಾದ ಕಳಕಳಿ ಇದೆಯೇ ಎಂಬುದು ಪ್ರಶ್ನಾರ್ಹ. ಕೇರಳ ವಿಧಾನಸಭೆಗೆ ಈ ವರ್ಷ ಚುನಾವಣೆ ನಡೆದಿದೆ. ಮಹಿಳಾ ಕಾಂಗ್ರೆಸ್ ಅಧ್ಯಕ್ಷೆಯಾಗಿದ್ದ ಲತಿಕಾ ಸುರೇಶ್ ಅವರೂ ಟಿಕೆಟ್ ಆಕಾಂಕ್ಷಿಯಾಗಿದ್ದರು. ತಮಗೆ ಟಿಕೆಟ್ ಸಿಗದಿರುವುದು ಮತ್ತು ಮಹಿಳೆಯರಿಗೆ ಪ್ರಾತಿನಿಧ್ಯ ಕಡಿಮೆ ಇರುವುದನ್ನು ತಮ್ಮ ತಲೆ ಬೋಳಿಸಿ ಅವರು ಪ್ರತಿಭಟಿಸಿದ್ದರು. ಮಹಿಳಾ ಸಬಲೀಕರಣದ ವಿಚಾರದಲ್ಲಿ ರಾಜಕೀಯ ಪಕ್ಷವೊಂದು ರಾಜ್ಯಕ್ಕೊಂದು ನೀತಿ ಅನುಸರಿಸುವುದು ಸಾಧ್ಯವೇ?

ಮಮತಾ ಬ್ಯಾನರ್ಜಿ ನೇತೃತ್ವದ ತೃಣಮೂಲ ಕಾಂಗ್ರೆಸ್ ಕೂಡ ಮಹಿಳೆಯರಿಗೆ ಪ್ರಾತಿನಿಧ್ಯ ನೀಡುವ ವಿಚಾರದಲ್ಲಿ ಹೆಚ್ಚು ಮಾತನಾಡುತ್ತಿದೆ. ಆದರೆ, ಪಶ್ಚಿಮ ಬಂಗಾಳ ವಿಧಾನಸಭೆಗೆ ಈ ವರ್ಷ ನಡೆದ ಚುನಾವಣೆಯಲ್ಲಿ 292 ಕ್ಷೇತ್ರಗಳ ಪೈಕಿ 50ರಲ್ಲಿ ಮಾತ್ರ ಮಹಿಳೆಯರನ್ನು ಕಣಕ್ಕೆ ಇಳಿಸಿತ್ತು. ರಾಜ್ಯದ 43 ಸಚಿವ ಸ್ಥಾನಗಳ ಪೈಕಿ ಮಹಿಳೆಯರಿಗೆ ಸಿಕ್ಕಿದ್ದು 8 ಸ್ಥಾನಗಳು ಮಾತ್ರ

ಮಹಿಳಾ ಪ್ರಾತಿನಿಧ್ಯವನ್ನು ರಾಜಕೀಯ ಪಕ್ಷಗಳು ಮತ ಗಳಿಕೆಯ ಅಸ್ತ್ರವಾಗಿ ಮಾತ್ರ ನೋಡುತ್ತಿವೆ ಎಂಬುದಕ್ಕೆ ಇವು ಉದಾಹರಣೆಗಳು. ಆದರೆ, ಜನಪ್ರತಿನಿಧಿಗಳಾಗಿ ಹೆಚ್ಚು ಮಹಿಳೆಯರು ಆಯ್ಕೆ ಆಗಬೇಕಾದ ಅನಿವಾರ್ಯ ಈಗ ಇದೆ. ಸಂಸತ್ತಿನಲ್ಲಿ ಮಹಿಳಾ ಪ್ರಾತಿನಿಧ್ಯ ಶೇ 14.39ರಷ್ಟು ಮಾತ್ರ ಇದೆ. ಈಗ ಇರುವ 540 ಸಂಸದರ ಪೈಕಿ ಮಹಿಳೆಯರ ಸಂಖ್ಯೆ 78. ರಾಜ್ಯ ವಿಧಾನಸಭೆಗಳ ಪರಿಸ್ಥಿತಿ ಇದಕ್ಕಿಂತ ಭಿನ್ನವಾಗಿಲ್ಲ.



ಹೀಗೆ ತಯಾರಾಗುತ್ತಿರುವ ಹೊಸ ತಲೆಮಾರಿನ ಕಾಂಗ್ರೆಸ್ ಜೊತೆಗೆ ಬಿಹಾರದ ನವನಾಯಕ ತೇಜಸ್ವಿ ಯಾದವ್, ಎಂ.ಕೆ.ಸ್ಟಾಲಿನ್ ಥರದ ಜನಪ್ರಿಯ ನಾಯಕರೂ ಇದ್ದಾರೆ. ಉತ್ತರಪ್ರದೇಶದಲ್ಲಿ ಪುನಃ ಅಧಿಕಾರ ಹಿಡಿಯಲು ತೀವ್ರ ಪ್ರಯತ್ನ ನಡೆಸಿರುವ ಅಖಿಲೇಶ್ ಸಂದರ್ಭ ಬಂದರೆ ಕಾಂಗ್ರೆಸ್ ಜೊತೆ ಹೋಗಬಲ್ಲರು. ಪಶ್ಚಿಮ ಬಂಗಾಳದಂತೆಯೇ ಈಶಾನ್ಯ ರಾಜ್ಯಗಳಲ್ಲೂ ತಳವೂರಿ, ಮುಂಬರುವ ಲೋಕ ಸಭಾ ಚುನಾವಣೆಯಲ್ಲಿ 60-70 ಸ್ಥಾನಗಳನ್ನು ಪಕ್ಕಾ ಮಾಡಿ ಕೊಳ್ಳಲು ಮುನ್ನುಗ್ಗುತ್ತಿರುವ ತೃಣಮೂಲ ಕಾಂಗ್ರೆಸ್ ಕೂಡ ಕಾಂಗ್ರೆಸ್ ಜೊತೆಗೆ ಹೋಗಬಲ್ಲದುಇಂಥ ಸಾಧ್ಯತೆಗಳ ಸ್ಥಿತಿಯಲ್ಲೂ ಕಾಂಗ್ರೆಸ್ ತನಗೊಬ್ಬ ಹೊಸ ಡೈನಮಿಕ್ ರಾಷ್ಟ್ರೀಯ ಅಧ್ಯಕ್ಷರನ್ನು ಹುಡುಕಿಕೊಳ್ಳಲು ಆಗದಿರುವುದು ವಿಚಿತ್ರ. ಕಾಂಗ್ರೆಸ್ಸಿನಲ್ಲಿ ಬೇರು ಬಿಟ್ಟು, ಈಗ ಸಾವಿರ ವೋಟುಗಳನ್ನೂ ತರಲಾಗದ ಕೆಲವಾದರೂ ಮುದಿಗೊಡ್ಡು ಮರಗಳು ಕಾಂಗ್ರೆಸ್ ವರ್ಕಿಂಗ್ ಕಮಿಟಿಯಿಂದ ಹೊರಬರದಿದ್ದರೆ, ಕಾಂಗ್ರೆಸ್ ಮರುಜೀವ ಪಡೆಯುವುದು ಕಷ್ಟ. ಹಾಗೆಂದು ಹಿರಿಯರನ್ನೆಲ್ಲ ಅಂಚಿಗೆ ತಳ್ಳಿದರೂ ಕಾಂಗ್ರೆಸ್ಸಿಗೆ ಕಷ್ಟ. ಕಮಲ್‌ನಾಥ್, ದಿಗ್ವಿಜಯ ಸಿಂಗ್, ಅಶೋಕ್ ಗೆಹ್ಲೋತ್ ಥರದ ಸ್ಟ್ರ್ಯಾಟಜಿ ಮಾಸ್ಟರುಗಳು ಪಕ್ಷಕ್ಕೆ ಅನಿವಾರ್ಯ. ಕರ್ನಾಟಕದಲ್ಲೂ ಸಿದ್ದರಾಮಯ್ಯನವರ ಥರದ ಹಿರಿಯರ ಅನುಭವ ಹಾಗೂ ಜನಮನ್ನಣೆಯ ಬಲವಿಲ್ಲದೆ ಕಾಂಗ್ರೆಸ್ ಗೆಲ್ಲಲು ಸಾಧ್ಯವಿಲ್ಲ. ಆದರೆ ಈ ಹಿರಿಯ ನಾಯಕರ ಜೊತೆಗೇ ತರುಣ ನಾಯಕರಿಗೆ ಹಾದಿ ಮಾಡಿಕೊಡುವ ಕೆಲಸವನ್ನೂ ಕಾಂಗ್ರೆಸ್ ದೊಡ್ಡ ಮಟ್ಟದಲ್ಲೇ ಮಾಡಬೇಕಾಗಿದೆ. ರಾಜಸ್ಥಾನ, ಮಧ್ಯಪ್ರದೇಶದಲ್ಲಿ ಹಿರಿಯ-ಕಿರಿಯರ ತಿಕ್ಕಾಟದಿಂದಲೇ ಕಾಂಗ್ರೆಸ್ ಸೊರಗುತ್ತಿದೆ. ಮೊದಲು ರಾಜ್ಯಗಳಲ್ಲಿ ಗಟ್ಟಿಯಾಗಿ, ನಂತರ ಕೇಂದ್ರದತ್ತ ಸಾಗುವ ರಾಜಕಾರಣಕ್ಕೆ ಮರಳುವುದು ಕಾಂಗ್ರೆಸ್ಸಿಗೆ ಈಗ ಅನಿವಾರ್ಯ.

ಇಷ್ಟಾಗಿಯೂ ದೇಶದ ಹಲವೆಡೆ ಬಸವಳಿಯುತ್ತಿರುವ ಕಾಂಗ್ರೆಸ್ಸಿಗೆ ಈ ಮಹಿಳಾ ಕಾರ್ಡ್ ಶಕ್ತಿ ತುಂಬಬಲ್ಲದೆ? ವಿಶ್ಲೇಷಕರು ತೋರಿಸಿರುವಂತೆ ದೇಶದಾದ್ಯಂತ 200 ಪಾರ್ಲಿಮೆಂಟರಿ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಇನ್ನೂ ತಕ್ಕಮಟ್ಟಿನ ಬೆಂಬಲವಿದೆ. ಕಳೆದ ಪಾರ್ಲಿಮೆಂಟ್ ಚುನಾವಣೆಯಲ್ಲಿ ಬಿಜೆಪಿಯ 18 ಕೋಟಿ ವೋಟುಗಳ ಎದುರು ಕಾಂಗ್ರೆಸ್ 12 ಕೋಟಿ ವೋಟು ಪಡೆದಿದ್ದ ಅಂಕಿಅಂಶವೂ ಕಾಂಗ್ರೆಸ್ಸಿಗೆ ಸ್ಫೂರ್ತಿ ತರಬಹುದು. ಯಾವುದೇ ರಾಜಕೀಯ ಪಕ್ಷಕ್ಕೆ ಅಧಿಕಾರದ ಸಾಧ್ಯತೆ ಕಾಣದಿದ್ದರೆ ಕಾರ್ಯಕರ್ತರು, ಮತದಾರರು ಉತ್ಸಾಹಗೊಳ್ಳಲಾರರು. ಈಗ ಸ್ಥಳೀಯ ನಾಯಕರ ಛಾತಿಯಿಂದಾಗಿ, ಕಟ್ಟಾ ಬೆಂಬಲಿಗ ಜಾತಿಗಳು, ಸಾಮಾಜಿಕ ವಲಯಗಳು ಹಾಗೂ ಜಾತ್ಯತೀತ ವಲಯಗಳಿಂದಾಗಿ ಕಾಂಗ್ರೆಸ್ ಉಳಿದುಕೊಂಡಿದೆ. ಕಾಂಗ್ರೆಸ್ಸಿನ ಹಿರಿಯ ನಾಯಕರು ಕಿರಿಯರನ್ನು ತುಳಿಯು ವುದೇ ತಮ್ಮ ಉಳಿವೆಂಬ ವಿನಾಶಕಾರಿ ರಾಜಕಾರಣ ಬಿಟ್ಟು ಹೊಸ ನಾಯಕರನ್ನು ತಮ್ಮೊಡನೆ ಒಯ್ಯುತ್ತಾ, ಬೆಳೆಸುತ್ತಾ ತಾವೂ ಉಳಿಯುವ ರಾಜಕಾರಣ ಮಾಡದಿ ದ್ದರೆ ಮುಂದಿನ ದಿನಗಳಲ್ಲಿ ಕಾಂಗ್ರೆಸ್ಸಿನ ಹಿರಿಯರೂ ಕಿರಿಯರೂ ಒಟ್ಟಿಗೇ ನೆಲ ಕಚ್ಚುವುದು ಗ್ಯಾರಂಟಿ.



## ಮಸೂದೆಗೆ ಅನುಮೋದನೆ ದೊರೆತಿಲ್ಲ

ವಿಧಾನಸಭೆಗಳು, ಸಂಸತ್ತಿನ ಉಭಯ ಸದನಗಳಲ್ಲಿ ಮಹಿಳೆಯರಿಗೆ ಶೇ 33ರಷ್ಟು ಸೀಟುಗಳನ್ನು ಮೀಸಲಿಡುವ ಪ್ರಯತ್ನಕ್ಕೆ 26 ವರ್ಷಗಳ ಇತಿಹಾಸವಿದೆ. ಸರಪಂಚ ಸ್ಥಾನಗಳಲ್ಲಿ ಮಹಿಳೆಯರಿಗೆ ಮೂರನೇ ಒಂದರಷ್ಟು ಸ್ಥಾನಗಳನ್ನು ಮೀಸಲಿರಿಸುವ ಸಂಬಂಧ ಸಂವಿಧಾನಕ್ಕೆ 1993ರಲ್ಲಿ ತಿದ್ದುಪಡಿ ತರಲಾಗಿತ್ತು.ಅದೇ ನೆಲೆಯಲ್ಲಿ ಮಹಿಳೆಯರಿಗೆ ಮೀಸಲಾತಿ ನೀಡುವ ಸಲುವಾಗಿ 1996ರಲ್ಲಿ ಲೋಕಸಭೆಯಲ್ಲಿ ಮಸೂದೆಯನ್ನು ಮಂಡಿಸಲಾಗಿತ್ತು. ಆದರೆ ಮಸೂದೆಗೆ ಅನುಮೋದನೆ ದೊರೆಯಲೇ ಇಲ್ಲ. ಈ ಮಸೂದೆಗೆ ಆಡಳಿತ ಮತ್ತು ವಿರೋಧ ಪಕ್ಷಗಳ ಮಹಿಳೆಯರೆಲ್ಲರೂ ಬೆಂಬಲ ಸೂಚಿಸಿದರೆ, ಪಕ್ಷಾತೀತವಾಗಿ ಈ ಮಸೂದೆಯನ್ನು ವಿರೋಧಿಸಿದ ಪುರುಷರ ಸಂಖ್ಯೆಯೇ ಹೆಚ್ಚು. 1996ರಿಂದ 2010ರವರೆಗೆ ಅಧಿಕಾರ ನಡೆಸಿದ ಎಲ್ಲಾ ಪಕ್ಷಗಳೂ ಈ ಮಸೂದೆಯನ್ನು ಸಂಸತ್ತಿನಲ್ಲಿ ಮಂಡಿಸಲು ಯತ್ನಿಸಿವೆ.1996, 1998, 1999 ಮತ್ತು 2008ರಲ್ಲಿ ಈ ಮಸೂದೆಯ ಸುಧಾರಿತ ರೂಪಗಳನ್ನು ಲೋಕಸಭೆಯಲ್ಲಿ ಮಂಡಿಸಲಾಗಿತ್ತು. ಆದರೆ ಒಂದು ಬಾರಿಯೂ ಮಸೂದೆಗೆ ಅನುಮೋದನೆ ದೊರೆತಿಲ್ಲ. 2008ರಲ್ಲಂತೂ ರಾಜ್ಯಸಭೆಯಲ್ಲಿ ಮಸೂದೆಯ ಪ್ರತಿಯನ್ನು ಹರಿದುಹಾಕುವ ಯತ್ನವೂ ನಡೆದಿತ್ತು. ಮಹಿಳಾ ಸದಸ್ಯರೇ ಮಸೂದೆಯ ಪ್ರತಿಗೆ ರಕ್ಷಣೆ ನೀಡಿದ್ದರು. 2008ರಲ್ಲಿ ಮಸೂದೆಯನ್ನು ಸಂಸತ್ತಿನ ಸ್ಥಾಯಿ ಸಮಿತಿ ಪರಿಶೀಲನೆಗೆ ಕಳುಹಿಸಲಾಯಿತು. 2010ರಲ್ಲಿ ಮತ್ತೆ ಈ ಮಸೂದೆಯನ್ನು ರಾಜ್ಯಸಭೆಯಲ್ಲಿ ಮಂಡಿಸಿ, ಅನುಮೋದನೆ ಪಡೆದುಕೊಳ್ಳಲಾಯಿತು. ಆದರೆ ಲೋಕಸಭೆಯಲ್ಲಿ ಚರ್ಚೆಗೆ ಬರದೇ ಇರುವ ಕಾರಣ, ಮಸೂದೆ ಮಾನ್ಯತೆ ಕಳೆದುಕೊಂಡಿತು.ಪ್ರತಿ ಬಾರಿ ಈ ಮಸೂದೆ ಸಂಸತ್ತಿನಲ್ಲಿ ಚರ್ಚಗೆ ಬಂದಾಗ, ಮಹಿಳೆಯರಿಗೆ ಮೀಸಲಾತಿಯನ್ನು ವಿರೋಧಿಸುವವರ ಸಂಖ್ಯೆಯೇ ಹೆಚ್ಚು ಇತ್ತು. 'ಮೀಸಲಾತಿ ಅಡಿ ಆಯ್ಕೆಯಾಗುವ ಮಹಿಳೆಯರಿಗೆ, ಸಂಸದೀಯ ಪಟುವಿನ ಸಾಮರ್ಥ್ಯವಿರುವುದಿಲ್ಲ. ಅವರು ಸಂಸದೆಯ ಕರ್ತವ್ಯವನ್ನು ಸರಿಯಾಗಿ ನಿರ್ವಹಿಸಲು ಸಾಧ್ಯವಾಗುವುದಿಲ್ಲ' ಎಂಬ ನೆಪವನ್ನು ಮೀಸಲಾತಿ ವಿರೋಧಕ್ಕೆ ಆಧಾರ ಮಾಡಿಕೊಳ್ಳಲಾಗುತ್ತಿತ್ತು. 2014ರ ನಂತರ ಅಧಿಕಾರಕ್ಕೆ ಬಂದ ನರೇಂದ್ರ ಮೋದಿ ಅವರ ನೇತೃತ್ವದ ಸರ್ಕಾರವು ಈ ಮಸೂದೆಯನ್ನು ಮತ್ತೆ ಮಂಡಿಸುವ ಪ್ರಯತ್ನವನ್ನೂ ಮಾಡಿಲ್ಲ.

## ಪ್ರಣಾಳಿಕೆಯಲ್ಲೂ ಮಹಿಳಾ ಆದ್ಯತೆ



ಕಳೆದ ಕೆಲ ವರ್ಷಗಳಲ್ಲಿನ ವಿಧಾನಸಭೆ ಚುನಾವಣೆಗಳಲ್ಲಿ ರಾಜಕೀಯ ಪಕ್ಷಗಳು ಮಹಿಳಾ ಮತದಾರರ ಕಡೆಗೆ ವಿಶೇಷ ಗಮನ ಹರಿಸಿವೆ. ಪ್ರಣಾಳಿಕೆಗಳಲ್ಲಿ ಮಹಿಳಾ ಪರ ಯೋಜನೆಗಳನ್ನು ರಾಜಕೀಯ ಪಕ್ಷಗಳು ಸೇರಿಸಿರುವುದೇ ಇದಕ್ಕೆ ಸಾಕ್ಷಿ. ಪಶ್ಚಿಮ ಬಂಗಾಳ ವಿಧಾನಸಭೆಗೆ ಇತ್ತೀಚೆಗೆ ನಡೆದ ಚುನಾವಣೆ ವೇಳೆ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು 'ಲೋಕ್ಖಿರ್ ಬಂಡಾರ' ಎಂಬ ಯೋಜನೆ ಅನುಷ್ಠಾನದ ಭರವಸೆ ನೀಡಿದ್ದರು. 1.6 ಕೋಟಿ ಕುಟುಂಬಗಳ ಹೆಣ್ಣುಮಕ್ಕಳಿಗೆ ಪ್ರತಿ ತಿಂಗಳು ಹಣ ನೀಡುವ ಯೋಜನೆ ಇದು. ಅಧಿಕಾರಕ್ಕೆ ಬರುತ್ತಿದ್ದಂತೆ ಆ ಯೋಜನೆ ಜಾರಿ ಮಾಡಿದರು. ಇದು ಮಹಿಳೆಯರನ್ನು ಸಬಲರಾಗಿ ಮಾಡುವ ಯೋಜನೆಯಲ್ಲ ಬದಲಾಗಿ ಪಾಕೆಟ್ ಮನಿ ನೀಡುವ ಯೋಜನೆ ಎಂದು ವಿಪಕ್ಷಗಳು ಟೀಕೆ ಮಾಡಿದ್ದವು. ಈ ವಿಷಯದಲ್ಲಿ ಬಿಜೆಪಿ ಕೂಡಾ ಹಿಂದೆ ಬಿದ್ದಿರಲಿಲ್ಲ. ದಲಿತ ಮತ್ತು ಬುಡಕಟ್ಟು ಹೆಣ್ಣು ಮಕ್ಕಳಿಗೆ ಸ್ನಾತಕೋತ್ತರ ಪದವಿ ವರೆಗೆ ಉಚಿತ ಶಿಕ್ಷಣ ನೀಡುವ ಭರವಸೆ ಸೇರಿ ಹಲವಾರು ಯೋಜನೆಗಳನ್ನು ಪ್ರಣಾಳಿಕೆಯಲ್ಲಿ ಸೇರಿಸಿತ್ತು.2020ರ ಬಿಹಾರ ವಿಧಾನಸಭೆ ಚುನಾವಣೆ ವೇಳೆ ಬಿಜೆಪಿ, ಆರ್‌ಜೆಡಿ ಮತ್ತು ಜೆಡಿಯು ಮಹಿಳೆಯರಿಗಾಗಿ ಹಲವು ಭರವಸೆಗಳನ್ನು ನೀಡಿದ್ದವು. ಗುತ್ತಿಗೆ ಆಧಾರಿತ 1.5 ಕೋಟಿ ಜೀವಿಕಾ ಕಾರ್ಯಕರ್ತೆಯರ ಉದ್ಯೋಗಗಳನ್ನು ಕಾಯಂಗೊಳಿಸುವುದಾಗಿ ಮತ್ತು ಅವರ ವೇತನವನ್ನು ದುಪ್ಪಟ್ಟು ಮಾಡುವುದಾಗಿ ಆರ್‌ಜೆಡಿ ಹೇಳಿತ್ತು. ಜೆಡಿಯು ಮಹಿಳಾ ಅಭ್ಯರ್ಥಿಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಕಣಕ್ಕಿಳಿಸಿತ್ತು. ಆಡಳಿತದಲ್ಲಿ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಇರುವಂತೆ ನೋಡಿಕೊಳ್ಳುವುದಾಗಿ ಭರವಸೆ ನೀಡಿತ್ತು. ಅಸ್ಸಾಂ ವಿಧಾನಸಭೆ ಚುನಾವಣೆ ವೇಳೆ ಕಾಂಗ್ರೆಸ್ ಮತ್ತು ಬಿಜೆಪಿ ಮಹಿಳೆಯರನ್ನೇ ಕೇಂದ್ರವಾಗಿ ಇರಿಸಿಕೊಂಡು ಪ್ರಣಾಳಿಕೆ ರಚಿಸಿದ್ದವು. ತಮಿಳುನಾಡಿನಲ್ಲಿ ಉಚಿತ ವಾಷಿಂಗ್ ಮಷಿನ್, ಉಚಿತ ಸೋಲಾರ್ ಒಲೆ, ಉಚಿತ ಕೇಬಲ್ ಸಂಪರ್ಕ, ಮನೆ ಬಾಗಿಲಿಗೆ ಪಡಿತರ ನೀಡುವಂಥ ಭರವಸೆಗಳನ್ನು ಎಐಡಿಎಂಕೆ ಮಹಿಳಾ ಮತದಾರರಿಗೆ ನೀಡಿತ್ತು. ಸರ್ಕಾರಿ ಉದ್ಯೋಗಗಳಲ್ಲಿ ಮಹಿಳೆಯರಿಗೆ ಶೇ 40ರಷ್ಟು ಮೀಸಲಾತಿ ನೀಡುವುದು ಸೇರಿ ಮತ್ತಿತರ ಯೋಜನೆಗಳನ್ನು ಡಿಎಂಕೆ ಘೋಷಿಸಿತ್ತು. ಮಹಿಳೆಯ ಪಾತ್ರ: ಹಲವಾರು ರಾಜ್ಯಗಳಲ್ಲಿ ಮಹಿಳಾ ಮತದಾರರ ಸಂಖ್ಯೆ ಪುರುಷ ಮತದಾರರ ಸಂಖ್ಯೆಯಷ್ಟೇ ಇದೆ. ಕೆಲವೆಡೆ ಸ್ವಲ್ಪ ಕಡಿಮೆ ಇದೆ. ಮಹಿಳಾ ಮತದಾರರು ಮತದಾನದಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತಿರುವುದನ್ನು ಅಂಕಿಅಂಶಗಳು ಹೇಳುತ್ತವೆ.



## ಎಐಸಿಸಿಯಲ್ಲಿ ಎಲ್ಲಿದೆ ಮಹಿಳಾ ಮಿಸಲಾತಿ?

ಹೀಗೆ ಮಹಿಳಾ ಮೀಸಲಾತಿಗೆ ಆದ್ಯತೆ ನೀಡಿರುವ ಪ್ರಿಯಾಂಕ್ ಒಮ್ಮೆ ತಮ್ಮ ಪಕ್ಷದ ಕಡೆ ಗಮನಹರಿಸಿದರೆ ಒಳಿತು ಎನಿಸುತ್ತದೆ ಯಾಕೆಂದರೆ ಪಕ್ಷದಲ್ಲಿ ಒಂದು ಮತ್ತೊಂದು ಎನ್ನುವ ಹಾಗೆ ಮೂವರು ನಾಲ್ವರಿಗೆ ಮಾತ್ರ ಮಹಿಳೆಯರಿಗೆ ಅವಕಾಶ ನೀಡಲಾಗಿದೆ ಅಂಬಿಕಾ ಸೋನಿ,ಪ್ರಿಯಾಂಕ್ ವಾದ್ರ ಸೇರಿದಂತೆ ಐವರಿಗೆ ಮಾತ್ರ ಅವಕಾಶ ಇದೆಹೀಗಿರುವಾಗ ಉತ್ತರ ಪ್ರದೇಶದಲ್ಲಿ ಈ ಘೋಷಣೆ ಒಂದು ರೀತಿ ಅಣಕಿಸುವಂತಿದೆ.. ಹೌದು ತಮ್ಮ ಪಕ್ಷದಲ್ಲಿ ಇಂತ ಘೋಷಣೆಗೆ ಮಾನ್ಯತೆ ಇಲ್ಲ ಎಂದ ಮೇಲೆ ಉತ್ತರ ಪ್ರದೇಶದಲ್ಲಿ ಇಂತ ಹೇಳಿಕೆ ಹಾಸ್ಯಾಸ್ಪದವಲ್ಲವೇ? ಹೀಗಿದ್ದರೂ ಕೂಡ ಪ್ರಿಯಾಂಕ ಅವರ ಈ ದಿಟ್ಟ ನಿರ್ಧಾರಕ್ಕೆ ಎಲ್ಲೋ ಒಂದು ಕಡೆ ಪ್ರತಿಪಕ್ಷಗಳು ಬೆಚ್ಚಿಬಿದ್ದಿವೆ ಅಲ್ಲಿ ಕಾಂಗ್ರೆಸ್‌ಗೆ ಅಂತ ನೆಲೆಯೂ ಇಲ್ಲ ಆದರೂ ಹೊಸ ನೆಲೆಯನ್ನು ಕಂಡುಕೊಳ್ಳಲು ಬಂದಿರುವ ಪ್ರಿಯಾಂಕ್ ಅವರ ಈ ಘೋಷಣೆ ಹಿಂದೆ ಅವರ ಭವಿಷ್ಯವೂ ಅಡಗಿದೆ ಎನ್ನುವುದು ರಾಜಕೀಯ ತಜ್ಞರ ವಿಶ್ಲೇಷಣೆ.



# ಅಯ್ಯಾವೊಳೆ ಅಥವಾ ಐಹೊಳೆಯ ಪ್ರಾಚೀನ ಇತಿಹಾಸ

ಪರಿಶೋಧನೆ

ಡಾ.ಎಸ್.ವೈ.ಸೋಮಶೇಖರ್
ಕನ್ನಡ ವಿಶ್ವವಿದ್ಯಾಲಯ, ಹಂಪಿ





ಕರ್ನಾಟಕದ ಪ್ರಾಚೀನ ಮತ್ತು ಪ್ರಸಿದ್ಧ ಪಟ್ಟಣಗಳಲ್ಲಿ ಅಯ್ಯಾವೊಳೆ ಅಥವಾ ಐಹೊಳೆ ಪ್ರಮುಖವಾದುದು. ಮಲಪ್ರಭಾ ನದಿಯ ಬಲದಂಡೆಯ ಮೇಲಿರುವ ಐಹೊಳೆಯು ಬಾದಾಮಿ ಚಾಲುಕ್ಯರ ಕಾಲದ ಪ್ರಸಿದ್ಧ ಧಾರ್ಮಿಕ ಮತ್ತು ಸಾಂಸ್ಕೃತಿಕ ನಗರಿ. ಇದನ್ನು ಆರ್ಯಪುರ, ಮಹಾಕಾಶಿ, ಅಯ್ಯಾವೊಳಲು, ಅಯ್ಯವೊಳೆ, ಅಯ್ಯಾವೊಳೆ, ಐಹೊಳೆ ಮುಂತಾಗಿ ಕರೆಯಲಾಗಿದೆ. ಇದು ಬಾದಾಮಿ ಚಾಲುಕ್ಯರ ಕಾಲದಿಂದ ಕಲ್ಯಾಣ ಚಾಲುಕ್ಯರ ಅವಧಿಯವರೆಗೆ ಪ್ರವರ್ಧಮಾನವಾಗಿ ಮೆರೆದ ಪ್ರಾಚೀನ ಮಹಾಪಟ್ಟಣವೇ ಆಗಿತ್ತು. ಐಹೊಳೆಯು ಚಾರಿತ್ರಿಕವಾಗಿ ಮಹಾಪಟ್ಟಣವೇನೋ ಸರಿ. ಇದು ಪ್ರಾಗಿತಿಹಾಸ ಕಾಲದಿಂದಲೂ ಮಾನವನ ವಸತಿಯ ತಾಣವಾಗಿತ್ತು. ಇಲ್ಲಿನ ಗುಡ್ಡದ ಮೇಲಿರುವ ಶಿಲಾಯುಗದ ಬೃಹತ್ ಸಮಾಧಿಗಳು ಪ್ರಾಚೀನತೆಯನ್ನು ಕ್ರಿ.ಪೂ. 1000 ವರ್ಷಗಳಷ್ಟು ಹಿಂದಕ್ಕೆ ಕೊಂಡೊಯ್ದಿವೆ.

ಐಹೊಳೆಯು ಸರ್ವಧರ್ಮಗಳ ಸಮನ್ವಯದ ನೆಲೆ. ಇಲ್ಲಿ ವೈದಿಕ, ಜೈನ, ಬೌದ್ಧ ಧರ್ಮದ ಅನೇಕ ಸ್ಮಾರಕ, ದೇಗುಲಗಳಿವೆ. ಇದು ಮುಖ್ಯವಾಗಿ ಮಧ್ಯಕಾಲದ ಬಹುದೊಡ್ಡ ವ್ಯಾಪಾರ ಕೇಂದ್ರವೂ ಆಗಿತ್ತು. ಅನೇಕ ಶಾಸನಗಳಲ್ಲಿ ಈ ಸ್ಥಳದ ವ್ಯಾಪಾರಿಗಳು ಮತ್ತು ವ್ಯಾಪಾರಿ ಸಂಘಗಳ ಉಲ್ಲೇಖಗಳಿವೆ. ಅವುಗಳಲ್ಲಿ ಅಯ್ಯಾವೊಳೆ ಅಯ್ನೂರ್ವರು ಎಂಬುದು ಕರ್ನಾಟಕದ ಅತ್ಯಂತ ಪ್ರಸಿದ್ಧ ವ್ಯಾಪಾರಿ ಸಂಘವಾಗಿದೆ. ಇದರ ಮೂಲಸ್ಥಾನ ಐಹೊಳೆಯೇ ಆಗಿದ್ದುದು ಗಮನಾರ್ಹ. ಇದು ಕರ್ನಾಟಕದ ಮಟ್ಟಿಗೆ ಏಕೆ ಭಾರತದಲ್ಲೇ ಅತ್ಯಂತ ಪ್ರಾಚೀನ ಮತ್ತು ಪ್ರಮುಖ ವ್ಯಾಪಾರಿ ಸಂಘಟನೆಗಳಲ್ಲಿ ಒಂದಾಗಿದೆ. ವ್ಯಾಪಾರ ವಸ್ತುಗಳಿಗೆ ಅನುಗುಣವಾಗಿ ಇತರೆ ಸಂಘಟನೆಗಳನ್ನು ಶಾಸನಗಳಲ್ಲಿ ಕಾಣುತ್ತೇವೆ. ಅವುಗಳಲ್ಲಿ ಸೆಟ್ಟಿಗುತ್ತರು, ಮುಮ್ಮರಿದಂಡರು, ಗವರಿಗ, ಗಾತ್ರಿಗ, ವೀರಬಣಂಜು ಇತ್ಯಾದಿ ಮುಖ್ಯ ಸಂಘಗಳಾಗಿವೆ. ಅಯ್ಯಾವೊಳೆ ಐನೂರ್ವರ ಸಂಘವು ಇವೆಲ್ಲವುಗಳಿಗಿಂತ ಹಳೆಯದು. ಇದರ ಉಲ್ಲೇಖ ಕ್ರಿ.ಶ.7-8ನೇ ಶತಮಾನದಷ್ಟು ಪ್ರಾಚೀನ. ಕ್ರಿ.ಶ. 7 ರಿಂದ 17ನೆಯ ಶತಮಾನದವರೆಗೂ ಈ ವ್ಯಾಪಾರಿ ಸಂಘದ ಅಸ್ತಿತ್ವವಿದ್ದುದನ್ನು ಶಾಸನಗಳು ದೃಢಪಡಿಸುತ್ತವೆ. ಇದರಿಂದ ಐಹೊಳೆಯು ಬಾದಾಮಿ ಚಾಲುಕ್ಯರ ಕಾಲದಲ್ಲಿ ಬಹುದೊಡ್ಡ ವ್ಯಾಪಾರ ಕೇಂದ್ರವಾಗಿತ್ತು. ಅಲ್ಲದೆ ಈ ವ್ಯಾಪಾರಿ ಸಂಘವು ಕೇವಲ ಕರ್ನಾಟಕಕ್ಕೆ ಮಾತ್ರ ಸೀಮಿತವಾಗಿರಲಿಲ್ಲ. ಇದು ಆಂಧ್ರಪ್ರದೇಶ, ತಮಿಳುನಾಡು, ಮಹಾರಾಷ್ಟ್ರಗಳಲ್ಲೂ ತನ್ನ ಪ್ರಭಾವವನ್ನು ಬೀರಿದ್ದುದು ಅಲ್ಲಿನ ಶಾಸನಗಳಿಂದ ಸ್ಪಷ್ಟವಾಗುತ್ತದೆ. ಅಲ್ಲದೆ ವಿದೇಶಗಳಿಗೂ ಇವರ ವ್ಯಾಪಾರ ವ್ಯವಹಾರ ವಿಸ್ತರಿಸಿದ್ದಿತು. ಇವರನ್ನು ಉಲ್ಲೇಖಿಸುವ ಶಾಸನಗಳು ಜಾವಾ, ಸುಮಾತ್ರ, ಥಾಯ್ಲೆಂಡ್, ಮಯನ್ಮಾರ್, ಶ್ರೀಲಂಕಾಗಳಲ್ಲೂ ಕಂಡುಬಂದಿವೆ. ಈ ಸಂಘದ ವ್ಯಾಪಾರದ ವಿಸ್ತಾರ, ಪಾತ್ರ ಮತ್ತು ಮಹತ್ವಗಳು ವಿದೇಶಗಳಿಗೂ ಹರಡಿತ್ತೆಂಬುದಂತೂ ಸ್ಪಷ್ಟ. ಈ ಸಂಘದ ಬಿಕರಿಯ ವಸ್ತುಗಳು ಒಂದೆರಡಲ್ಲ, ಸೈನ್ಯಕ್ಕೆ ಅಗತ್ಯವಾದ ಆನೆ, ಕುದುರೆಗಳಿಂದ ಹಿಡಿದು ವಜ್ರವೈಢೂರ್ಯಗಳವರೆಗೆ, ದಿನಸಿ, ಸಾಂಬಾರುಗಳಿಂದ ಹಿಡಿದು ಸುಗಂಧ ದ್ರವ್ಯಗಳವರೆಗೆ, ಚಿಲ್ಲರೆ ವ್ಯಾಪಾರದಿಂದ ಸಗಟು ವ್ಯಾಪಾರದವರೆಗೆ ತನ್ನ ವಾಣಿಜ್ಯ ವ್ಯವಹಾರದ ಕಬಂಧ ಬಾಹುವನ್ನು ವಿಸ್ತರಿಸಿಕೊಂಡಿತ್ತು. ಈ ಸಂಘವು ತನ್ನ ಚಟುವಟಿಕೆ ವಿಸ್ತರಿಸಲು ಮತ್ತು ಸಾಮಾನು ಸರಂಜಾಮುಗಳ ಸಾಗಾಟಕ್ಕೆ ಕುದುರೆ, ಕತ್ತೆ, ಕೋಣ ಮತ್ತು ಎತ್ತುಗಳನ್ನು ವಿಶೇಷವಾಗಿ ಬಳಸಿಕೊಂಡಿದ್ದಿತು. ಅಲ್ಲದೆ ವ್ಯಾಪಾರ-ವ್ಯವಹಾರವು ಕಳ್ಳಕಾಕರ ಭಯವಿಲ್ಲದೆ ಸುಲಲಿತವಾಗಿ ಸಾಗಲು ಪ್ರತ್ಯೇಕ ರಕ್ಷಣಾ ವ್ಯವಸ್ಥೆಯನ್ನೂ ಹೊಂದಿದ್ದರು. ಆದ್ದರಿಂದಲೇ ವ್ಯಾಪಾರಿಗಳನ್ನು ವೀರಬಣಂಜುಗಳೆಂದೂ ಕರೆಯಲಾಗಿದೆ. ಈ ಸಂಘಟನೆಯು ಐಹೊಳೆಯಲ್ಲದೆ ನಾಡಿನ ವಿವಿಧೆಡೆ ಕಟ್ಟಿದ ದೇವಾಲಯಗಳು ನೀಡಿದ ದಾನದತ್ತಿಗಳು ಸಾವಿರಾರು. ಅಲ್ಲದೆ ನೂರಾರು ಕೆರೆ, ಕಟ್ಟೆ, ಬಾವಿಗಳನ್ನು ನಿರ್ಮಿಸಿ ಜನೋಪಯೋಗಿ ಕಾರ್ಯಗಳನ್ನೂ ಇವರು ಕೈಗೊಂಡಿಗಿದ್ದರು. ಇದು ಅಯ್ಯಾವೊಳೆ ಐನೂರ್ವರು ಸಂಘದ ವ್ಯಾಪಾರ-ವ್ಯವಹಾರದ ಬಲಿಷ್ಟತೆಯಲ್ಲದೆ ಮತ್ತೇನು.

ದೇವಾಲಯಗಳ ಮಹಾನಗರಿ: ಐಹೊಳೆಯನ್ನು ದೇವಾಲಯಗಳ ನಗರಿಯೆಂದೇ ಕರೆಯಬಹುದು. ಕಾರಣವೆಂದರೆ ಇಲ್ಲಿರುವ ದೇವಾಲಯಗಳ ಸಂಖ್ಯೆ ಎಣಿಕೆಗೂ ನಿಲುಕದ್ದಾಗಿದೆ. ಈಗ ಗುರುತಿಸಿರುವಂತೆ 125ಕ್ಕೂ ಹೆಚ್ಚು ದೇವಾಲಯಗಳು ಇಲ್ಲಿದ್ದವು. ದೇವಾಲಯಗಳಲ್ಲದೆ ಜಿನಾಲಯ, ಬೌದ್ಧಾಲಯಗಳನ್ನೂ ಇಲ್ಲಿವೆ. ಇದಕ್ಕೆ ಮೇಗುತಿ ಜಿನಾಲಯ ಮತ್ತು ಅಲ್ಲಿನ ಗೋಡೆಯಲ್ಲಿರುವ ಬಾದಾಮಿ ಚಾಲುಕ್ಯರ ಪ್ರಸಿದ್ಧ ಅರಸ ಇಮ್ಮಡಿ ಪುಲಕೇಶಿಯ ಶಾಸನ ಪ್ರಮುಖ ಸಾಕ್ಷ್ಯವಾಗಿದೆ. ಈ ದೇವಾಲಯಗಳಲ್ಲಿ ಅನೇಕವು ಇಂದು ಕಾಲನ ದವಡೆಗೆ ಸಿಲುಕಿ ಕಣ್ಮರೆಯಾಗಿವೆ. ಹಲವು ಆಧುನಿಕ ಕಾಮಗಾರಿಯ ಭರಾಟೆಗೆ ಸಿಕ್ಕು ನಲುಗಿವೆ. ಉಳಿದವುಗಳಲ್ಲಿ ಕೆಲವನ್ನು ಪುರಾತತ್ವ ಇಲಾಖೆ ರಕ್ಷಿಸುವಲ್ಲಿ ಹೆಣಗಾಡುತ್ತಿದೆ. ಇದು ಐಹೊಳೆಯ ಸ್ಮಾರಕಾವಶೇಷಗಳ ಸ್ಥಿತಿಗತಿ. ಇಲ್ಲಿನ ದೇವಾಲಯಗಳನ್ನು ಪುರಾತತ್ವ ಇಲಾಖೆಯು ಕೊಂತಿಗುಡಿ, ತ್ರ್ಯಂಬಕೇಶ್ವರ, ಜ್ಯೋತಿರ್ಲಿಂಗ, ಮಲ್ಲಿಕಾರ್ಜುನ, ಗಳಗನಾಥ, ರಾಮಲಿಂಗ, ವೇಣಿಯವರ, ಅಂಬಿಗೇರ, ಚಿಕ್ಕಿಗುಡಿ, ಜೈನಗುಡಿಗಳ ಗುಂಪುಗಳೆಂದು ಗುರುತಿಸಿದೆ. ಅಲ್ಲದೆ ಅವುಗಳಲ್ಲಿ ದುರ್ಗಾ, ಲಾಡಖಾನ್, ಮೇಗುತಿ, ಸೂರ್ಯನಾರಾಯಣ, ಹುಚ್ಚಿಮಲ್ಲಿ, ಹುಚ್ಚಪ್ಪಯ್ಯ, ಸಂಗನಮನಾಥ, ತಾರಬಸಪ್ಪ, ಕೊಂತಿಗುಡಿ, ಚಕ್ರಗುಡಿ, ಬೌದ್ಧ ಚೈತ್ಯಾಲಯ ಮತ್ತು ಬೆಟ್ಟವನ್ನು ಕತ್ತರಿಸಿ ನಿರ್ಮಿಸಿದ ರಾವಳಪಡಿ ಗುಹಾಲಯಗಳು ಪ್ರಮುಖವಾಗಿವೆ. ಇಲ್ಲಿನ ನೂರಾರು ಸ್ಮಾರಕ ದೇಗುಲ ಮತ್ತು ಅವುಗಳಲ್ಲಿರುವ ಶಿಲ್ಪಕಲೆಯಿಂದ ಐಹೊಳೆಯು ಬಹುದೊಡ್ಡ ಧಾರ್ಮಿಕ ಮತ್ತು ಸಾಂಸ್ಕೃತಿಕ ನೆಲೆಯೆಂಬುದಂತೂ ಸ್ಪಷ್ಟ. ಈ ಆಲಯಗಳಲ್ಲಿ ಅರಳಿಸಿದ ವಾಸ್ತು, ಶಿಲ್ಪಗಳು ಕಲೆ ಮತ್ತು ವಾಸ್ತುಶಿಲ್ಪದ ಪ್ರತೀಕಗಳೇ ಆಗಿವೆ. ಈ ಹಿನ್ನೆಲೆಯಲ್ಲಿಯೇ ಐಹೊಳೆ ಕಲೆ ಮತ್ತು ವಾಸ್ತುಶಿಲ್ಪದ ಕಾರ್ಯಾಗಾರವಾಗಿ, ಎಲ್ಲ ಭಾರತೀಯ ಕಲಾಶೈಲಿಗಳನ್ನು ಪ್ರಯೋಗಕ್ಕೆ ಒಳಪಡಿಸಿದ ಪ್ರಯೋಗಶಾಲೆಯೂ ಆಗಿದೆ. ಆದರೆ ಪಟ್ಟದಕಲ್ಲು ಐಹೊಳೆಯ ಕಾರ್ಯಾಗಾರ ಮತ್ತು ಪ್ರಯೋಗಶಾಲೆಯಿಂದ ಸುಧಾರಿತಗೊಂಡ ದ್ರಾವಿಡ, ನಾಗರ ಮತ್ತು ವೇಸರ ಶೈಲಿಗಳ ದೇವಾಲಯಗಳುಳ್ಳ ತಾಣವಾಗಿ, ಕಲೆ ಮತ್ತು ವಾಸ್ತುಶಿಲ್ಪದ ತೊಟ್ಟಿಲೆಂದು ಹೆಸರಾಗಿದೆ. ಈ ಹಿನ್ನೆಲೆಯಲ್ಲಿ ಐಹೊಳೆಯ ನೂರಾರು ದೇವಾಲಯ ಮತ್ತು ಅವುಗಳಲ್ಲಿ ಅರಳಿದ ಕಲೆ, ವಾಸ್ತುಕಲೆ, ಶಿಲ್ಪಕಲೆಯನ್ನು ಕಂಡು, ಬೌಲಿಯರ್ ಫ್ರೆಸಿನೆಟ್ ಅವರು "ಹಳೆಯ ದೇಗುಲಗಳ ನಗರಿ"ಯೆಂದೂ, ಎಚ್.ಡಿ.ಸಂಕಾಲಿಯ ಅವರು 'ದೇವಾಲಯಗಳ ನಗರಿ'ಯೆಂದೂ ಐಹೊಳೆಯನ್ನು ಬಣ್ಣಿಸಿದ್ದಾರೆ.

ಐಹೊಳೆ ಶಾಸನ: ಮೇಗುತಿ ಜಿನಾಲಯದ ಶಾಸನವು ಇಮ್ಮಡಿ ಪುಲಕೇಶಿಯ ಜೀವನ ಮತ್ತು ಸಾಧನೆಗಳನ್ನು ಸಾರುವ ಮಹತ್ವದ ಶಾಸನ. ಇದರ ವಿಶೇಷತೆಯೆಂದರೆ ಮಹಾಭಾರತ ಯುದ್ಧದ ವರ್ಷದ ಉಲ್ಲೇಖ, ಶಾಸನ ಕವಿ ರವಿಕೀರ್ತಿಯು ತನ್ನನ್ನು ಕಾಳಿದಾಸ-ಭಾರವಿಯರಿಗೆ ಹೋಲಿಸಿಕೊಂಡದ್ದು ಮತ್ತು ಜಿನೇಂದ್ರಾಲಯ ಸ್ಥಾಪನೆಯೇ ಆಗಿದೆ. ಇವುಗಳಲ್ಲದೆ ಇಮ್ಮಡಿ ಪುಲಕೇಶಿಯ ವಂಶಾವಳಿ ಮತ್ತು ಅವನು ಅಪ್ಪಾಯಿಕ, ಗೋವಿಂದ, ಬನವಾಸಿ, ಗಂಗ, ಲಾಟ, ಮಾಳವ, ಗುರ್ಜ್ಜರ, ಮಹಾರಾಷ್ಟ್ರಕ, ಕಳಿಂಗ, ಪಿಷ್ಟಪುರ, ಕಂಚಿ, ಕೇರಳ, ಪಾಂಡ್ಯರ ಮೇಲೆ ಸಾಧಿಸಿದ ವಿಜಯಗಳ ಸರಮಾಲೆಯನ್ನೇ ಈ ಶಾಸನ ಹೊಂದಿರುವುದು ಗಮನಾರ್ಹ.

ಪ್ರಾಚೀನ ಕೋಟೆ: ಐಹೊಳೆಯಲ್ಲಿ ಬಾದಾಮಿ ಚಾಲುಕ್ಯರ ಕಾಲದಲ್ಲಿಯೇ ಕಟ್ಟಲಾದ ಪ್ರಾಚೀನ ಕೋಟೆಯಿತ್ತು. ಇದು ಸ್ಥಳೀಯವಾಗಿ ಸಿಗುವ ಕೆಂಪು ಮರಳುಗಲ್ಲಿನಿಂದ ಕ್ರಿ.ಶ. 6-7ನೆಯ ಶತಮಾನದಲ್ಲೇ ಕಟ್ಟಲಾದ ಕೋಟೆಯೆಂಬುದು ಶಾಸನಗಳಿಂದ ತಿಳಿಯುವುದು. ಈ ಕೋಟೆಯು ಸುಂದರವಾಗಿ, ವಿಸ್ತಾರವಾಗಿ ಹರಡಿದ್ದು, ಅನೇಕ ತೆನೆಗಳಿಂದ ಕೂಡಿದ್ದಿತು. ಈ ತೆನೆಗಳನ್ನು ಕಟ್ಟಿಸಿದುದಲ್ಲದೆ ಅವುಗಳನ್ನು ಕಟ್ಟಿಸಿದವರ ಹೆಸರುಗಳನ್ನೂ ನಮೂದಿಸಿರುವುದು ಗಮನೀಯ ಸಂಗತಿ. ಅವುಗಳಲ್ಲಿ ಬೆಣ್ಣೆಯ ಸೆಟ್ಟಿ ಈಶ್ವರ ಸೆಟ್ಟಿಯ ತೆನೆ, ಕಪಿ ಸೆಟ್ಟಿಯ ತೆನೆ, ಮರಳಿಸೆಟ್ಟಿಯ ತೆನೆ, ಕಪ್ಪರ ದೇಚಿಸೆಟ್ಟಿ ತೆನೆ, ಮಂಡಸೆಟ್ಟಿ ತೆನೆ, ಬಚರ ತೆನೆ, ಅಗಡಿಯ ತೆನೆ, ಸಿಂಗೀಶ್ವರ ದೇವರ ತೆಂಕದವಾಗಿಲಂಗಡಿಯ ತೆನೆಗಳೆಂದೇ ಕರೆದಿರುವುದನ್ನು ಎ.ಎಂ. ಅಣ್ಣಿಗೇರಿಯವರು ಗುರುತಿಸಿದ್ದಾರೆ. ಇದರಿಂದ ಅಯ್ಯಾವೊಳೆ ಐನೂರ್ವರು ಮತ್ತು ಅಲ್ಲಿನ ಸೆಟ್ಟಿಯೆಂಬ ವ್ಯಾಪಾರಿ ಸಮುದಾಯವು ಐಹೊಳೆ ಕೋಟೆ ನಿರ್ಮಾಣದಲ್ಲಿ ವಹಿಸಿದ್ದ ಪಾತ್ರ ಮಹತ್ವದ್ದೆನಿಸುತ್ತದೆ. ಒಟ್ಟಿನಲ್ಲಿ ಐಹೊಳೆಯು ಕರ್ನಾಟಕದ ಪ್ರಾಚೀನ ಪಟ್ಟಣವಾಗಿ, ವಾಣಿಜ್ಯ ಕೇಂದ್ರವಾಗಿ, ದೇವಾಲಯಗಳ ಆಗರವಾಗಿ, ಸಾಂಸ್ಕೃತಿಕ ಕುರುಹುಗಳನ್ನು ಮೈದಳೆದುಕೊಂಡು ಇಂದಿಗೂ ಜೀವಂತಿಕೆಯನ್ನು ಹೊಂದಿರುವ ಚಾರಿತ್ರಿಕ ಸ್ಥಳವೆಂದರೆ ಅತಿಶಯೋಕ್ತಿ ಆಗಲಾರದು.

# ಗುಂಡಿಗಳಿಗೆ 20 ಕೋಟಿ ಗುಳುಂ ಮಾಡಿದ ಬಿಬಿಎಂಪಿಯ ಕತೆ..?

ಬೆಂಗಳೂರಿನ ರಸ್ತೆಗಳಲ್ಲಿನ ಗುಂಡಿಗಳನ್ನು ಶೀಘ್ರ ಮುಚ್ಚಲಾಗುತ್ತದೆ... ಇದು ಬಿಬಿಎಂಪಿ ಅಧಿಕಾರಿಗಳು ಹೇಳಿಕೆ.. ಇದಕ್ಕೆ ಕಿಮ್ಮತ್ತಂತುಇಲ್ಲ ಯಾಕೆಂದರೆ ಗುಂಡಿ ಮುಚ್ಚುವ ಕಾರ್ಯಕ್ಕೆ ಬಿಬಿಎಂಪಿ ಬರೋಬ್ಬರಿ 20 ಕೋಟಿಯನ್ನು ವೆಚ್ಚ ಮಾಡಿದೆ ಅದು ಫೈಲ್‌ನಲ್ಲಿ ಆದರೆ ಕಾರ್ಯದಲ್ಲಿ ಅಲ್ಲ ಎನ್ನುವದು ಬಾಯ್ದರೆದು ನಿಂತಿರುವ ಗುಂಡಿಗಳೆ ಕಥೆ ಹೇಳುತ್ತವೆ..



ಒಂದು ವೇಳೆ 20 ಕೋಟಿ ಬಿಬಿಎಂಪಿ ವ್ಯಯ ಮಾಡಿದ್ದರೆ ಬೆಂಗಳೂರು ಇಂದು ಗುಂಡಿಮುಕ್ತರಸ್ತೆಗಳಾಗುತ್ತಿದ್ದವು ಆದರೆ ಅಕೆಲವಂತೂ ಆಗಿಲ್ಲ ಆದರೆ ಇದಕ್ಕೆ ಉತ್ತರ ಹೇಳುವ ಬಿಬಿಎಂಪಿ ಆಯುಕ್ತ ಗೌರವ್‌ಗುಪ್ತ ಲೆಕ್ಕ ಹೆಳುತ್ತಾರೆ ಆದರೆ ಗುಂಡಿಮುಕ್ತ ರಸ್ತೆ ತೋರಿಸುತ್ತಿಲ್ಲ. ಇದು ಹಾಸ್ಯಾಸ್ಪದವಲ್ಲವೇ? ಬಿಬಿಎಂಪಿಯ ಭ್ರಷ್ಟಾಚಾರದ ಕರ್ಮಕಾಂಡದ ಮತ್ತೊಂದು ಅಸಲಿಯತ್ತು ಇದಲ್ಲವೇ?



ಕಳಪೆ ರಸ್ತೆಗಳನಿರ್ಮಾಣಕ್ಕೆ ಮೊನ್ನೆ ಬಂದ ಮಳೆಯೇ ಸಾಕ್ಷಿಯಾಗಿದೆ ಬೇಕಾಬಿಟ್ಟಿ ಕೆಲವಡೆ ಮುಚ್ಚಿದ ಗುಂಡಿಗಳು ಮತ್ತೆ ಬಾಯ್ದರೆದು ಬಿಬಿಎಂಪಿ ಬಂಡವಾಳವನ್ನು ಹರಾಜು ಹಾಕುತ್ತಿದೆ.ರಸ್ತೆ ಗುಂಡಿಗಳಿಗೆ ಹಾಕಿದ್ದ ತೇಪೆ ಕಿತ್ತು ಬಂದಿದ್ದು, ಕಳಪೆ ಕಾಮಗಾರಿಯ ಬಣ್ಣ ಬಯಲಾಗಿದೆ. ಬಿಬಿಎಂಪಿ ವ್ಯಾಪ್ತಿಯ ಯಾವುದೇ ರಸ್ತೆಗೆ ಕಾಲಿಟ್ಟರೂ ಗುಂಡಿ ಬಿದ್ದು ಅಧ್ವಾನವಾಗಿರುವ ರಸ್ತೆಗಳೇ ಸ್ವಾಗತ ಕೋರುತ್ತಿವೆ. ಅವೈಜ್ಞಾನಿಕವಾಗಿ ಗುಂಡಿಗಳನ್ನು ಮುಚ್ಚುತ್ತಿರುವುದರಿಂದ ಡಾಂಬರು ಕಿತ್ತು ಬಂದು ಮತ್ತೆ ಹೊಂಡ–ಗುಂಡಿಗಳು ನಿರ್ಮಾಣವಾಗುತ್ತಿವೆ. ಕಳಪೆ ಕಾಮಗಾರಿಯಿಂದ ರಸ್ತೆ ಗುಂಡಿ ಮುಚ್ಚಲು ಖರ್ಚು ಮಾಡಿದ ಕೋಟ್ಯಂತರ ರೂ. ತೆರಿಗೆದಾರರ ಹಣವು ವ್ಯರ್ಥವಾಗುತ್ತಿದೆ ಬಿಸಿ ಡಾಂಬರು ಘಟಕ ಸ್ಥಾಪನೆಯಾದ ಬಳಿಕ ನಗರದಲ್ಲಿ ರಸ್ತೆ ಗುಂಡಿಗಳ ಸಮಸ್ಯೆ ಸಂಪೂರ್ಣ ನೀಗಲಿದೆ ಎಂಬ ಬಿಬಿಎಂಪಿಯ ಭರವಸೆ ಸಂಪೂರ್ಣ ಹುಸಿಯಾಗಿದೆ.

ರಸ್ತೆ ಗುಂಡಿ ಕಾಣಿಸಿಕೊಳ್ಳುತ್ತಿದ್ದಂತೆಯೇ ಅವುಗಳನ್ನು ಮುಚ್ಚಲು ಸಾಧ್ಯವಾಗಬೇಕು ಎಂಬ ಕಾರಣಕ್ಕೆ ನಗರದ ಹೊರವಲಯದ ಕಣ್ಣೂರಿನಲ್ಲಿ ಬಿಬಿಎಂಪಿ ಬಿಸಿ ಡಾಂಬರು ಜಲ್ಲಿ ಮಿಶ್ರಣ ಘಟಕವನ್ನು ಎರಡು ವರ್ಷಗಳ ಹಿಂದೆ ಆರಂಭಿಸಿತ್ತು. 7.5 ಕೋಟಿ ವೆಚ್ಚದಲ್ಲಿ ಸ್ಥಾಪಿಸಿರುವ ಈ ಘಟಕ ಸಮರ್ಪಕವಾಗಿ ಬಳಕೆಯಾಗುತ್ತಿಲ್ಲ. ಹಾಗಾಗಿ ನಗರದ ರಸ್ತೆಗಳ ಗುಂಡಿಗಳ ದುಃಸ್ಥಿತಿ ಹಾಗೆಯೇ ಮುಂದುವರಿದಿದೆ. ಕಣ್ಣೂರಿನ ಘಟಕವು ಗಂಟೆಗೆ 120 ಟನ್‌ನಂತೆ 10 ಗಂಟೆಗಳಲ್ಲಿ 50 ಟ್ರಕ್‌ಗಳಷ್ಟು 160 ಡಿಗ್ರಿ ಉಷ್ಣಾಂಶದ ಹಾಟ್ ಮಿಕ್ಸ್ ಸಿದ್ಧಪಡಿಸುವ ಸಾಮರ್ಥ್ಯ ಹೊಂದಿದೆ. ಆದರೂ ಗುತ್ತಿಗೆದಾರರು ಷರತ್ತಿನ ಪ್ರಕಾರ ಬಿಬಿಎಂಪಿಯ ಬೇಡಿಕೆಯಷ್ಟು ಜಲ್ಲಿ? ಡಾಂಬರು ಮಿಶ್ರಣ ಪೂರೈಸುತ್ತಿಲ್ಲ. ಹಾಗಾಗಿ ರಸ್ತೆ ಗುಂಡಿಗಳನ್ನು ಮುಚ್ಚುವ ಕಾರ್ಯ ಈ ಘಟಕ ಆರಂಭವಾದಂದಿನಿಂದಲೇ ಹಳಿ ತಪ್ಪಿದೆ. ನಗರದ ಶೇಷಾದ್ರಿಪುರ, ಮಲ್ಲೇಶ್ವರ, ಲಗ್ಗೆರೆ, ಜೆ.ಪಿ.ನಗರ, ಬನಶಂಕರಿ, ಹಲಸೂರು ಸೇರಿದಂತೆ ಕನಕಪುರ ರಸ್ತೆ. ಹನುಮಂತನಗರ ಸೇರಿದಂತೆ ವಿವಿಧ ಕಡೆ ರಸ್ತೆಗಳಲ್ಲಿ ಡಾಂಬರು ಕಿತ್ತು ಹೋಗಿ ಭಾರಿ ಗಾತ್ರದ ಗುಂಡಿಗಳು ಸೃಷ್ಟಿಯಾಗಿವೆ. ರಸ್ತೆಗಳಲ್ಲಿ ವಾಹನ ದಟ್ಟಣೆ ಹೆಚ್ಚಾಗಿದೆ. ಹೊಂಡ ಗುಂಡಿಗಳಿಂದ ಕೂಡಿದ ರಸ್ತೆಗಳಲ್ಲಿ ಸಂಚರಿಸುವಾಗ ಪ್ರಯಾಣಿಕರು ಹೈರಾಣಾಗುತ್ತಿದ್ದಾರೆ. ದ್ವಿಚಕ್ರ ವಾಹನ ಸವಾರರಂತೂ ಕೆಸರುಗಳಿಂದ ತುಂಬಿದ ಗುಂಡಿಗಳ ಮೂಲಕ ಹಾದು ಹೋಗುವಾಗ ಜೀವ ಭಯವನ್ನು ಎದುರಿಸುತ್ತಿದ್ದಾರೆ.

ಕಣ್ಣೂರಿನ ಹಾಟ್ ಮಿಕ್ಸ್ ಘಟಕವನ್ನು ಸಮರ್ಪಕವಾಗಿ ನಡೆಸದ ಕಾರಣ ಎಂ.ಎಸ್. ವೆಂಕಟೇಶ್ ಅವರಿಗೆ ನೀಡಿದ್ದ ಗುತ್ತಿಗೆಯನ್ನು ಬಿಬಿಎಂಪಿ ರದ್ದುಪಡಿಸಿ ಹೊಸತಾಗಿ ಟೆಂಡರ್ ಕರೆದಿತ್ತು. 'ಕಣ್ಣೂರಿನ ಹಾಟ್ ಮಿಕ್ಸ್ ಘಟಕದ ನಿರ್ವಹಣೆಗೆ ಹೊಸತಾಗಿ ಜೆಎಂಸಿ ಕಂಪನಿಗೆ ಟೆಂಡರ್ ನೀಡಲಾಗಿದೆ. ಈ ಸಂಸ್ಥೆಗೆ ಆಗಸ್ಟ್ ತಿಂಗಳ ಅಂತ್ಯದಲ್ಲಿ ಕಾರ್ಯಾದೇಶ ನೀಡಲಾಗಿದೆ. ರಸ್ತೆ ಗುಂಡಿ ಸಮಸ್ಯೆ ಶೀಘ್ರವೇ ಬಗೆಹರಿಯಲಿದೆ ಎನ್ನುವ ಬಿಬಿಎಂಪಿ ಅಧಿಕಾರಗಳ ಕಣ್ಣೊರಿಸುವ ತಂತ್ರ ಮುಂದುವರೆದಿದೆ. ಬಿಬಿಎಂಪಿಯು ಗುಂಡಿ ಮುಚ್ಚುವುದಕ್ಕಾಗಿಯೇ ವಾರ್ಷಿಕ 46.10 ಕೋಟಿ ರೂ. ಖರ್ಚು ಮಾಡುತ್ತಿದೆ. ಇದಲ್ಲದೆ, ರಸ್ತೆ ಅಭಿವೃದ್ಧಿ, ಡಾಂಬರೀಕರಣ ನೆಪದಲ್ಲಿ ಕೋಟಿಗಟ್ಟಲೆ ಹಣ ವ್ಯಯಿಸುತ್ತಿದೆ. 2015–16ರಿಂದ ಇಲ್ಲಿಯವರೆಗೆ ರಸ್ತೆಗಳ ನಿರ್ಮಾಣ, ನಿರ್ವಹಣೆ ಮತ್ತು ಡಾಂಬರೀಕರಣಕ್ಕೆ 20,060 ಕೋಟಿ ರೂ. ವ್ಯಯಿಸಲಾಗಿದೆ. ಇಷ್ಟಾದರೂ ನಗರದ ರಸ್ತೆಗಳು ಗುಂಡಿ ಮುಕ್ತವಾಗುತ್ತಿಲ್ಲ.

## ಹೆಜ್ಜೆ ಹೆಜ್ಜೆಗೂ ಗುಂಡಿಗಳು

ಹೆಜ್ಜೆ ಹೆಜ್ಜೆಗೂ ಧುತ್ತನೆ ಎದುರಾಗುವ ಗುಂಡಿಗಳನ್ನು ತಪ್ಪಿಸಲು ಹೋಗಿ ವಾಹನ ಸವಾರರು ಬಿದ್ದು ಗಾಯಗೊಳ್ಳುವುದು ಮಾಮೂಲಿ ಆಗಿದೆ. ಜಲ್ಲಿಕಲ್ಲು ಎದ್ದು ಬಂದು ಅಧ್ವಾನವಾಗಿರುವ ರಸ್ತೆಗಳಲ್ಲಿ ಚಲಿಸಲು ವಾಹನಗಳೂ ಏದುಸಿರು ಬಿಡುತ್ತಿವೆ. ಪೆಟ್ರೋಲ್, ಡೀಸೆಲ್ ದರ ಏರಿಕೆಯಿಂದ ಕಂಗೆಟ್ಟಿರುವ ಸವಾರರು, ವಾಹನಗಳ ರಿಪೇರಿಗಾಗಿ ಸಾವಿರಾರು ರೂ. ವ್ಯಯಿಸಬೇಕಾಗಿದೆ. ಪಾಲಿಕೆಯು ನಿಯಮಬದ್ಧವಾಗಿ ಗುಂಡಿಗಳನ್ನು ಮುಚ್ಚುತ್ತಿಲ್ಲ. ಇದರಿಂದಾಗಿ ದುರಸ್ತಿಪಡಿಸಿದಷ್ಟೇ ವೇಗದಲ್ಲಿ ಡಾಂಬರು ಕಿತ್ತು ಬರುತ್ತಿದ್ದು, ಜನರ ಪರದಾಟ ಮುಂದುವರಿದಿದೆ. ಹೊಂಡ–ಗುಂಡಿಗಳಿಂದ ಅಧ್ವಾನವಾಗಿರುವ ರಸ್ತೆಗಳು ವಾಹನ ಸವಾರರ ಜೀವ ತೆಗೆಯುತ್ತಿವೆ. ಅವೈಜ್ಞಾನಿಕ ಮತ್ತು ಕಳಪೆ ಕಾಮಗಾರಿಯಿಂದ ತೇಪೆ ಹಾಕಲಾದ ಕಡೆಯೇ ಮತ್ತೆ ಗುಂಡಿಗಳು ಬೀಳುತ್ತಿವೆ. ಎಡೆಬಿಡದೆ ಸುರಿಯುತ್ತಿರುವ ಮಳೆಗೆ ರಸ್ತೆಗಳೆಲ್ಲವೂ ಅಸ್ಥಿಪಂಜರಗಳಂತಾಗಿವೆ.

ಜಲ್ಲಿಕಲ್ಲುಗಳು ರಸ್ತೆ ತುಂಬಾ ಹರಡಿಕೊಂಡಿದ್ದು,



ವಾಹನ ಸವಾರರಿಗೆ ಕಂಟಕವಾಗಿ ಪರಿಣಮಿಸಿವೆ. ಕಂದಾಯ ಸಚಿವ ಆರ್.ಅಶೋಕ್ ಅವರು ಪಾಲಿಕೆ ಅಧಿಕಾರಿಗಳೊಂದಿಗೆ ಎರಡು ಸಲ ಸಭೆ ನಡೆಸಿ, ಗುಂಡಿಗಳನ್ನು ಮುಚ್ಚಲು ಗಡುವು ನೀಡಿದ್ದರು. ಈ ಡೆಡ್‌ಲೈನ್ ಮುಗಿದು ಹಲವು ದಿನಗಳು ಕಳೆದರೂ ರಸ್ತೆಗಳ ಸ್ಥಿತಿಯಲ್ಲಿ ಯಾವುದೇ ಬದಲಾವಣೆ ಆಗಿಲ್ಲ. ಕಳೆದ ತಿಂಗಳು ರಸ್ತೆ ಗುಂಡಿಗಳಿಗೆ ಮೂವರು ಬಲಿಯಾಗಿದ್ದಾರೆ. ಇಷ್ಟಾದರೂ ಹಲವು ರಸ್ತೆಗಳಲ್ಲಿ ಇನ್ನಷ್ಟು ವಾಹನ ಸವಾರರ ಜೀವ ತೆಗೆಯಲು ಗುಂಡಿಗಳು ಬಾಯ್ದರೆದು ಕುಳಿತಿವೆ. ಮಳೆ ಬಂದಾಗಲಂತೂ ಗುಂಡಿ ಯಾವುದು, ರಸ್ತೆ ಯಾವುದು ಎಂಬುದು ಗೊತ್ತಾಗದೆ ಬಿದ್ದು ಗಾಯಗೊಳ್ಳುತ್ತಿದ್ದಾರೆ. ಸವಾರರು ಪ್ರಾಣ ಭೀತಿಯಲ್ಲೇ ವಾಹನ ಚಲಾಯಿಸಬೇಕಿದೆ. ಕೊಂಚ ಜೋರು ಮಳೆ ಸುರಿದರೆ ಸಾಕು, ರಸ್ತೆಗಳಲ್ಲಿ ಸಾಲು ಸಾಲಾಗಿ ಇಣುಕುವ ಗುಂಡಿಗಳು ಜನರ ಬದುಕನ್ನು ಹೈರಾಣಾಗಿಸುತ್ತಿವೆ. ರಸ್ತೆಯಲ್ಲಿ ಗುಂಡಿಗಳಿವೆಯೋ, ಹೊಂಡಗಳಲ್ಲೇ ರಸ್ತೆ ಇದೆಯೋ ಎನ್ನುವಷ್ಟರ ಮಟ್ಟಿಗೆ ರಸ್ತೆಗಳು ಅಧ್ವಾನವಾಗಿವೆ.

# ಎರಡೂ ಕ್ಷೇತ್ರದಲ್ಲೂ ಬಿಜೆಪಿಗೆ ಬಿಎಸ್‌ವೈ ಅನಿವಾರ್ಯ

● ವತಿಮ

ಸಿಂದಗಿ ಮತ್ತು ಹಾನ್‌ಗಲ್ ನ ಉಪ ಚುನಾವಣೆಯಲ್ಲಿ ಬಿಜೆಪಿ ಮಟ್ಟಿಗೆ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಮತ್ತುಅವರ ಪುತ್ರ ವಿಜಯೇಂದ್ರ ಅವರೇ ಪಕ್ಷಕ್ಕೆ ಜೀವಾಳ ಎನ್ನುವುದು ಒಳಮರ್ಮ ಯಾಕೆಂದರೆ ಬಿಎಸ್‌ವೈ ಮತ್ತು ವಿಜಯೇಂದ್ರ ಹೋದಲ್ಲೆಲ್ಲಜನವೋ ಜನ ಸಾಗರ ಸೇರುತ್ತಿದೆ ಹೀಗಾಗಿ ಬಿಜೆಪಿ ಅವರನ್ನು ಬಿಡಲು ಸಜ್ಜಾಗಿದ್ದ ಈ ವೇಳೆ ಈ ಜನಸಾಗರವನ್ನು ಕಂಡು ದಂಗಾಗಿದೆ. ಬಿಎಸ್‌ವೈ ಅವರನ್ನು ಸಿಎಂ ಸ್ಥಾನದಿಂದ ಕೆಳಗಿಳಿಸಿದ ನಂತರ ಅವರನ್ನು ಮೂಲೆಗುಂಪು ಮಾಡಬೇಕು ಎನ್ನುವ ಹಲವರ ತಂತ್ರಗಳು ಬಾರಿ ಕೆಸಲ ಮಾಡಿದ್ದವು ಆದರೆ ಈ ಉಪ ಚುನಾವಣೆ ಮತ್ತು ಅವರು ತೆರೆಮರೆಯಲ್ಲಿ ನಡೆಸುತ್ತಿರುವ ರಾಜಕೀಯ ದ್ರುವೀಕರಣದ ಚರ್ಚೆಗಳು ಬಿಜೆಪಿಗೆ ಅಚ್ಚರಿ ಮೂಡಿಸಿವೆ ರಾಜ್ಯದ ಕೆಲ ನಾಯಕರಿಗೆ ಅದೊಂದು ಆತಂಕವೂ ಮೂಡಿಸಿದೆ.



ಮುಂದಿನ ಚುನಾವಣೆ ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿ ಎಂದು ಕೇಂದ್ರ ಗೃಹಸವಿವ ಶಾ ಹೇಳುವ ಮೂಲಕ ಬಿಎಸ್‌ವೈ ಅವರನ್ನು ಪಕ್ಕಕ್ಕೆ ಸರಿಸುವ ಯತ್ನವೂ ನಡೆಯುತು ನಿಧಾನವಾಗಿ ಬೊಮ್ಮಾಯಿ ಕೂಡ ನಾನೇ ಹೀರೋ ಎನ್ನವ ಫೋಜ್ ಕೂಡ ಕೊಡುತ್ತಾ ಹೋದರೆ ..ಆದರೆ ಅವರಿಗೆ ನಿರೀಕ್ಷಿತ ಮಟ್ಟದ ಯಶಸ್ಸು ಸಿಗುವಲ್ಲಿ ಅನುಮಾನವೂ ವ್ಯಕ್ತವಾಯಿತು. ಇಂತ ಹೊತ್ತಿನಲ್ಲಿಯೇ ಬಂದ ಈ ಎರಡು ಉಪ ಚುನಾವಣೆ ಸಿಎಂ ಗೆ ಗೆಲ್ಲವು ಅನಿವಾರ್ಯ ಇದೆ ಹೀಗಾಗಿ ಬಿಎಸ್‌ವೈ ಅವರನ್ನು ಪ್ರಚಾರಕ್ಕೆ ತಯಾರು ಮಾಡಿಕೊಂಡು ಬಂದರು. ಅಲ್ಲದೆ ಸಂತೋಷ್ ಕೂಡ ಅವರನ್ನು ಚುನಾವಣೆ ಪ್ರಚಾರಕ್ಕೆಬರುವಂತೆ ಮನವಿ ಮಾಡಿಕೊಂಡಿದ್ದರು ಇದು ಅವರನ್ನು ಮತ್ತಷ್ಟು ಬಿಜೆಪಿಗೆ ನಾನು ಅನಿವಾರ್ಯ ಎನ್ನುವ ಸಂದೇಶವೂ ರವಾನಿಸಿತ್ತು. ರಾಷ್ಟ್ರೀಯ ಪ್ರದಾನ ಕಾರ್ಯದರ್ಶಿ ಸಂತೋಷ್ ಅವರು ಬಿಎಸ್‌ವೈ ಅವರನ್ನು ಸಿಎಂ ಸ್ಥಾನದಿಂದ ಕೆಳಗಿಳಿಸಿ ಆ ಸ್ಥಾನಕ್ಕೆ ಕೂರಬೇಕು ಎನ್ನುವ ಅಚಲ ಆಸೆ ಆದರೆ ಆ ಆಸೆ ಈಡೇರಲಿಲ್ಲ ಬದಲಿಗೆ ಬಿಎಸ್‌ವೈ ಅವರನ್ನು ಕೆಳಗಿಳಿಸುವುದು ಫಲಕಾರಿಯಾಯಿತು .ಅಲ್ಲದೆ ಬಿಎಸ್‌ವೈ ಅವರನ್ನು ಬಿಟ್ಟು ಬಿಜೆಪಿಯನ್ನು ದೃಡಗೊಳಿಸಬೇಕು ಎನ್ನುವ ವಿಶ್ವಾಸ ಅವರಲ್ಲಿತ್ತು ಆದರೆ ಈಗ ಅದು ನಿರಾಸೆಯಾಗಿದೆ ಯಾಕೆಂದರೆ ಸಮೀಕ್ಷೆಯೊಂದರ ಪ್ರಕಾರ ಬಿಎಸ್‌ವೈ ಇಲ್ಲದೆ ಹೋದರೆ ಸಿಂದಗಿ ಮತ್ತು ಹಾನಗಲ್ ಗೆಲುವು ಕಷ್ಟ ಎನ್ನುವುದು ಸ್ಪಷ್ಟವಾಗಿ ಹೇಳಿತ್ತು ಈ ಕಾರಣಕ್ಕಾಗಿ ಸಿಎಂ ಮತ್ತು ಸಂತೋಷ್ ಇಬ್ಬರು ಬೇಟಿ ಮಾಡಿ ಅವರನ್ನು ಚುನಾವಣೆಗೆ ಬರುವಂತೆ ಮನವಿ ಮಾಡಿಕೊಂಡಿದ್ದರು. ಆದರೂ ಬಿಎಸ್‌ವೈ ಪ್ರತ್ಯೇಕವಾಗಿಪ್ರಚಾರ ಮಾಡಲು ಹೊರಟರು ಅವರು ತಮ್ಮ ಪುತ್ರ ಸೇರಿ ಪ್ರತ್ಯೇಕ ಪ್ರಚಾರ ಮಾಡಿದರು ಇದು ಬಿಜೆಪಿಗೆ ಒಂದಿಷ್ಟು ಸಂತಸ ತಂದಿದೆ ಯಾಕೆಂದರೆ, ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯನವರ ನೇತೃತ್ವದಲ್ಲಿ ಕಾಂಗ್ರೆಸ್ ಜಾತೀವಾರು ಸಭೆಗಳನ್ನು ನಡೆಸುತ್ತಿದೆ. ಈ ಸಭೆಗಳಿಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿರುವುದು ಬಿಜೆಪಿಯ ನಿದ್ದೆಗೆಡಿಸಿದೆ. ಅಭಿವೃದ್ಧಿ/ಬೆಲೆ ಏರಿಕೆ ವಿಚಾರಕ್ಕಿಂತ ಹೆಚ್ಚಾಗಿ ವೈಯಕ್ತಿಕ ಟೀಕೆಗಳೇ ಮೇಲುಗೈ ಸಾಧಿಸುತ್ತಿದೆ. ಯಡಿಯೂರಪ್ಪನವರು ಭರ್ಜರಿ ಪ್ರಚಾರ ನಡೆಸಿ ನಂತರ, ಕಾರ್ಯಕರ್ತರ ಹುಮ್ಮಸ್ಸು ಹೆಚ್ಚಾಗಿದೆ ಇದು ಬಿಜೆಪಿಗೆ ಪ್ಲಸ್ ಪಾಯಿಂಟ್ ಆಗುವ ಸಾಧ್ಯತೆ ಇಲ್ಲದಿಲ್ಲ. ಚುನಾವಣೆ ನಡೆಯುತ್ತಿರುವ ಎರಡೂ ಕ್ಷೇತ್ರದಲ್ಲಿ ಲಿಂಗಾಯತ ಸಮುದಾಯ ಮಹತ್ವದ ಪಾತ್ರ ವಹಿಸುತ್ತಿರುವುದರಿಂದ, ಯಡಿಯೂರಪ್ಪ ಮತ್ತು ಅವರ ಪುತ್ರ/ರಾಜ್ಯ ಬಿಜೆಪಿ ಉಪಾಧ್ಯಕ್ಷರೂ ಆಗಿರುವ ಬಿ.ವೈ.ವಿಜಯೇಂದ್ರ ಅವರನ್ನು ಪಕ್ಷ ಹೆಚ್ಚಾಗಿ ಅವಲಂಬಿಸಿದೆ. ಇದಕ್ಕೆ ಬೇರೊಂದು ಕಾರಣವೂ ಇದೆ. ಪ್ರಮುಖವಾಗಿ, ಹಾನಗಲ್ ನಲ್ಲಿ ಒಳ ಹೊಡೆತದ ಭಯ ಬಿಜೆಪಿ ಮತ್ತು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಯವರಿಗೆ ಕಾಡುತ್ತಿದೆ. ತವರು ಜಿಲ್ಲೆಯ ವ್ಯಾಪ್ತಿಯಲ್ಲಿ ಈ ಕ್ಷೇತ್ರ ಬರುವುದರಿಂದ, ಈ ಚುನಾವಣೆ ಗೆಲ್ಲುವುದು ಬೊಮ್ಮಾಯಿಯವರಿಗೆ ಮುಖ್ಯವಾಗಿದೆ. ಸ್ಥಳೀಯ ಮುಖಂಡರು ಮತ್ತು ಕಾರ್ಯಕರ್ತರು ಬಯಸಿದ್ದವರಿಗೆ ಬಿಜೆಪಿ ಟಿಕೆಟ್ ನೀಡದೇ ಇರುವುದರಿಂದ, ವಿರೋಧಿ ಬಣದ ಜೊತೆಗೆ ಸ್ಥಳೀಯ ನಾಯಕರು ಒಪ್ಪ ಒಪ್ಪಂದ ಮಾಡಿಕೊಳ್ಳುವ ಭೀತಿ ಬಿಜೆಪಿಗೆ ಕಾಡುತ್ತಿದೆ.



ಸಿ.ಎಂ.ಉದಾಸಿ ಕುಟುಂಬದ ಸದಸ್ಯರಿಗೆ ಟಿಕೆಟ್ ಸಿಗಬಹುದು ಎನ್ನುವುದು ಕಾರ್ಯಕರ್ತರ ಮತ್ತು ಖುದ್ದು ಉದಾಸಿ ಕುಟುಂಬದ ನಿರೀಕ್ಷೆಯಾಗಿತ್ತು. ಆದರೆ, ಬಿಜೆಪಿ ಬೇರೆಯವರಿಗೆ ಟಿಕೆಟ್ ನೀಡಿರುವುದು ಕಾರ್ಯಕರ್ತರ ಆಕ್ರೋಶಕ್ಕೆ ಕಾರಣವಾಗಿತ್ತು. ಈ ಅಂಶವನ್ನು ಆಂತರಿಕ ಸಮೀಕ್ಷೆಯಲ್ಲೂ ಉಲ್ಲೇಖಿಸಲಾಗಿದೆ. ಜೊತೆಗೆ, ಯಡಿಯೂರಪ್ಪನವರು ಪ್ರಚಾರ ನಡೆಸುವುದು ಅತಿಮುಖ್ಯ ಎಂದೂ ಸಮೀಕ್ಷೆಯಲ್ಲಿ ಹೇಳಲಾಗಿತ್ತು. ಇದರಿಂದಾಗಿ, ಯಡಿಯೂರಪ್ಪ ಮತ್ತು ವಿಜಯೇಂದ್ರ ಅವರನ್ನು ಉಳಿದಿರುವ ದಿನಗಳಲ್ಲಿ ಅತಿಹೆಚ್ಚು ಬಳಸಿಕೊಳ್ಳುವುದೇ ಬಿಜೆಪಿಗೆ ಬೇರೆ ಮಾರ್ಗ ಇಲ್ಲ ಎಂದು ಹೇಳಲಾಗುತ್ತಿದೆ. ಬಿಜೆಪಿಯನ್ನು ದಡ ಸೇರಿಸುವ ಸಾಮರ್ಥ್ಯ ಇರುವುದು ಯಡಿಯೂರಪ್ಪನವರಿಗೆ ಮಾತ್ರ

"ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಶ್ರೀನಿವಾಸ ಮಾನೆ ಕಳೆದ ಚುನಾವಣೆಯಲ್ಲಿ 6,500 ಮತಗಳ ಅಂತರದಿಂದ ಸೋತಿದ್ದರು, ಈ ಬಾರಿ ಅದು ಅನುಕಂಪಕ್ಕೆ ತಿರುಗಿ, ಕಾಂಗ್ರೆಸ್ಸಿಗೆ ಅನುಕೂಲವಾಗಬಹುದು. ಈ ಸಂದರ್ಭದಲ್ಲಿ ಬಿಜೆಪಿಯನ್ನು ದಡ ಸೇರಿಸುವ ಸಾಮರ್ಥ್ಯ ಇರುವುದು ಯಡಿಯೂರಪ್ಪನವರಿಗೆ ಮಾತ್ರ. ಶಿವಮೊಗ್ಗ ಜಿಲ್ಲೆಗೆ ಹಾನಗಲ್ ಹೊಂದಿ ಕೊಂಡಿರುವುದರಿಂದ ಇಲ್ಲಿ ಬಿಎಸ್ವೈ ಮತ್ತು ವಿಜಯೇಂದ್ರ ಪ್ರಭಾವ ಹೆಚ್ಚಿದೆ" ಎಂದು ಸ್ಥಳೀಯ ಕಾರ್ಯಕರ್ತರೊಬ್ಬರು ಹೇಳಿದ್ದಾರೆ.

ಈಗಾಗಲೇ ಯಡಿಯೂರಪ್ಪ ಸಾರ್ವಜನಿಕ ಸಭೆ ಮತ್ತು ರೋಡ್ ಶೋ ನಡೆಸಿದ್ದಾರೆ. ಅವರು ಹೋದಲೆಲ್ಲಾ ಜನಪ್ರವಾಹವೇ ಹರಿದು ಬರುತ್ತಿದೆ, ಇದು ಅವರ ಜನಪ್ರಿಯತೆಯನ್ನು ತೋರಿಸುತ್ತಿದೆ. ಹಾಗಾಗಿ, ಬಹಿರಂಗ ಪ್ರಚಾರ ಮುಗಿಯುವ ದಿನ ಬೃಹತ್ ರೋಡ್ ಶೋ ನಡೆಸಲು ಬಿಜೆಪಿ ನಿರ್ಧರಿಸಿದೆ. ಇನ್ನು, ವಿಜಯೇಂದ್ರ ಕೂಡಾ ಪ್ರಚಾರ ನಡೆಸುತ್ತಿದ್ದು, ಯುವಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳುತ್ತಿದ್ದಾರೆ. ಒಟ್ಟಿನಲ್ಲಿ, ಯಡಿಯೂರಪ್ಪ ಮತ್ತು ವಿಜಯೇಂದ್ರ ಅವರೇ ಹಾನಗಲ್ ನಲ್ಲಿ ಬಿಜೆಪಿಗೆ ಆಸರೆ ಎನ್ನುವ ಪರಿಸ್ಥಿತಿಯಿದೆ.

ಹಾಗಾಗಿ ತಂದೆ ಮಕ್ಕಳಿಬ್ಬರು ಈ ಚುನಾವಣೆ ಜೊತೆಗೆ ಬಿಜೆಪಿಗೆ ಎಷ್ಟು ಅನಿವಾರ್ಯ ಎನ್ನುವುದನ್ನು ಮನದಟ್ಟಮಾಡಿಕೊಟ್ಟಿದೆ.



# ಒಂದು ಫೋನ್ ಕಾಲ್ ಹಿಂದೆ..

ಸ್ಥಿತಿಬಿಂಬ

ಡಾ.ಶಿವಕುಮಾರ್ ಕಂಪ್ಲಿ



ಹಾಯ್ ಮುತ್ತು ಹೇಗಿದ್ದೀಯೋ ದೊರಿಯೇ?..? ಬಲ್ ನನ್ಮಗ ಕಣೋ ನೀನು ನಿನಗೆ ನಾವೇ ಫೋನ್ ಮಾಡಬೇಕು! ಬೋಳಿ ಮಗನೆ ಕನಿಷ್ಟ ವಾಟ್ಸಪ್ ಮೆಸೇಜ್ ಆದ್ರೂ ನೋಡೋ! ನಾ ಎಷ್ಟು ಫೇಸ್ ಬುಕ್ ನಲ್ಲಿ ಎಷ್ಟೊಂದು ಮೆಸೇಜ್, ವಿಡಿಯೋ ಹಾಕ್ತಿನಿ ನೀ ಯಾವೋಗ್ಲೋ ಒಂದು ಸಲ ಆ ಗುಲ್ಬರ್ಗಾದೊಳಗೆ ಭೂಮಿ ಕಂಪಿಸಿದಂತೆ ಬಂದು ಒಂದು ಹೆಬ್ಬಟ್ಟಿನ ಲೈಕ್ ಒತ್ತುತ್ತೀಯ ಮರೆಯಾಗಿ ಬಿಡ್ತೀಯಾ.ಅನ್ ಪಡ್ ನನ ಮಗನೇ! ಹೇಗಿದ್ದೀಯೋ..! ಹಾ ನಿನ್ನ ನೌಕರಿ ಏನಾಯಿತು.ಪಾಪ ನಿನಗೆ,ನಿನ್ನ ಟಾಲೆಂಟ್ ಗೆ ಎಂದೋ ನೌಕರಿ ಖಾಯಂ ಆಗಿರಬೇಕಿತ್ತು ಬಟ್ ನಿರಾಸೆ ಆಗಬೇಡ ಕಣೋ.. ಬದುಕಿಗೆ ಮಾಸ್ತರಿಕಿ ಉದ್ಯೋಗ ಒಂದೇ ಅಲ್ಲ.ಮುಸುಗು ತೆಗೆದು ಲೋಕನೋಡು ನೂರೆಂಟು ಉದ್ಯೋಗ ಕಾಣಸ್ತಾವ.

ಹಾ..ಯಪ್ಪಾ ನಾ ಅಷ್ಟು ಓದೇನಿ..! ನನಗಿ ಅದಾ ಉದ್ಯೋಗ ಬೇಕು ಅದಾ ಜಾಗದಾಗ ಇರಬೇಕು ಅನ್ನೋ ಭ್ರಮಿ ಬಿಡು.ನುಗ್ಗು ಎಲ್ಲಿ ನೆಲಿ ಸಿಗತಾದೋ ಅಲ್ಲಿ ಗಟ್ಟಿಗೆ ನಿಲ್ಲೋದನ್ನ ಕಲಿ. ಮುತ್ತು ಈಗ ಜಮಾನ ಚೇಂಜ್ ಆಗಿದೆ ಕಣೋ..ಉದ್ಯೋಗ ಯಾವುದಾದರೇನು ಬಾ ಒಂದು ಸರ್ತಿ ಬೆಂಗಳೂರು ನೋಡು ಇಲ್ಲಿ ದುಡಿಬೇಕು ಗಳಸಬೇಕು.ಅದಾ ಪರಾದರ್ಶಕತೆ ಉತ್ಸಾಹದಿಂದ ನಿಯತ್ತಿನಿಂದ ದುಡಿದರ ಯಾವ ಸಮಾಜವಾದರೂ ಎಂದಿಗೂ ಗೌರವಿಸುತ್ತದೆ.




ಲೇ ಯಾರು ಕೇಳ್ತಾರೋ ನಿನ್ನ ಗೋಳ್ನಾ.? ಮುತ್ತು ..ಜನ ನಗಿಗೆ ಹೊಂದಿಕೊಂಡಂಗ ಕಣ್ಣೀರಿಗೆ ಒಗ್ಗಲ್ಲ ಕಣಪ್ಪಾ.ನೀವು ಗಣಸಮಕ್ಕಳು ಎಲ್ಲಿ ಬೇಕಾದ್ರು ನುಗ್ಗ ಬಹುದು.ಒಮ್ಮೆ ನಿನ್ನ ಕುದುರೆಯ ಕಣ್ಣ ಪಟ್ಟಿ ತೆಗೆದು ನೋಡು,ಒಮ್ಮೆ ನಿನ್ನ ಜಾಬ್ ಈಗೋ ಬಿಟ್ಟು ನೋಡು ಉದ್ಯೋಗಗಳು ನಿನ್ನ ಕಣ್ಣೆದುರೇ ಕಾಣ್ತಾವ. ಕುವೆಂಪು ಹೇಳಿಲ್ಲೇನು " ನಡೆ ಮುಂದೆ ನಡಿ ಮುಂದೆ ನುಗ್ಗಿ ನಡೆ ಮುಂದೆ " ನೋಡು ಅವರ ಮಗನಾ ಅವ್ರಂಗ ಮಾಸ್ತರಿಕಿ ಹಿಂದ ಬೀಳಲಿಲ್ಲ.ತೇಜಸ್ವಿ,ದೇವನೂರು,ಲಂಕೇಶ್,ಯಾರೂ ಇದೇ ಉದ್ಯೋಗ ಅಂತ ಬೆನ್ನು ಬಿದ್ದೋರಲ್ಲ. ತಮ್ಮದೇ ನಡೆಯಲ್ಲಿ ನಡೆದು ತಾವು ಕಲಿತದ್ದನ್ನ ಇನ್ನೂ ಗಟ್ಟಿಗೊಳಿಸಿಕೊಂಡವರು ಅಲ್ವೇನೋ..ಗೂಬೆ? ಲೋ ..ಮುತ್ತು ಬೀ ಹ್ಯಾಪಿ.ಬಿ ಸ್ಪೋರ್ಟಿವ್! ಲೈಫ್ ಈಜ್ ಷಾರ್ಟ ಕಣೋ..ಸದಾ ನಗುತಿರಬೇಕು.ನಗುವವರ ಸಂಗಡ ಬೆರಿತಿರಬೇಕು.ಅಣ್ಣಾವರು ಹೇಳಿದಂಗ " ನಗು ನಗುತಾ ನಲೀ ನಲೀ ಏನೇ ಆಗಲಿ ."

ನಮ್ಮ ಕಥಿ ಬಿಡಪ್ಪಾ ನಾವು ಏನಂದ್ರೂ ಈ ಲೋಕ ನಮ್ಮನ್ನ ಸೆಕೆಂಡರಿಯಾಗೇ ನೋಡ್ತದ. ಗಂಡ ಮನಿ,ಮಕ್ಕಳು ಅಂತ ಕಳದೋಗೋ ಲೋಕದೊಳಗ ನಾವು ಬಡದಾಡಬೇಕು.ಗೊತ್ತಲ್ಲ ನಮ್ಮ ಯಜಮಾನಪ್ಪ ಸ್ಟೇಟ್ ನೌಕರಿಯೊಳಗದನಾ ತೊಗೊಂಡ್ ಏನ್ ಮಾಡ್ತೀ..? ಎರಡು ಮಕ್ಕಳಾದ್ವು ಅನ್ನೋದನ್ನ ಬಿಟ್ರ ನಾ ಏನ್ ಸಾದಿಸಿದೇ? ಅಷ್ಟುದ್ದಾ ಓದಿದ್ದು ಇದಕ್ಕಾನಾ ಅನ್ನಿಸದಿರದು.ಹಾಕ್ಯಾಡಿ ಹಾಕ್ಯಾಡಿ ಈಗ ನಾನೂ ಮಸ್ತರಿಕಿ ಸೇರೀನಿ.ಮಕ್ಕಳ ಜೊತೆಗೇ ಎಲ್ಲಾ ಮರೀತೀನಿ.ಪಾಠ ಮಾಡೋದ್ರಾಗ ಏನ್ ಮಜಾ ಸಿಗತೈತಿ.ಆ ಮಕ್ಕಳ ಕಣ್ಣೊಳಗೆ ಬೆಳಕು ಕಾಣುವಾಗ ನಮ್ಮ ಬಗ್ಗೆ ಎಷ್ಟು ಖುಷಿ ಅನಸತೈತಿ.ನಿಜ ಕಣೋ ಮಾರ್ಕ್ಸ ಧರ್ಮ ಅಪೀಮು ಅಂದಾನ ಆದ್ರೆ ನನಗನಸತೈತಿ ಮಾಸ್ತರಿಕಿ ಅಪೀಮಿದ್ದಾಂಗ.ಪಾಠದ ನಿಶೆ ಹತ್ತಿದರೆ ಓದು ಹಗಲು ರಾತ್ರಿಗಳನ್ನ ಹಂಗಾ ತಿಂದು ಬಿಡತಾವು.

ಹಾ..ಆಕಿಕಾಲದ ಜನರೂ ದೊಡ್ಡವರಿರಬೇಕು ನೋಡು! ಆಕಿ ಒಬ್ಬಂಟಿಯಾಗಿ ಉಡುತಡಿಯಿಂದ ಕದಳಿತನಕ ಯಾವ ದೊಡ್ಡ ಅಡತಡೆಯಿಲ್ಲದೆ ನಡೆದಳು.ನಮ್ಮದು ವಿಲನ್ ಗಳ ಕಾಲ.ಇಲ್ಲಿ ಹುಚ್ಚಪ್ಯಾಲಿ ತರ ಆಡುವ ಉಪೇಂದ್ರ ನಂತಾವು ಗಂಡುರೂಪೀ ಒಲವನ್ನ ಸೃಷ್ಟಿಸುತ್ತಾವು. ಯಾವುದು ಒಲವೇ ಜೀವನ ಸಾಕ್ಷಾತ್ಕಾರ ಆಗಿತ್ತೋ ಅಲ್ಲಿ " ಪ್ರೀತ್ಸೆ ಪ್ರೀತ್ಸೇ.." ಅಂತ ಆತ ಕಿರುಚಾಡುತ್ತಾನೆ. ಇವನ ಹಾದಿಯಲ್ಲೇ ಓದಲಾರದ ಮುಂಗಾರು ಮಳೆ ಗಣೇಶ ಗಂಡು ರೂಪಿ ಒಲವನ್ನ ಬಿಂಬಿಸುತ್ತಾನೆ. ಅಣ್ಣಾವರ ಮಗನ ಓಂ ನಂತರ ಲಾಂಗು ಮಚ್ಚು ಹಿಡಿದವರು ಚಂದದ ಹುಡುಗಿಯರನ್ನ ನೋಡಿದರೆ ಅವರು ಪ್ರೀತಿಸಲೇ ಬೇಕು ಅನ್ನುವ ಹೊಸ ಕಾಲದ ಪ್ರೇಮಾಯಣ ಬರೆಯುತ್ತಾರೆ. ಅಂದಹಾಗೆ ಈಗ ರಾವಣ ಹೀರೋ.. ಗೂಡ್ಸೆ ದೇಶ ಭಕ್ತ.ಹಾಡ ಹಗಲೇ ಏನೇನೋ ಕೆಟ್ಟ ಸುದ್ದಿಗಳು.ಬಸ್ಸಿನೊಳಗೇ ಹರಿದು ಮುಕ್ಕಿ ಮುಗಿಸುವವರು,ಟಾಕ್ಸಿ ಹತ್ತಿದವಳ ಹಾಳು ಮಾಡುವವರು,ವಿಹಾರಕ್ಕೆ ಹೋದವರ ಮುಗಿಸುವವರು.ಪುಟಾಣಿ ಮಗು ಅನ್ನೋದನ್ನೂ ನೋಡದ ಕ್ರೌರ್ಯ ಈ ಕಾಲದ್ದು.ವರ್ಷಗಳ ಹಿಂದೆ ಕಲಿಗಣನಾಥ ಗುಡದೂರರ ಗಾಂಧಿ ನೋಟು ಕಥೆ ಓದಿ ಇದೊಂದು ವಿಚಿತ್ರ ಕಲ್ಪನಾ ಅಂದುಕೊಂಡಿದ್ದೆ.ಆದರೆ ಈಗ ಅದೇ ವಾಸ್ತವ ಆಗತೊಡಗಿದೆ. ಪುಣ್ಯಾತ್ಮರಾದ ನಮ್ಮ ನಾಯಕರೂ "ಆಕಿ ಅಲ್ಲಿಗೆ ಯಾಕ ಹೋಗಬೇಕಿತ್ತು?" ಅನ್ನೋ ಮಾತಿನ ಕಾಲದಾಗ ನಾವಿದಿವಿಪಾ..! ಚನ್ನಮ್ಮ ,ಮಲ್ಲಮ್ಮ ರ ನಾಡಿನೊಳಗ ಇಂತಹ ಕರ್ಮ ಕಾಣ ಬೇಕಾಗೇತಿ. ಜಗತ್ತು ಜಾಗತೀ ಕರಣವಾಗೇತಿ ಕುಟುಂಬಗಳು ಇನ್ನೂ ಹದಿಬದಿಯ ಧರ್ಮದೊಳಗಾ ಉಳದಾವು.

" ಮರೆತಿಹಳು ಎನ್ನದಿರಿ.ಕಣ್ಮರೆಯ ತೋಟದಲಿ,
ಅಚ್ಚ ಮಲ್ಲಿಗೆಯರಳು ಬಿರಿಯುತಿಹುದು.
ಬಂದು ಬಿಡುವೆನು ಬೇಗ. ಮುನಿಯದಿರಿ ಕೊರಗದಿರಿ
ಚುಚ್ಚದಿರಿ ಮೊನೆಯಾದ ಮಾತನೆಸೆದು "

ನೋಡುಪಾ..ಮುತ್ತು ? ಹೋಗ್ಲಿ ಮನಿ ಆದ್ರು ಚನ್ನಾಗಿದ್ದಾವಾ ? ಎಷ್ಟೋ ಮನೆಗಳಲ್ಲಿ ನಮ್ಮ ತಂಗಿಯಂತವರು ದೊಡ್ಡವರ ದೊಡ್ಡ ಮನೆಗಳ ಬೆನ್ನಿಗೆ ಬಿದ್ದು ವರ್ಷ ಎರಡು ವರ್ಷಗಳಲ್ಲಿ ವರದಕ್ಷಿಣೆ ಸಾವುಗಳೆಂಬ ಸದ್ದಿರದ ನೋವಾಗಿರುವುದನ್ನ ನಿನಗೆ ವಿವರಿಸಬೇಕಿಲ್ಲ. ಹೆಣ್ಣು ಈ ಸಮಾಜದೊಳಗೆ ಹೆರಿಗೆ ಯಂತ್ರಗಳಾಗಿರುವುದನ್ನೂ ಹಿಂದುಳಿದ ಪ್ರದೇಶಗಳ ಅಂಕಿ ಅಂಶಗಳು ಬಿತ್ತರಿಸುತ್ತಿವೆ. ಅಲ್ಲೆಲ್ಲಾ ಹೆಣ್ಣು ದುಡಿಮೆಯ ಜವಾಬ್ದಾರಿಯನ್ನೂ ಕುಟುಂಬದ ಜವಾಬ್ದಾರಿಯನ್ನೂ ಹೊತ್ತು ನಡೆಯಬೇಕಿದೆ.ಅಪೌಷ್ಟಿಕತೆ ಕಡಿಮೆ ರಕ್ತದ ಕೇಸುಗಳು,ಅಸ್ತಮಾ,ಬಂಜೆತನದ ಸುದ್ದಿಗಳು ನೀರಾವರಿಯ ಸಿಂಧನೂರು ರಾಯಚೂರು ಬಳ್ಳಾರಿಗಳಲ್ಲಿವೆ. ಇನ್ನೂ ಕೆಲವು ಕಡೆ ಡಿಗ್ರಿ ಮಾಡುವವರ ಸಂಖ್ಯೆ ಹೆಚ್ಚಿಲ್ಲ.ಹೈದ್ರಾಬಾದ್ ಕರ್ನಾಟಕದ ತಳ ಸಮಾಜಗಳ ಆಳದಲ್ಲಿ ಇನ್ನೂ ಬಾಲ್ಯವಿವಾಹಗಳು,ಮುತ್ತು ಕಟ್ಟುವ ಪರಂಪರೆಗಳೂ ಪೂರಾ ಮಾಸಿಲ್ಲ. ಯಲ್ಲಮ್ಮ,ಹುಲಿಗೆಮ್ಮ ರ ಜಾತ್ರೆಗಳನ್ನೊಮ್ಮೆ ಇಣುಕಬೇಕು ಅಲ್ಲಿ ಹೆಣ್ಣು ದಿಕ್ಕು ತಪ್ಪಿರುವ ಅನೇಕ ಜೀವಂತ ಉದಾಹರಣೆಗಳು ಸಿಗುತ್ತವೆ.

" ರಾಜ ಅಂಗಳದಾಗ ರಾಯರ ಸುಳಿವಿಲ್ಲ
ಪಾಗದಾವರ ಕುದುರಿಲ್ಲ. ನನ ಬಾಳಾ
ಹೋಗಿ ಬಾ ಅವರ ಸದರೀಗಿ."

ಎಂಬಂತೆ ನಮ್ಮ ನಮ್ಮ ರಾಯರು ಈಗ ಮೊಬೈಲ್ ದೊಳಗ ಫೇಸ್ ಬುಕ್ ನೊಳಗಾ ಟ್ವಿಟ್ಟರ್,ಎಸ್ ಎಮ್.ಎಸ್.ದೊಳಗ ಮುಳುಗಿರುತಾರೆ ಅವರ ಮೇಘ ಸಂದೇಶಗಳನ್ನ ಕಾದು ಮಳೆಯಾಗಿ ಫಲ ಆಗದಂತೆ ತಡದು ಇದು ನಿನ್ನ ಮನಿ ಇವು ನಿನ್ನ ಮಕ್ಕಳು ಅಂತ ಪರಿಚಯಿಸಬೇಕಾದ ದುರಿತಕಾಲವಿದು.

ಹೆಣ್ಣು ಬಾಹ್ಯವಾಗಿ ಆಧುನಿಕ ಉಡುಗೆ ತೊಡುಗೆ,ಭಾಷೆ,ನೌಕರಿಗಳಿಂದ ಕಾಣುತ್ತಾಳೆ ಅದರೆ ಅವಳು ಆಂತರ್ಯದಲ್ಲಿ ಅದೆಷ್ಟು ಪಾರಂಪರಿಕ ನೋವುಗಳನ್ನ ಅನುಭವಿಸುತ್ತಿದ್ದಾಳೆ ಎಂಬುದು ಬಹಳ ಜನಕ್ಕೆ ಗೊತ್ತಿಲ್ಲ.ಮನೆಯಿಂದ ಹೊರಟರೆ ಸಾಕು ಉದ್ದಕ್ಕೂ ಜೊಲ್ಲಪ್ಪಗಳ ಕಾಟ.ವಜ್ರಮುನಿಗಳ ನೋಟ.ಜೊತೆಗೆ ಆಫೀಸು ಮನೆಗೆಲಸಗಳೆಂಬ ಒತ್ತಡಗಳು ಆಕೆಯನ್ನ ಹೈರಾಣು ಮಾಡುತ್ತಿವೆ. ಹುಡುಗಿಯ ಮಾರಿ ಫಿಜಿಕ್ ನೋಡಿ ಲೈಕ್ ಕಾಮೆಂಟ್ ಗಳ ಸುಗ್ಗಿ ಆಗುತ್ತವೆ.ಒಮ್ಮೊಮ್ಮೆ ಇರಲಿ ಅಂತ ಹಾಕಿದ ಪೋಟೋ ತಗದು ಅಸಲಿ ಪೋಟೋ ಹಾಕಿದವರ ಫಾಲೋಯರ್ಸ ಲೋ ಬಿಪಿ ತರ ಇಳದೋಗಿರೊದನ್ನ ನೋಡಲೂ ಬಹುದು.

ಮುತ್ತು ಈ ಮಧ್ಯೆ ಯಜಮಾನಪ್ಪಗಳ ಬಗೆ ಬಗೆಯ ಅನುಮಾನದ ನೆರಳ ಕಾಟ.ಕೊಂಕು ಕತ್ತಿಯಂತಹ ನಾಲಿಗೆಗಳ ಹರಿತ.ಸಾಯದೇ ಸಾಗಬೇಕು.ಬಾಡದೇ ಬೆಳೆಯಬೇಕು." ಈ ಶತಮಾನದ ಮಾದರಿ ಹೆಣ್ಣು " ಇನ್ನೂ ಗಂಡು ನೆರಳಿನಡಿಯ ಶೋಷಿತಳೇ.

ಕಂಬಾರರ ಹೊಸ ಬಾಳಿಗೆ ಹೊರಟ ಮಗಳಿಗೆ ಕವಿತೆಯಂತೆ ಹೆಣ್ಣ ಬದುಕು ಸಂಪ್ರದಾಯದ ಚೌಕಟ್ಟಿಗೆ ನಿಲ್ಲಬಾರದು.ಆರ್ಥಿಕ ಶಕ್ತಿ ಇಲ್ಲದೇ ಹೋದರೆ ಅದು ಗಂಡಾಗಲೀ ಹೆಣ್ಣಾಗಲೀ ಪರಾವಲಂಬೀ ಜೀವನವೇ.ಸಾಧಿಸಬೇಕೆಂಬ ಬದುಕಿನ ಎಲ್ಲೆ ನಡೆದಷ್ಟೂ ಇದೆ ಎಂಬುದ ಮರೆಯಬಾರದು.ಜೀವ ಎಂದಿಗೂ ಪರಾವಲಂಬಿಯಾಗಬಾರದು. ತನ್ನ ಗುರಿಗಾಗಿ ಆಕೆ ಪ್ರಬಲರನ್ನ ದಾಟಲೇ ಬೇಕಿದೆ.

ಹೆಣ್ಣು ತನ್ನದೇ ವಿಶಿಷ್ಟ ಶಕ್ತಿಗಳ ಕೂಡಲ ಸಂಗಮ ಮಮತೆ,ಕರುಣೆ,ವಾತ್ಸಲ್ಯ,ಅಕ್ಕರೆ,ತಾಳ್ಮೆ ಎಂಬ ವಿನ್ಯಾಸಗಳಲ್ಲಿ ಅಷ್ಟೇಅಲ್ಲ ಅಪರಿಮಿತ ಛಲದ ಸಾಲಿನಲ್ಲೂ ಕಾಣುತ್ತಾಳೆ.ಆಕೆ ಸದ್ದಿರದ ಸೀತೆಯೂ ಹೌದು.ಉರಿವ ದ್ರೌಪದಿಯೂ ಹೌದು.

ಆಕಾಶದ ನೀಲಿಯಲ್ಲಿ
ಚಂದ್ರ ತಾರೆ ತೊಟ್ಟಿಲಲ್ಲಿ
ಬೆಳಕನಿಟ್ಟು ತೂಗಿದಾಕೆ
ನಿನಗೆ ಬೇರೆ ಹೆಸರು ಬೇಕೆ
ಸ್ತ್ರೀ ಅಂದರೆ ಅಷ್ಟೆ ಸಾಕೆ."

ನಿಜ ಗೆಳೆಯಾ ಮಹಿಳೆಯ ಕಥನವೆಂದರೆ ಅದು ಕೇವಲ ಹೆಣ್ಣ ಕಥನದ ವಿವರವಲ್ಲ. ಅಕ್ಕನನ್ನ ಅಮರಗೊಳಿಸಿದ ಬಸವ ಅಲ್ಲಮರ ಬೆಳಕೂ ಹೌದು.ಜ್ಯೋತಿಬಾ ಪುಲೆ,ಡಾ. ಅಂಬೇಡ್ಕರ್ ಅವರ ಮಹಿಳಾ ಹಕ್ಕು,ಮಹಿಳಾ ಮೀಸಲಾತಿ ಬೆಳಕೂ ಹೌದು.ಹೆಣ್ಣು ಆಂಗ್ ಸನ್ ಸೂಕಿಯೂ ಹೌದು,ಇಂದಿರಾಗಾಂಧಿಯೂ ಹೌದು. ತೆರೇಸಾ,ಕಲ್ಪನಾ ಚಾವ್ಲಾ.ಬಂಚೇಂದ್ರಿ ಪಾಲ್ಸಾವಿತ್ರಿ ಬಾ,ಆನಂದಿಬಾಯಿ,ಮೇರಿಕೋಮ್,ಶಕುಂತಲಾದೇವಿ,ಕಿರಣ್ ಬೇಡಿ,ಪಿ.ಟಿ.ಉಷಾ.ಹಿಮಾದಾಸ್,ಇನ್ನೂ ಹಲವರ ಸಾಲುಗಳು ಗಂಡೇ ಇಲ್ಲದ ಕಥನಗಳಲ್ಲ. ಸಾಧಕರ ಹಿಂದೆ ಲಿಂಗ ತಾರತಮ್ಯಗಳಿಲ್ಲ ಎಂಬುದನ್ನ ನಾವು ಮರೆಯಬಾರದಲ್ಲವೇ? ಮುತ್ತು ತುಂಬಾ ಕೊರದೆ ಅಂದುಕೋ ಬೇಡ ಗೆಳೆಯ ನೆಂಬುಬ ದೊಡ್ಡ ಬೆಳಕು ನೀನು ಒಳ್ಳೆಯ ಗೆಳೆತನಕ್ಕೆ ಗಂಡು ಹೆಣ್ಣೆಂಬ ಬೇಧವಿಲ್ಲ.ಯಾಕೋ ..ಹೀಗೇ ಹಂಚಿಕೋ ಬೇಕು ಅನಿಸಿತು ಕಣೋ.. ಫೋನ್ ಮಡೋಪಾ..ಜೀವಂತ ಅದೀ ಅಂತಾ ನಿರೂಪಿಸಿಕೋ..ಹಾ..ಲೌವ್ ಯೂ ಡಾ?

# ಬೆಳ್ಳಿ ಚುಕ್ಕೆಗಳು



ಬೆಳ್ಳಿ ಚುಕ್ಕೆಗಳು
ಮಿನಗುವ ಹಾಗೆ
ಆಗಾಗ ಮನದಲಿ
ಬೆಳಗುವ ಆ ಮುತ್ತು
ನೆನಪು ಬಸವಳಿಯುತಿದೆ.

ಬೆಳ್ಳಿ ಚುಕ್ಕೆಗಳು
ನಯನದಾಲಿಯಲಿ
ನುಸುಳಿ ಸೂಸುತಿವೆ
ಮೊದಲ ಕನಸಿನ
ನೆನಪು ಅನಾವರಗೊಳುತ್ತಿವೆ;

ಬೆಳ್ಳಿ ಚುಕ್ಕೆಗಳು
ಹೃದಯಗೂಡಲವ
ಕಲರವ ಬಿಡುಸುತ
ನೆನಪುಗಳ ಆಗರವ
ಪುಳಕಿತಗೊಳಿದುತಿವೆ
ಆರದ ನೆನಪು ಇನ್ನೂ
ಕಣ್ಣಾಲಿನಲಿ ಇಣುಕುತಿವೆ;

ಬೆಳ್ಳಿ ಚುಕ್ಕೆಗಳು
ಪರಿತಪಿಸುತಿವೆ ಮತ್ತೆ–
ಮೌನದ ಗುಣಗಾನದಲಿ
ಗಿರವಿಹಾಕುತ ತಣಿಸುತಿದೆ
ಆದರೆ ನೆನಪು
ಹಾಗೆಯೇ ಇದೆ ಮುಕ್ತವಾಗುತ್ತಿಲ್ಲ

ಬೆಳ್ಳಿ ಚುಕ್ಕೆಗಳು
ಮುಕ್ತಭಾವದ ಮುಕತಿ
ಮೋಡಗಳ ಸುಳಿಯಲಿ
ಬೆತ್ತಲಾಗಿ ಕೊಸರುತಿದೆ
ಬಿಡಿಸಲಾಗದ ಸುಳಿ–
ಹಾಗೆಯೇ ಗಹಗಹಿಸುತ
ನೀಲಾಂಬರಿಯಲಿ ಮೌನ–
ತಾಳಿ ಮಿನುಗಿತಿದೆ..

● ವ.ತಿ.ಮು.

# ಟಿ-20; ಭಾರತಕ್ಕೆ ಎದುರಾಗಿದೆ ಮತ್ತೊಂದು ಸಂಕಷ್ಟ!



ಈ ಬಾರಿಯ ಪ್ರತಿಷ್ಠಿತ ಟಿ ಟ್ವೆಂಟಿ ವಿಶ್ವಕಪ್ ಟೂರ್ನಿಯ ಸೂಪರ್ 12 ಹಂತದ ತನ್ನ ಮೊದಲನೇ ಪಂದ್ಯವನ್ನು ವಿರಾಟ್ ಕೊಹ್ಲಿ ನಾಯಕತ್ವದ ಟೀಮ್ ಇಂಡಿಯಾ ಸೋಲುವುದರ ಮೂಲಕ ಟೂರ್ನಿಯಲ್ಲಿ ಕೆಟ್ಟ ಆರಂಭವನ್ನು ಪಡೆದುಕೊಂಡಿದೆ. ಇಂಗ್ಲೆಂಡ್ ಮತ್ತು ಆಸ್ಟ್ರೇಲಿಯಾ ತಂಡಗಳ ವಿರುದ್ಧ ನಡೆದಿದ್ದ ಅಭ್ಯಾಸ ಪಂದ್ಯಗಳಲ್ಲಿ ಉತ್ತಮ ಪ್ರದರ್ಶನವನ್ನು ನೀಡಿದ ಟೀಮ್ ಇಂಡಿಯಾ ಈ ಬಾರಿಯೂ ಕೂಡ ಪಾಕಿಸ್ತಾನ ತಂಡಕ್ಕೆ ಸೋಲುಣಿಸುವುದರ ಮೂಲಕ ಜಯ ಸಾಧಿಸಲಿದೆ ಎಂಬ ಭರವಸೆ ಮೂಡಿಸಿತ್ತು. ಆದರೆ ಪಾಕಿಸ್ತಾನ ಆಟಗಾರರ ದಿಟ್ಟ ಪ್ರದರ್ಶನದ ಎದುರು ಟೀಮ್ ಇಂಡಿಯಾ ಸೋಲಿಗೆ ಶರಣಾಯಿತು. ಭಾರತ ತ ಪಾಕ್: "ಪಾಕಿಸ್ತಾನ ಗೆಲ್ಲಬೇಕೆಂದರೆ ಈ ಒಬ್ಬ ಆಟಗಾರನನ್ನು ತಂಡದಿಂದ ಹೊರಗಿಡಲೇಬೇಕು!" ಹೌದು, ಅಕ್ಟೋಬರ್ 24ರ ಭಾನುವಾರದಂದು ದುಬೈ ಅಂತರರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣದಲ್ಲಿ ನಡೆದ ಪಾಕಿಸ್ತಾನ ಮತ್ತು ಭಾರತ ತಂಡಗಳ ನಡುವಿನ ಸೆಣಸಾಟದಲ್ಲಿ ಟಾಸ್ ಸೋತ ವಿರಾಟ್ ಕೊಹ್ಲಿ ಪಡೆ ಮೊದಲು ಬ್ಯಾಟಿಂಗ್ ಆರಂಭಿಸಿತು, ಭಾರತದ ಪರ ಆರಂಭಿಕ ಆಟಗಾರರು ಎಡವಿದ ನಂತರ ತಂಡಕ್ಕೆ ವಿರಾಟ್ ಕೊಹ್ಲಿ ಮತ್ತು ರಿಷಭ್ ಪಂತ್ ಆಸರೆಯಾದರು. ಈ ಇಬ್ಬರನ್ನು ಹೊರತುಪಡಿಸಿ ಬೇರೆ ಯಾವುದೇ ಆಟಗಾರರು ಕೂಡ ದೊಡ್ಡ ಆಟವನ್ನು ಆಡುವಲ್ಲಿ ಯಶಸ್ವಿಯಾಗಲಿಲ್ಲ. ಒಟ್ಟಾರೆ ಭಾರತ 20 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 151 ರನ್ ಗಳಿಸಿ ಪಾಕಿಸ್ತಾನ ತಂಡಕ್ಕೆ ಗೆಲ್ಲಲು 152 ರನ್‌ಗಳ ಗುರಿಯನ್ನು ನೀಡಿತು.

## ಕೆಎಲ್ ರಾಹುಲ್ ಔಟ್ ಅಲ್ಲ, ಅದು ನೋ ಬಾಲ್!;

ನೆಟ್ಟಿಗರ ಆಕ್ರೋಶ ಇನ್ನು ಪಾಕಿಸ್ತಾನದ ವಿರುದ್ಧ ಭಾರತದ ಬೌಲಿಂಗ್ ಪಡೆ ಉತ್ತಮ ಪ್ರದರ್ಶನವನ್ನು ನೀಡಿ ಈ ಮೊತ್ತವನ್ನು ಬಾರಿಸಲು ಬಿಡದೇ ಪಂದ್ಯವನ್ನು ಜಯಗಳಿಸಲಿದೆ ಎಂದು ಊಹಿಸಲಾಗಿತ್ತು. ಆದರೆ ಪಾಕಿಸ್ತಾನದ ಆರಂಭಿಕ ಆಟಗಾರರಾದ ಬಾಬರ್ ಅಜಮ್ ಮತ್ತು ಮೊಹಮ್ಮದ್ ರಿಜ್ವಾನ್ ಈ ಎಲ್ಲಾ ಊಹೆಗಳನ್ನು ತಲೆಕೆಳಗಾಗಿ ಮಾಡಿ ಇತಿಹಾಸವನ್ನೇ ಬದಲಿಸಿ ಪಾಕಿಸ್ತಾನ ತಂಡಕ್ಕಿದ್ದ ಕಳಂಕವನ್ನು ದೂರ ಮಾಡಿದ್ದಾರೆ. ಪಾಕಿಸ್ತಾನ 17.5 ಓವರ್‌ಗಳಲ್ಲಿ ಯಾವುದೇ ವಿಕೆಟ್ ಕಳೆದುಕೊಳ್ಳದೆ 152 ರನ್ ಗಳಿಸುವುದರ ಮೂಲಕ ಭಾರತದ ವಿರುದ್ಧ ಭರ್ಜರಿ 10 ವಿಕೆಟ್‌ಗಳ ಜಯವನ್ನು ಸಾಧಿಸಿತು. ಹೀಗೆ ಇದೇ ಮೊದಲ ಬಾರಿಗೆ ವಿಶ್ವಕಪ್ ಪಂದ್ಯವೊಂದರಲ್ಲಿ ಪಾಕಿಸ್ತಾನ ವಿರುದ್ಧ ಸೋತ ಟೀಮ್ ಇಂಡಿಯಾಗೆ ಇದೀಗ ಮತ್ತೊಂದು ಸಂಕಷ್ಟ ಎದುರಾಗಿದ್ದು ತಂಡದ ಪ್ರಮುಖ ಆಲ್ ರೌಂಡರ್ ಮುಂದಿನ ನ್ಯೂಜಿಲೆಂಡ್ ವಿರುದ್ಧದ ಪಂದ್ಯಕ್ಕೆ ಅಲಭ್ಯರಾಗಲಿದ್ದಾರೆ ಎನ್ನಲಾಗುತ್ತಿದೆ. ಅದರ ವಿವರ ಮುಂದೆ ಇದೆ.. ಪಾಕ್ ವಿರುದ್ಧದ ಪಂದ್ಯದ ವೇಳೆ ಮತ್ತೆ ಗಾಯಕ್ಕೊಳಗಾದ ಹಾರ್ದಿಕ್ ಪಾಂಡ್ಯ ಕಳೆದ ಹಲವಾರು ತಿಂಗಳುಗಳಿಂದ ಟೀಮ್ ಇಂಡಿಯಾದ ಪ್ರಮುಖ ಆಟಗಾರ ಹಾರ್ದಿಕ್ ಪಾಂಡ್ಯ ಗಾಯದ ಸಮಸ್ಯೆಗೆ ಒಳಗಾಗಿದ್ದು, ಇತ್ತೀಚೆಗೆ ನಡೆದ ಇಂಡಿಯನ್ ಪ್ರೀಮಿಯರ್ ಲೀಗ್ ಟೂರ್ನಿಯಲ್ಲಿಯೂ ಕಳಪೆ ಪ್ರದರ್ಶನವನ್ನು ನೀಡಿದ್ದರು. ಅಷ್ಟು ಮಾತ್ರವಲ್ಲದೇ ಟೂರ್ನಿಯ ಯಾವುದೇ ಪಂದ್ಯದಲ್ಲಿಯೂ ಕೂಡ ಹಾರ್ದಿಕ್ ಪಾಂಡ್ಯ ಬೌಲಿಂಗ್ ಮಾಡಿರಲಿಲ್ಲ. ಹೀಗೆ



ಗಾಯದ ಸಮಸ್ಯೆಯ ಜೊತೆಗೆ ಟಿ ಟ್ವೆಂಟಿ ವಿಶ್ವಕಪ್ ಟೂರ್ನಿಗೆ ಆಯ್ಕೆಯಾಗಿದ್ದ ಹಾರ್ದಿಕ್ ಪಾಂಡ್ಯ ಪಾಕಿಸ್ತಾನ ವಿರುದ್ಧ ನಡೆದ ಪಂದ್ಯದಲ್ಲಿ 8 ಎಸೆತಗಳಿಗೆ 11 ರನ್ ಗಳಿಸಿ ನಿರಾಸೆ ಮೂಡಿಸಿದರು. ಅಷ್ಟೇ ಅಲ್ಲದೆ ಈ ಪಂದ್ಯದ ವೇಳೆ ಹಾರ್ದಿಕ್ ಪಾಂಡ್ಯ ಭುಜಕ್ಕೆ ಚೆಂಡು ಬಲವಾಗಿ ತಾಕಿದ್ದು ಪಂದ್ಯದ ನಡುವೆಯೇ ಚಿಕಿತ್ಸೆಗೆ ಒಳಗಾಗಿದ್ದಾರೆ. ಹೀಗಾಗಿ ಭಾರತದ ಪರ ಫೀಲ್ಡಿಂಗ್ ಮಾಡದ ಹಾರ್ದಿಕ್ ಪಾಂಡ್ಯಾ ಬದಲಾಗಿ ಇಶಾನ್ ಕಿಶನ್ ಕಣಕ್ಕಿಳಿದಿದ್ದರು. ಸದ್ಯ ತೀವ್ರ ಭುಜದ ಗಾಯಕ್ಕೆ ಒಳಗಾಗಿರುವ ಹಾರ್ದಿಕ್ ಪಾಂಡ್ಯ ಮುಂದಿನ ನ್ಯೂಜಿಲೆಂಡ್ ಪಂದ್ಯಕ್ಕೆ ಅಲಭ್ಯರಾಗಲಿದ್ದಾರೆ ಎನ್ನಲಾಗುತ್ತಿದೆ. ಪಾಕ್ ವಿರುದ್ಧದ ಪಂದ್ಯದಲ್ಲಿ ಬೌಲಿಂಗ್ ಮಾಡುವುದಿಲ್ಲ ಎಂದು ಮೊದಲೇ ತಿಳಿಸಿದ್ದ ಹಾರ್ದಿಕ್ ಪಾಂಡ್ಯ ಇನ್ನು ಭಾರತ ಮತ್ತು ಪಾಕಿಸ್ತಾನ ನಡುವೆ ನಡೆದ ಈ ಪಂದ್ಯದ ಟಾಸ್ ವೇಳೆ ಮಾತನಾಡಿದ ಹಾರ್ದಿಕ್ ಪಾಂಡ್ಯ ಪಾಕಿಸ್ತಾನ ವಿರುದ್ಧದ ಪಂದ್ಯದಲ್ಲಿಯೂ ತಾನು ಬೌಲಿಂಗ್ ಮಾಡುವುದಿಲ್ಲ ಎಂಬ ಹೇಳಿಕೆಯನ್ನು ನೀಡಿದರು. ಗಾಯದ ಸಮಸ್ಯೆಯಿಂದ ಬಳಲುತ್ತಿರುವ ತಾನು ಇನ್ನೂ ಚಿಕಿತ್ಸೆ ಪಡೆಯುತ್ತಿದ್ದು ಸೆಮಿಫೈನಲ್ ಸನಿಹದಲ್ಲಿ ಬೌಲಿಂಗ್ ಮಾಡುವ ವಿಶ್ವಾಸವನ್ನು ವ್ಯಕ್ತಪಡಿಸಿದ್ದರು. ಆದರೆ ಇದೀಗ ಮತ್ತೆ ಗಾಯಕ್ಕೊಳಗಾಗಿರುವ ಹಾರ್ದಿಕ್ ಪಾಂಡ್ಯ ಪುನಃ ಚೇತರಿಸಿಕೊಳ್ಳುವುದು ತೀರಾ ಕಷ್ಟದ ಕೆಲಸವಾಗಿದ್ದು ಟೂರ್ನಿಯಲ್ಲಿ ಹಾರ್ದಿಕ್ ಪಾಂಡ್ಯಾ ಕಡೆಯಿಂದ ಟೀಮ್ ಇಂಡಿಯಾಗೆ ದೊಡ್ಡ ಮಟ್ಟದ ಕೊಡುಗೆಯನ್ನು ನಿರೀಕ್ಷಿಸುವ ಹಾಗಿಲ್ಲ. ಹಾರ್ದಿಕ್ ಪಾಂಡ್ಯಾ ಬದಲು ಶಾರ್ದೂಲ್ ಠಾಕೂರ್ ಇದ್ದರೂ ಭಾರತಕ್ಕೆ ತಪ್ಪಿದ್ದಲ್ಲ ತೊಂದರೆ ಹಾರ್ದಿಕ್ ಪಾಂಡ್ಯಾ ಬದಲಾಗಿ ಮುಂದಿನ ಪಂದ್ಯಗಳಲ್ಲಿ ಶಾರ್ದೂಲ್ ಠಾಕೂರ್ ಪಂದ್ಯವನ್ನಾಡಲು ಲಭ್ಯರಿದ್ದಾರೆ. ಆದರೆ ಆಯ್ಕೆ ಇದ್ದರೂ ಸಹ ಟೀಮ್ ಇಂಡಿಯಾ ನಿಟ್ಟುಸಿರು ಬಿಡುವ ಹಾಗಿಲ್ಲ. ಹೌದು, ಶಾರ್ದೂಲ್ ಠಾಕೂರ್ ಫಿನಿಶಿಂಗ್ ಸ್ಥಾನದಲ್ಲಿ ಇದುವರೆಗೂ ಕೂಡ ಉತ್ತಮ ಬ್ಯಾಟಿಂಗ್ ಪ್ರದರ್ಶನ ನೀಡದೆ ಇರುವುದು ಸದ್ಯ ಟೀಮ್ ಇಂಡಿಯಾಗೆ ತಲೆನೋವಾಗಿ ಪರಿಣಮಿಸಿದ್ದು ಶಾರ್ದೂಲ್ ಠಾಕೂರ್ ಅವರನ್ನು ತಂಡಕ್ಕೆ ಸೇರಿಸಿಕೊಂಡರೆ ಉತ್ತಮ ಬೌಲಿಂಗ್ ಪ್ರದರ್ಶನ ನೀಡಬಹುದೇ ಹೊರತು ಬ್ಯಾಟಿಂಗ್ ವಿಭಾಗದಲ್ಲಿ ಶಾರ್ದೂಲ್ ಠಾಕೂರ್ ಹಾರ್ದಿಕ್ ಪಾಂಡ್ಯಾ ರೀತಿಯ ದೊಡ್ಡ ರನ್ ಕೊಡುಗೆ ನೀಡಲಿದ್ದಾರೆ ಎಂಬುದನ್ನು ನಿರೀಕ್ಷಿಸುವುದು ತೀರಾ ಕಷ್ಟ.



# ಶರಿಯಾ ಭಯೋತ್ಪಾದನೆಗೆ ಹಣಕಾಸು ಒದಗಿಸುವುದು ಖಂಡನೆ

● ಮಾನಸ, ಬೆಂಗಳೂರು

ಶರಿಯಾ ಭಯೋತ್ಪಾದನೆಗೆ ಹಣಕಾಸು ಒದಗಿಸುವುದನ್ನು ಖಂಡಿಸುತ್ತದೆ. ಶರಿಯಾ, ತನ್ನ ಇಪ್ಪತ್ತನೇ ಅಸಾಧಾರಣ ಅಧಿವೇಶನದಲ್ಲಿ (2010 ರ ಏಪ್ರಿಲ್ ನಲ್ಲಿ ರಿಯಾದ್ ನಲ್ಲಿ ನಡೆದ) ಹಿರಿಯ ವಿದ್ವಾಂಸರನ್ನು ಒಳಗೊಂಡ ಕೌನ್ಸಿಲ್, ತನ್ನ ಹಿಂದಿನ ಅಧಿವೇಶನಗಳು ಮತ್ತು ಹೇಳಿಕೆಗಳನ್ನು ಉಲ್ಲೇಖಿಸಿ, ಭೂಮಿಯ ಮೇಲೆ ಕೇಡುಕನ್ನು ಮಾಡಿದವರನ್ನು ಖಂಡಿಸಲು ಮತ್ತು ಮುಸ್ಲಿಮ್ ಮತ್ತು ಅಲ್ಲದವರಲಿ ಗಂಭೀರವಾದ ಉಲ್ಲಂಘನೆಯನ್ನು ಮಾಡಿರುವುದನ್ನು ಖಂಡಿಸಲಾಯಿತು. ಕೌನ್ಸಿಲ್, ಭಯೋತ್ಪಾದನೆಯ ಹಣಕಾಸು ಕುರಿತ ತೀರ್ಪನ್ನು, ಭಯೋತ್ಪಾದನೆಯ ಅಪರಾಧವಾಗಿದ್ದು ಅದು ಭದ್ರತೆಯನ್ನು ದುರ್ಬಲಗೊಳಿಸುತ್ತದೆ ಮತ್ತು ಅಮಾಯಕರ ಜೀವ ಗಳ ವಿರುದ್ಧ ಗಂಭೀರ ಅಪರಾಧ ಗಳನ್ನು ರೂಪಿಸುತ್ತದೆ ಎಂಬ ದೃಷ್ಟಿಕೋನದಿಂದ ನೋಡಿದೆ. ಭಯೋತ್ಪಾದನೆಯ ಹಣಕಾಸು, ಒಂದು ತೊಡಕಿನ ರೂಪ ಮತ್ತು ಅದನ್ನು ಹರಡುವ ಮಾರ್ಗವೆಂದು ಪರಿಗಣಿಸುತ್ತದೆ.

ಇದಲ್ಲದೆ ಕೌನ್ಸಿಲ್ 'ಸುನ್ನಾ ಮತ್ತು ಶರಿಯಾ' ಎಂಬ ಪವಿತ್ರ ಪುಸ್ತಕದ ಪಾಠಗಳ ಪುರಾಣ



ಗಳನ್ನು ಪರಿಶೀಲಿಸಿ ಭಯೋತ್ಪಾದನೆಯ ಹಣಕಾಸನ್ನು ದೋಷಾರೋಪಣೆ ಮಾಡಿದೆ. ಅಲ್ಲಾಹ ಹೇಳುತ್ತಾರೆ– 'Al-Birr and At-Taqwa ದಲ್ಲಿ (ಸದ್ಗುಣ ,ಸಾಧಾರಣ, ಧರ್ಮನಿಷ್ಠೆ), ಒಬ್ಬರಿಗೊಬ್ಬರು ಸಹಾಯ ಮಾಡಿ ಆದರೆ ಪಾಪ ಮತ್ತು ಉಲ್ಲಂಘನೆ ಯಲ್ಲಿ ಒಬ್ಬರಿಗೊಬ್ಬರು ಸಹಾಯ ಮಾಡಬೇಡಿ' (Surah Al-Mai'dah, 2) ; 'ಮತ್ತು ಆ ಲೌಕಿಕ ಜೀವನದಲ್ಲಿ ಯಾರ ಮಾತುಗಳು ನಿಮ್ಮನ್ನು ಮೆಚ್ಚಿಸಬಹುದೋ ಅವರು ತನ್ನ ಹೃದಯದಲ್ಲಿರುವುದನ್ನು ಸಾಕ್ಷಿಯಾಗಲು ಅಲ್ಲಾಹನನ್ನು ಕರೆಯುತ್ತಾರೆ, ಆದರೂ ಅವರು ವಿರೋಧಿಗಳಲ್ಲಿ ಅತ್ಯಂತ ಜಗಳಗಾರ ನಾಗಿದ್ದಾರೆ. ಮತ್ತು ಬೆಳೆಗಳು ಮತ್ತು ಜಾನುವಾರುಗಳನ್ನು ನಾಶಪಡಿಸುವುದು ಮತ್ತು ಅಲ್ಲಹನು ಕಿಡಿಗೇಡಿತನವನ್ನು ಇಷ್ಟಪಡುವುದಿಲ್ಲ' (surah Al-baqarah,204-205); 'ಮತ್ತು ಭೂಮಿಯ ಮೇಲೆ ಕಿಡಿಗೇಡಿತನ ಮಾಡಬೇಡಿ, ಅದನ್ನು ಕ್ರಮವಾಗಿ ಹೊಂದಿಸಿದ ನಂತರ' (Surah Al-A'raf, 56). 'ಇಸ್ಲಾಮಿಕ್ ಸಿರಿಯಾ'ದಲ್ಲಿ, ಹೀಗೆ ದೃಢವಾಗಿ ಸ್ಥಾಪಿಸಲಾಗಿದೆ–ಏನನ್ನಾದರೂ ಮಾಡುವ ವಿಧಾನಗಳು ಅಂತಹ ಕ್ರಿಯೆಯ ಅತ್ಯಂತ ದಲ್ಲಿಯೇ ಅದೇ ತೀರ್ಮಾನವನ್ನು ಹೊಂದಿವೆ.

ಇದರ ಜತೆಗೆ, ಮುಸ್ಲಿಂ ಅಥವಾ ಮುಸ್ಲಿಮೇತರ ದೇಶಗಳಲ್ಲಿ ಹಕ್ಕುಗಳು ಮತ್ತು ಬದ್ಧತೆಗಳನ್ನು ರಕ್ಷಿಸಲು ಶರಿಯಾ ಬೇಕಾದ್ದನ್ನು ಒದಗಿಸುತ್ತದೆ.

ಅದರಂತೆ,ಭಯೋತ್ಪಾದನೆಗೆ ಹಣಕಾಸು ಒದಗಿಸುವುದು ಅಥವಾ ಅದಕ್ಕೆ ಹಣವನ್ನು ಸಂಗ್ರಹಿಸಿ ಅಥವಾ ಕಾನೂನುಬದ್ಧವಾಗಿ/ ಕಾನೂನುಬಾಹಿರವಾಗಿ ಸ್ವಾಧೀನ ಪಡಿಸಿಕೊಂಡಿದ್ದರೂ ಯಾವುದೇ ವಿಧಾನದಿಂದ ಅದರಲ್ಲಿ ಭಾಗವಹಿಸುವುದನ್ನು ನಿಷೇಧಿಸಲಾಗಿದೆ ಶಿಕ್ಷಾರ್ಯ ಅಪರಾಧವಾಗಿದೆ ಎಂದು ಕೌನ್ಸಿಲ್ ನಿರ್ಧರಿಸಿತು. ಅದಾಗ್ಯೂ ಬಡವರು ಮತ್ತು ನಿರ್ಗತಿಕರಿಗೆ, ಜೀವನೋಪಾಯ,ಚಿಕಿತ್ಸೆ ಮತ್ತು ಶಿಕ್ಷಣವನ್ನು ಒದಗಿಸುವ ಹಣವನ್ನು ಒದಗಿಸಲು ಅಲ್ಲಾಹ ಶ್ರೀಮಂತರ ಮೇಲೆ ಹೇರಿದ್ದಾರೆ ಎಂದು ಜನರಿಗೆ ಸೂಚಿಸಲಾಗಿದೆ. ಈ ತೀರ್ಪನ್ನು ಘೋಷಿಸುವ ಮೂಲಕ ಕೌನ್ಸಿಲ್, ಎಲ್ಲಾ ಮುಸ್ಲಿಮರು ತಮ್ಮ ಧರ್ಮದ ಭಯೋತ್ಪಾದನೆಗಳು ಮತ್ತು ನಮ್ಮ ಪ್ರೀತಿಯ ಪ್ರವಾದಿ ಅವರ ನೀತಿವಂತ ಮಾರ್ಗಕ್ಕೆ ಬದ್ಧವಾಗಿರಲು ಮತ್ತು ಇತರ ಜನರಿಗೆ ಹಾನಿಯುಂಟು ಮಾಡುವ ಅಥವಾ ಅಪರಾಧ ಮಾಡುವ ಯಾವುದೇ ಕೃತ್ಯ ದಿಂದ ದೂರವಿರಲು ಕರೆ ನೀಡಿತು.






# ಅಬ್ಬಾ ಆ ಹುಡುಗಿ' ರಾಜಕುಮಾರ್‌ಗಲ್ಲಿಸಿದ ಗುರುಕಾಣಿಕೆ, ರಾಜಾಶಂಕರ್ ಚಿತ್ರರಂಗ ಪ್ರವೇಶ

ತೆರೆಮರೆ ಕನ್ನಡ ಚಿತ್ರ ಇತಿಹಾಸ


ಭಾಗ–49



ಅ.ನಾ.ಪ್ರಹ್ಲಾದರಾವ್
ವಾರ್ತಾ ಇಲಾಖೆ, ನಿವೃತ್ತ ಅಧಿಕಾರಿ




ರಾಜಕುಮಾರ್ ಅವರನ್ನು ಕನ್ನಡ ಚಿತ್ರರಂಗಕ್ಕೆ ಪರಿಚಯಿಸಿದ ನಿರ್ದೇಶಕ ಹೆಚ್.ಎಲ್.ಎನ್.ಸಿಂಹ ಷೇಕ್ಸ್‌ಪಿಯರ್ ಮಹಾಕವಿಯ 'ದಿ ಟೇಮಿಂಗ್‌ಆಫ್‌ದಿ ಶ್ರೂಕಥೆಯ ಸ್ಫೂರ್ತಿಯಿಂದ ಚಿತ್ರಕಥೆ, ಸಂಭಾಷಣೆ ಹಾಗೂ ಹಾಡುಗಳನ್ನು ರಚಿಸಿ, ನಿರ್ಮಾಣ ಮಾಡಿ, ನಿರ್ದೇಶಿಸಿದ ಕಪ್ಪು–ಬಿಳುಪು ಸಾಮಾಜಿಕ ಕಥಾ ಹಂದರದ ಚಿತ್ರ ಅಬ್ಬಾ ಆ ಹುಡುಗಿ 1959ರಲ್ಲಿ ಶ್ರೀ ಜಮುನಾ ಪ್ರೊಡಕ್ಷನ್ಸ್ ಲಾಂಛನದಲ್ಲಿ ತೆರೆಕಂಡಿತು. ವಿಶೇಷವೆಂದರೆ ರಾಜಕುಮಾರ್‌ಅವರು ಗುರುದಕ್ಷಿಣೆಯಾಗಿ ಈ ಚಿತ್ರದ ಪಾತ್ರವೊಂದರಲ್ಲಿ ಅಭಿನಯಿಸಿದರು. ಸಿಂಹ ತಮ್ಮ ಜನಪ್ರಿಯ ಸಂಸಾರನೌಕ ನಾಟಕ ಸನ್ನಿವೇಶವನ್ನು ಈ ಚಿತ್ರದಲ್ಲಿ ಅಳವಡಿಸಿದ್ದು ಬಿ.ಆರ್.ಪಂತುಲು ಸೇರಿದಂತೆ ಹಲವು ಕಲಾವಿದರು ನಾಟಕ ಪಾತ್ರಧಾರಿಗಳಾಗಿದ್ದರು. ಹೆಚ್.ಎಲ್.ಎನ್.ಸಿಂಹ,ರಾಜಾಶಂಕರ್, ರಾಜಕುಮಾರ್, ನರಸಿಂಹರಾಜು, ಢಿಕ್ಕಿಮಾಧವರಾವ್, ಮೈನಾವತಿ, ಪಂಢರಿಬಾಯಿ, ಎಂ.ವಿ.ರಾಜಮ್ಮ, ಆದವಾನಿ



ಲಕ್ಷ್ಮೀದೇವಿ, ಮೈಸೂರು ಲಕ್ಷ್ಮೀ, ಲೀಲಾವತಿ, ರಮಾದೇವಿ, ಅಭಿನಯಿಸಿದ್ದರು. ಈ ಚಿತ್ರದ ಮೂಲಕ ರಾಜಾಶಂಕರ್ ನಾಯಕ ನಟರಾಗಿಚಿತ್ರರಂಗ ಪ್ರವೇಶಿಸಿ, ಮೈನಾವತಿ ಜೋಡಿಯಾಗಿ ಅಭಿನಯಿಸಿದರು. ಅಪರೂಪಕ್ಕೆ ಸಿಂಹ ಅವರೂ ಪಾತ್ರವಹಿಸಿದ್ದರು.


ಪಿ. ಕಾಳಿಂಗರಾವ್ ಚಿತ್ರಕ್ಕಾಗಿ ಸಂಗೀತ ನಿರ್ದೇಶನ ಮಾಡಿದ್ದು, ಹೆಚ್.ಎಲ್.ಎನ್.ಸಿಂಹ ರಚಿಸಿದ ಏಳು ಮಧುರಗೀತೆಗಳನ್ನು ಅಳವಡಿಸಲಾಗಿತ್ತು. ಎಸ್. ಜಾನಕಿ, ಮೋಹನ ಕುಮಾರಿ, ಭಗವತಿ, ಸ್ವರ್ಣಲತಾ, ಪಿ.ಬಿ.ಶ್ರೀನಿವಾಸ್, ಪಿ.ಕಾಳಿಂಗರಾವ್ ಗೀತೆಗಳಿಗೆ ದನಿಯಾದರು. ಕಾಳಿಂಗರಾವ್ ಅವರಿಗೆ ಅರೇಂಜರ್ ರೂಪದಲ್ಲಿ ಸಹಾಯ ಮಾಡಲು ಹಿಂದಿಯ ಪ್ರಸಿದ್ಧ ಸಂಗೀತ ನಿರ್ದೇಶಕ ಹಾಗೂ ಮ್ಯಾಂಡೊಲಿನ್ ವಾದಕ ಸಜ್ಜಾದ್ ಹುಸೇನ್‌ಅವರನ್ನು ವಿಶೇಷವಾಗಿ ಕರೆಸಲಾಗಿತ್ತು. ಆರ್.ರಾಮಮೂರ್ತಿ ಸಂಕಲನ, ಬಿ.ದೊರೈರಾಜ್ ಛಾಯಾಗ್ರಹಣ, ಜೈಶಂಕರ್ ನೃತ್ಯ ನಿರ್ದೇಶನ ಈ ಚಿತ್ರಕ್ಕಿತ್ತು. ಮದರಾಸಿನ ವಿಜಯವಾಹಿನಿ ಸ್ಟುಡಿಯೊದಲ್ಲಿ ಚಿತ್ರೀಕರಣಗೊಂಡಿತು.

ಶ್ರೀಮಂತ ವ್ಯಕ್ತಿಗೆ ಇಬ್ಬರು ಹೆಣ್ಣು ಮಕ್ಕಳು. ಶರ್ಮಿಷ್ಠ ಪುರುಷದ್ವೇಷಿ, ತಂಗಿ ಸರಸ ಸುರೇಶನನ್ನು ಪ್ರೀತಿಸುತ್ತಾಳೆ. ಗೆಳತಿ ಜ್ಯೋತಿಯ ಸಹೋದರ ಪುರುಷೋತ್ತಮ. ಗೆಳತಿ ರತ್ನ ಮೊದಲಾದವರ ಪ್ರಯತ್ನದಿಂದ ಶರ್ಮಿಷ್ಠ ಪುರುಷೋತ್ತಮನನ್ನು ಮದುವೆಯಾಗುವಂತೆ ಮಾಡುತ್ತಾರೆ. ಗಂಡಹೆಂಡಿರಲ್ಲಿ ಹೊಂದಾಣಿಕೆಯಾಗುವುದಿಲ್ಲ. ಕೊನೆಗೆ ಹಲವರ ಪ್ರಯತ್ನದಿಂದ ಆಕೆಯ ಗರ್ವಭಂಗವಾಗಿ ಎಲ್ಲವೂ ಸುಖಾಂತವಾಗುತ್ತದೆ. ಸುರೇಶನ ಪಾತ್ರದಲ್ಲಿ ರಾಜಕುಮಾರ್, ಪುರುಷೋತ್ತಮನ ಪಾತ್ರದಲ್ಲಿ ರಾಜಾಶಂಕರ್, ಶಮಿಷ್ಠೆ ಪಾತ್ರದಲ್ಲಿ ಮೈನಾವತಿ ಅಭಿನಯವಿದೆ.



## ಹೆಚ್.ಎಲ್.ಎನ್.ಸಿಂಹ ಅವರ ಶೋಧರಾಜಾಶಂಕರ್

ರಾಜಕುಮಾರ್ ಅಭಿನಯದ ಶ್ರೀನಿವಾಸ ಕಲ್ಯಾಣ, ಸಂಪತ್ತಿಗೆ ಸವಾಲ್, ಭಕ್ತಕುಂಬಾರ ಚಿತ್ರಗಳಲ್ಲಿ ಮನೋಜ್ಞವಾಗಿ ಅಭಿನಯಿಸಿರುವ ರಾಜಾಶಂಕರ್‌ಅವರೂ ಸಹ ಹೆಚ್.ಎಲ್. ಎನ್.ಸಿಂಹ ಅವರ ಶೋಧ. 1931ರ ಆಗಸ್ಟ್ 18ರಂದು ತುಮಕೂರು ಜಿಲ್ಲೆಯ ಮಧುಗಿರಿಯಲ್ಲಿ ಜನಿಸಿದರು.ಇವರ ಹುಟ್ಟು ಹೆಸರು ಶಂಕರ್. ಇಂಟರ್ ಮೀಡಿಯೆಟ್‌ವರೆಗೆ ವ್ಯಾಸಂಗ ಮಾಡಿದರು.ಶಾಲಾ ಶಿಕ್ಷಕರಾಗಿದ್ದ ತಂದೆ ಸರ್ಕಾರಿ ನೌಕರಿಗೆ ರಾಜಿನಾಮೆ ನೀಡಿ ಮೈಸೂರಿನ ಬಂದು ನೆಲೆಸಿದರಲ್ಲದೆ, ನವಜ್ಯೋತಿ ಸ್ಟುಡಿಯೋದಲ್ಲಿಉದ್ಯೋಗ ಮಾಡುತ್ತಾ ಚಲನಚಿತ್ರಗಳಲ್ಲಿಯೂ ಅಭಿನಯಿಸುತ್ತಿದ್ದರು.ಮುಂದೆ ಮೈಸೂರಿನ ಚಿತ್ರಮಂದಿರವೊಂದರಲ್ಲಿ ಮ್ಯಾನೇಜರ್‌ಆದರು.ರಾಜಾಶಂಕರ್‌ರ ಚಲನಚಿತ್ರ ಬದುಕಿಗೆ ಇದೇ ನಾಂದಿಯಾಯಿತು. 1959ರಲ್ಲಿ ತೆರೆಕಂಡ 'ಅಬ್ಬಾ ಆ ಹುಡುಗಿ' ಚಿತ್ರಕ್ಕಾಗಿಚಿತ್ರದ ನಿರ್ದೇಶಕ ಹೆಚ್.ಎಲ್.ಎನ್.ಸಿಂಹ ನಾಯಕ ಪಾತ್ರಕ್ಕೆ ಆಯ್ಕೆಮಾಡಿ ರಾಜಾಶಂಕರ್ ಎಂಬ ಹೆಸರನ್ನಿರಿಸಿದರು.



ತೆಲುಗಿನ ಖ್ಯಾತ ನಟಿ ವಾಣಿಶ್ರೀ ನಾಯಕಿಯಾಗಿದ್ದ 'ಜಾಣರಜಾಣ' ಚಿತ್ರದಲ್ಲಿ ನಾಯಕ ನಟರಾಗಿ ಅಭಿನಯಿಸಿದರು. ರಾಜ್ಯ ಸರ್ಕಾರ ಸಹಾಯಧನ ಘೋಷಿಸಿದ ನಂತರ ಮೈಸೂರಿನಲ್ಲಿ ತಯಾರಿಸಿದ ಮೊದಲ ಚಿತ್ರ 'ಅನುರಾಧ' (1967) ನಾಯಕ ನಟರಾಗಿಯೂ ರಾಜಶಂಕರ್ ಅಭಿನಯಿಸಿದರು. ಬೆಂಗಳೂರಿನ ಓಂಕಾರ್ ಸ್ಟುಡಿಯೋದಲ್ಲಿ ಸಂಪೂರ್ಣವಾಗಿ ತಯಾರಾದ ಮೊದಲ ಚಿತ್ರ ಅಮರಜೀವಿ'ಯಲ್ಲಿ ಅಭಿನಯಿಸಿದ ಹೇರಳ ಅವಕಾಶಗಳು ದೊರೆತವು.ನಾಯಕ, ಉಪನಾಯಕ, ಚಾರಿತ್ರಿಕ ಪಾತ್ರಗಳಲ್ಲಿ ನಟಿಸಿದರು .ಸುಮಾರು 50 ಚಿತ್ರಗಳಲ್ಲಿ ರಾಜಾಶಂಕರ್ ಅಭಿನಯಿಸಿದರು. ರಾಜಕುಮಾರ್ ಅಭಿನಯಿಸಿದ 'ರಾಜ ನನ್ನರಾಜ' ಚಿತ್ರವನ್ನು ಎ.ಎಲ್. ಅಬ್ಬಾಯಿ ನಾಯ್ಡು ಅವರೊಂದಿಗೆ ನಿರ್ಮಿಸಿದರು. ಬೆಂಗಳೂರಿನ ಮಲ್ಲೇಶ್ವರ ನಿವಾಸಿಯಾಗಿದ್ದ ಇವರ ನೆನಪಿನಲ್ಲಿ ಅಲ್ಲಿನ ಉದ್ಯಾನವನ ಹಾಗೂ ಕ್ರೀಡಾಂಗಣವೊಂದಕ್ಕೆ ರಾಜಾಶಂಕರ್ ಹೆಸರನ್ನು ಇರಿಸಲಾಗಿದೆ. ಪುತ್ರಿ ಛಾಯಾ ಅವರ ವಿವಾಹಕ್ಕೆ ರಾಜಕುಮಾರ್ ಆಗಮಿಸಿ ವಧು ವರರನ್ನು ಆಶೀರ್ವದಿಸಿದ್ದರು.2 019ರಲ್ಲಿ ನಡೆದ ಲೋಕಸಭಾ ಚುನಾವಣೆಯಲ್ಲಿ ಪುತ್ರಿ ಛಾಯಾ ತುಮಕೂರು ಕ್ಷೇತ್ರದಿಂದ ನಟ ಉಪೇಂದ್ರ ಅವರ ಪಕ್ಷದಿಂದ ಸ್ಪರ್ಧಿಸಿದ್ದರು. 1987ರ ಜುಲೈ 22ರಂದು ರಾಜಶಂಕರ್‌ತಮ್ಮ 56ನೆಯ ವಯಸ್ಸಿನಲ್ಲಿ ಬೆಂಗಳೂರಿನಲ್ಲಿ ನಿಧನರಾದರು.

# ನಿಮ್ಮ ಮಾತು

### ರಾಜಕೀಯ ವಿಶ್ಲೇಷಣೆ ಅದ್ಭುತ

ನಿಮ್ಮ ಕೆಂಧೂಳಿ ಅಕ್ಟೋಬರ್ 21 ರ ಸಂಚಿಕೆ ನಿಜಕ್ಕೂ ಅದ್ಭುತವಾಗಿದೆ. 'ತೆರೆಮರೆಯಲ್ಲಿ ನಡೆಯುತ್ತಿದೆ ಹೊಸ ಪಕ್ಷದ ಬ್ಲೂ ಪ್ರಿಂಟ್' ಎನ್ನುವ ಮುಖಪುಟ ರಾಜ್ಯ ರಾಜಕಾರಣದಲ್ಲಿ ಸಂಚಲನ ಮೂಡಿಸುವಂತಿದೆ. ಯಾಕೆಂದರೆ ನೀವು ಬರೆದಿರುವವ ಆ ವಿಶ್ಲೇಷಣೆ ನಿಜಕ್ಕೂ ಸತ್ಯವಾದರೆ ಹೊಸ ಪ್ರಾದೇಶಿಕ ಪಕ್ಷ ಉದಯವಾಗಿ ಜೆಡಿಎಸ್ ಎನ್ನುವ ಬ್ಲಾಕ್ ಮೇಲ್ ಪಕ್ಷವನ್ನು ದಮನಗೊಳಿಸಿದಂತಾಗುತ್ತದೆ.. ಹಾಗೆಯೇ' ಅಫ್ಘಾನ್ ನೆಲದಲ್ಲಿ ಅಧಿಕಾರಕ್ಕಾಗಿ ಶಿಯಾ–ಸುನ್ನಿ ಆಂತರಿಕ ಕದನ' ಕೂಡ ರೋಮಾಂಚನವಾಗಿದೆ ರಾಜ್ಯ ಮತ್ತು ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಸುದ್ದಿಗಳನ್ನು ವಿಶ್ಲೇಷಣೆ ಮಾಡುವ ಮೂಲಕ ಓದುಗರಿಗೆ ಪರಿಪೂರ್ಣ ಸುದ್ದಿಗಳನ್ನು ನೀಡುತ್ತಿದ್ದೀರಿ ನಿಮ್ಮ ಪತ್ರಿಕೆ ಸದ್ಯದ ಮಟ್ಟಿಗೆ ಅತ್ಯಂತ ಸೊಗಸಾಗಿ ಮೂಡಿ ಬರುತ್ತಿದೆ..ನಿಮ್ಮ ಪತ್ರಿಕೆ ಪುಟ ವಿನ್ಯಾಸವೂ ಕೂಡ ಅಷ್ಟೇ ನೀಟಾಗಿ ಸೊಗಸಾಗಿದೆ.

●ಬಸಪ್ಪ ಉಳ್ಳಾಗಡ್ಡಿ ಹುಬ್ಬಳ್ಳಿ

### ಪತ್ರಿಕೆ ಯಶಸ್ಸು ಗಳಿಸಲಿ

ಎಂದಿನಂತೆ ನಿಮ್ಮ ಪತ್ರಿಕೆ ಹೊಸ ಹೊಸ ಸುದ್ದಿಗಳ ವಿಶ್ಲೇಷಣೆ ಮಾಡುವ ಮೂಲಕ ಒಂದು ವಾರ ಪತ್ರಿಕೆಗೆ ಬೇಕಾದ ಹೂರಣಗಳನ್ನು ನೀಡುತ್ತಾ ಬರುತ್ತೀದ್ದೀರಾ ನಾನು ಕಳೆದ ಐದಾರುತಿಂಗಳಿನಿಂದಲೂ ಗಮನಿಸುತ್ತಿದ್ದೇನೆ ಪತ್ರಿಕೆ ನಿಜಕ್ಕೂ ಚೆನ್ನಾಗಿದೆ.. ಆದರೆ ಈ ಡಿಜಿಟಲ್ ಯುಗದಲ್ಲಿ ಪತ್ರಿಕೆ ಯಶಸ್ಸುಗಳಿಸುತ್ತದೆಯೇ ಎನ್ನುವನುಮಾನ ನನ್ನದು ಏನೇ ಆಗಲಿ ನಿಮ್ಮಸಾಹಸಕ್ಕೆ ನನ್ನದೊಂದು ಹಾಟ್ಸ್‌ಪ್ ..ಯಾಕೆಂದರೆ ಈಗ ಮುದ್ರಣಯುಗ ಅಂತ್ಯಗೊಳ್ಳುತ್ತಿದೆ ಅದರಲ್ಲೂ ಟಾಬ್ಲಾಯ್ಡ್ ಪತ್ರಿಕೆಯ ಅವಸಾನವಾಗಿ ಅಂತ ಸಂದರ್ಭದಲ್ಲಿ ನೀವು ಈ ಟಾಬ್ಲಾಯ್ಡ್ ಪತ್ರಿಕೆಯನ್ನು ತೆರೆಯುವ ಮೂಲಕ ಹೊಸ ಸಾಹಸಕ್ಕೆ ಕೈ ಹಾಕಿದ್ದೀರಿ ...ನಿಮ್ಮ ಪತ್ರಿಕೆ ಯಶಸ್ಸು ಗಳಿಸಲಿ ಎಂದು ಹಾರೈಸುತ್ತೇನೆ...ಧನ್ಯವಾದಗಳು...

● ವಿಶಾಖ .ಕೆ.ಎಚ್. ಮೈಸೂರು


ಕೆಂಧೂಳಿ
ಹೊಸ ಸವಾಲುಗಳ ಕನಸು
ಪ್ರಧಾನ ಸಂಪಾದಕ: ತುರುವನೂರು ಮಂಜುನಾಥ
KENDHOOLI Kannada Weekly
kendhooli.com/e-paper/
ಬೆಲೆಏರಿಕೆ ಬಿಸಿ ಮೈಮೆತ್ತಿಕೊಂಡಿದ್ದರೂ ಜನಾಂಗ ದ್ವೇಷದ್ದೆ ಕಾಳಜಿ!
ಸನತ್‌ಕುಮಾರ ಬೆಳಗಲಿ ಅವರ ಲೇಖನದಲ್ಲಿ...
ಸಂಪುಟ - 01 | ಸಂಚಿಕೆ - 49 | ಪುಟ - 16 | ರೂ. 16/- | ಅಕ್ಟೋಬರ್ 21 ರಿಂದ ಅಕ್ಟೋಬರ್ 27, 2021 MAG(2)Npp/49/2020-21
ತೆರೆಮೆರೆಯಲ್ಲಿ ನಡೆಯುತ್ತಿದೆ ಹೊಸ ಪಕ್ಷದ ಬ್ಲ್ಯೂಪ್ರಿಂಟ್
ಆಡಿದ ಮಾತೇ ತಿರುಗುಬಾಣ
ಎಂ.ಕೆ. ಭಾಸ್ಕರ ರಾವ್ ಅವರ ಅಂಕಣದಲ್ಲಿ...
ಹಾನಗಲ್ ಕ್ಷೇತ್ರದಲ್ಲಿ ಕೈನಾ? ಕಮಲನಾ? ಮುಖ್ಯಮಂತ್ರಿ ಬೊಮ್ಮಾಯಿಗೆ ಪ್ರತಿಷ್ಠೆಯ ಕಣ
ಆಫ್ಘಾನ್ ನೆಲದಲ್ಲಿ ಅಧಿಕಾರಕ್ಕಾಗಿ ಶಿಯಾ-ಸುನ್ನಿ ಆಂತರಿಕ ಕದನ!

### ಪತ್ರಿಕೆ ಚೆನ್ನಾಗಿದೆ

ಪ್ರಾದೇಶಿಕ ಪಕ್ಷದ ಬಗ್ಗೆ ಅಂದರೆ ಹೊಸ ಪಕ್ಷದ ಉದಯದ ಬಗ್ಗೆ ಬರೆದ ನಿಮ್ಮ ಲೇಖನ ಅತ್ಯಂತ ಸೊಗಸಾಗಿದೆ ಮತ್ತು ನಿಮ್ಮ ವಿಶ್ಲೇಷಣೆಯ ಶೈಲಿ ಅದರ ಸಾಧ್ಯ–ಸಾಧ್ಯತೆಗಳ ಕುರಿತು ಎಳೆ ಎಳೆಯಾಗಿ ಬಿಡಿಸಿಟ್ಟಿದ್ದೀರಿ .ಹೌದು ರಾಜ್ಯದಲ್ಲಿ ಜೆಡಿಎಸ್ ಪರ್ಯಾಯವಾಗಿ ಪ್ರಾದೇಶಿಕ ಪಕ್ಷದ ಅಗತ್ಯವಿದೆ ಒಂದು ವೇಳೆ ನೀವು ಬರೆದಂತೆ ಈ ಹೊಸ ಪಕ್ಷ ಉದಯವಾದರೆ ರಾಜ್ಯ ರಾಜಕಾರಣದಲ್ಲಿ ಹೊಸ ರಾಜಕೀಯ ಧ್ರುವೀಕರಣವೇ ಅಗುವುದರಲ್ಲಿ ಎರಡು ಮಾತಿಲ್ಲ. ಆದರೆ ಅದು ಸಾಧ್ಯವೇ ಎನ್ನುವ ಪ್ರಶ್ನೆಯೂ ಮೂಡತ್ತದೆ ಆದರೂ ನೀವು ಬರೆದಿರುವ ಸತ್ಯಾಸತ್ಯಗಳನ್ನು ಆ ವಿಶ್ಲೇಷಣಾತ್ಮಕ ಬರಹಕ್ಕೆ ನಮ್ಮ ಕಡೆಯಿಂದ ಮೆಚ್ಚಿಗೆ ಇದ್ದೆ ಇದೆ. ಹಾಗೆಯೇ ಸನತ್ ಕುಮಾರ್ ಬೆಳಗಲಿ ಲೇಖನ ತುಂಬಾ ಚುನ್ನಾಗಿ ಮೂಡಿ ಬಂದಿದೆ ಇನ್ನೂ ಭಾರತೀಯ ಯೋಧರ ಕಣ್ಗಾವಲಿಗೆ ಬೆದರಿದ ಪಾಕ್ ಉಗ್ರರು ಎನ್ನುವ ಲೇಖನವೂ ಕೂಡ ಮೈ ನವಿರೇಳುವಂತಿದೆ ಒಟ್ಟಾರೆ ಪತ್ರಿಕೆ ಒಂದು ಹೊಸ ಅಲೆಯನ್ನೇ ಸೃಷ್ಟಿಸುತ್ತಿದೆ ಎನ್ನುವುದನ್ನು ಹೇಳಲೇ ಬೇಕಾಗುತ್ತದೆ... ಧನ್ಯವಾದಗಳು...

● ಅಂಜನಪ್ಪ ಎಂ.ಆರ್ ಭರಮಸಾಗರ

### ಒಂದು ಪತ್ರಿಕೆಗೆ ಇರುವ ಗತ್ತು ಇದೆ

ಕೆಂಧೂಳಿ ವಿಶಿಷ್ಟವಾಗಿದೆ ವಾರದ ಸಮಗ್ರ ಸುದ್ದಿಗಳ ವಿಶ್ಲೇಷಣೆಗಳನ್ನು ನೀಡುವ ಮೂಲಕ ಪತ್ರಿಕೆಯನ್ನು ಓದಿಸುವಂತೆ ಮಾಡಿದೆ. ಹಲವು ಬಾರಿ ಒಂದು ಸುದ್ದಿಯ ವಿಶ್ಲೇಷಣೆ ಎನನ್ನೋ ಅರ್ಥಕೊಡಿಸುತ್ತದೆ ಅದೇ ಒಂದು ಸುದ್ದಿಗೆ ಇರುವ ಗತ್ತು ಅದನ್ನು ಪತ್ರಿಕೆ ಪೂರೈಸುತ್ತಿದೆ..ಪತ್ರಿಕೆ ಹೀಗೆ ಬರಲಿ ಇನ್ನಷ್ಟು ಜನಪ್ರಿಯತೆ ಪಡೆಯಲಿ ಎಂದು ಆಶಿಸುತ್ತೇನೆ

● ಶಿವಶಂಕರ್ ಮೂಲಿಮನಿ ಬಾಗಲಕೋಟೆ.

KENDHOOLI Kannada Weekly
kendhooli.com/e-paper/
ಸಂಪುಟ - 01 | ಸಂಚಿಕೆ - 50 | ಪುಟ - 16 | ರೂ. 16/- | ಅಕ್ಟೋಬರ್ 28 ರಿಂದ ನವೆಂಬರ್ 03, 2021
MAG(2)Npp/49/2020-21

# ದಾದಾಸಾಹೇಬ್ ಪ್ರಶಸ್ತಿಯನ್ನು ಬಸ್‌ಡ್ರೈವರ್‌ಗೆ ಅರ್ಪಿಸಿದ ರಜನಿ

ಎಲ್ಲರಿಗೂ ಗೊತ್ತಿರುವ ಹಾಗೆ ಪ್ರಖ್ಯಾತ ನಟ ರಜನಿಕಾಂತ್ ಬಸ್ ಕಂಡಕ್ಟರ್ ಎನ್ನುವುದು ಹೌದು ಇಂತ ಬಸ್ ಕಂಡಕ್ಟ್‌ನಲ್ಲಿ ಒಬ್ಬ ನಟನನ್ನು ಗುರುತಿಸಿದ್ದ ಬಸ್ ಡ್ರೈವರ್, ಆ ಡ್ರೈವರ್ ಯಾವಾಗಲೂ ರಜನಿಕಾಂತ್ ಅವರನ್ನು ಸ್ಮರಿಸುತ್ತಲೇ ಇರುತ್ತಾರಂತೆ ಅಂತ ಬಸ್ ಡ್ರೈವರ್‌ಗೆ ಈಗ ತಮಗೆ ಬಂದ ಪ್ರತಿಷ್ಠಿತ ದಾದಾ ಸಾಹೇಬ್ ಪಾಲ್ಕೆ ಪ್ರಶಸ್ತಿಯನ್ನು ತನ್ನ ಗೆಳೆಯ ಬಸ್ ಡ್ರೈವರ್‌ಗೆ ಅರ್ಪಿಸಿದ್ದಾರೆ

ಮೊನ್ನೆ 25 ರಂದುಉಪರಾಷ್ಟ್ರಪತಿ ವೆಂಕಯ್ಯನಾಯ್ಡು ಅವರಿಂದ ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿ ಪಡೆದ ನಟ ರಜನೀಕಾಂತ್ ಈ ಪ್ರಶಸ್ತಿಯನ್ನು ಮೊದಲಿಗೆ ತಮ್ಮ ಗುರು, ಮೆಂಟೊರ್ ನಿರ್ದೇಶಕ ಕೆ.ಬಾಲಚಂದ್ರ ತಮ್ಮ ಅಣ್ಣ ಸತ್ಯನಾರಾಯಣ್ ಗಾಯಕ್‌ವಾಡ್ ಅವರಿಗೂ ತಮ್ಮ ಆತ್ಮೀಯ ಗೆಳೆಯ, ಬಸ್ ಡ್ರೈವರ್ ಆಗಿದ್ದ ರಾಜ್ ಬಹದ್ದೂರ್ ಅವರಿಗೆ ಪ್ರಶಸ್ತಿ ಅರ್ಪಣೆ ಮಾಡಿದರು.

ಪ್ರಶಸ್ತಿ ಸ್ವೀಕರಿಸಿದ ಬಳಿಕ ಚುಟುಕಾಗಿ ಮಾತನಾಡಿದ ರಜನೀಕಾಂತ್, ''ನನ್ನ ಮಾರ್ಗದರ್ಶಕ, ಗುರು ಕೆ ಬಾಲಚಂದರ್‌ಗೆ ಈ ಪ್ರಶಸ್ತಿ ಅರ್ಪಣೆ ಮಾಡುತ್ತೇನೆ. ಈ ಸಮಯದಲ್ಲಿ ಅವರನ್ನು ಗೌರವಪೂರ್ವಕವಾಗಿ ನೆನಪಿಸಿಕೊಳ್ಳಲು ಬಯಸುತ್ತೇನೆ'' ಎಂದರು ರಜನೀಕಾಂತ್.


''ಕರ್ನಾಟಕದ ನನ್ನ ಗೆಳೆಯ, ಬಸ್ ಡ್ರೈವರ್, ನನ್ನ ಸಹೋದ್ಯೋಗಿ ರಾಜ್ ಬಹದ್ದೂರ್ ಅವರಿಗೆ ಈ ಪ್ರಶಸ್ತಿ ಅರ್ಪಿಸಲು ಬಯಸುತ್ತೇನೆ. ನಾನು ಬಸ್ ಕಂಡಕ್ಟರ್ ಆಗಿದ್ದಾಗ ನನ್ನೊಳಗಿರುವ ನಟನನ್ನು ಮೊದಲು ಗುರುತಿಸಿ, ನಾನು ನಟನಾಗುವಂತೆ ಪ್ರೇರಣೆ ನೀಡಿದ್ದೇ ಅವರು'' ಎಂದು ಗೆಳೆಯನನ್ನು ನೆನಪಿಸಿಕೊಂಡರು. ''ಈ ಮೂವರ ಜೊತೆಗೆ ನನ್ನ ಸಿನಿಮಾದ ನಿರ್ಮಾಪಕರು,




ನಿರ್ದೇಶಕರುಗಳು, ಸಹ ನಟ-ನಟಿಯರು, ತಂತ್ರಜ್ಞರು, ಮಾಧ್ಯಮ ಹಾಗೂ ನನ್ನೆಲ್ಲ ಅಭಿಮಾನಿಗಳಿಗೂ ಈ ಪ್ರಶಸ್ತಿ ಅರ್ಪಣೆ'' ಎಂದರು ರಜನೀಕಾಂತ್.

ರಜನೀಕಾಂತ್ ಬೆಂಗಳೂರಿನಲ್ಲಿ ಬಸ್ ಕಂಡೆಕ್ಟರ್ ಆಗಿ ಸೇವೆ ಸಲ್ಲಿಸುತ್ತಿದ್ದರು. ಅದೇ ಬಸ್‌ನಲ್ಲಿ ಡ್ರೈವರ್ ಆಗಿ ರಾಜ್ ಬಹದ್ದೂರ್ ಕೆಲಸ ಮಾಡುತ್ತಿದ್ದರು. ರಜನೀಕಾಂತ್‌ರಲ್ಲಿರುವ ನಟನನ್ನು ಮೊದಲಿಗೆ ಗುರುತಿಸಿ, ರಜನೀಕಾಂತ್ ಅನ್ನು ಚೆನ್ನೈಗೆ ಕಳುಹಿಸಿದ್ದು ರಾಜ್ ಬಹದ್ದೂರ್. ಇಂದಿಗೂ ರಾಜ್ ಬಹದ್ದೂರ್ ಬೆಂಗಳೂರಿನಲ್ಲಿ ವಾಸವಿದ್ದಾರೆ. ತಮ್ಮ ಗೆಳೆಯನನ್ನು ಕಾಣಲು ರಜನೀಕಾಂತ್ ಆಗಾಗ್ಗೆ ಬೆಂಗಳೂರಿಗೆ ಬರುತ್ತಲಿರುತ್ತಾರೆ. ರಜನೀ ಹಾಗೂ ರಾಜ್ ಬಹದ್ದೂರ್ ಸ್ನೇಹ, ಮಾದರಿ ಸ್ನೇಹಕ್ಕೆ ಉದಾಹರಣೆಯಾಗಿ ನಿಂತುಬಿಟ್ಟಿದೆ.





# ಮನೊರಂಜನ್ ನಿರೀಕ್ಷಿತ ಮುಗಿಲ್ ಪೇಟೆ

ಕ್ರೇಜಿಸ್ಟಾರ್ ವಿ.ರವಿಚಂದ್ರನ್ ಅವರ ಪುತ್ರ ಮನೊರಂಜನ್ ಅವರು ನಟಿಸಿರುವ ಬಹು ನಿರೀಕ್ಷಿತ ' ಮುಗಿಲ್ ಪೇಟೆ' ಸಿನಿಮಾ ಟ್ರೇಲರ್ ಹಾಗೂ ಹಾಡುಗಳಿಂದ ಸ್ಯಾಂಡಲ್‌ವುಡ್‌ನಲ್ಲಿ ಸಖತ್ ಸೌಂಡ್ ಮಾಡುತ್ತಿದೆ. ನವೆಂಬರ್ 19ಕ್ಕೆ ಮುಗಿಲ್ ಪೇಟೆ ಸಿನಿಮಾ ಬಿಡುಗಡೆ ಮಾಡುವುದಾಗಿ ಚಿತ್ರತಂಡ ಘೋಷಣೆ ಮಾಡಿದೆ.

ಮುಗಿಲ್ ಪೇಟೆ ಕ್ಯೂಟ್ ಲವ್ ಸ್ಟೋರಿ ಜೊತೆಗೆ ಫ್ಯಾಮಿಲಿ ಎಮೋಷನ್ ಇರುವ ಸಿನಿಮಾ. ಪ್ರತಿಯೊಬ್ಬ ಹುಡುಗನ ಜೀವನಕ್ಕೆ ಹತ್ತಿರವಾಗಿರುವ ವಿಷ್ಯಗಳನ್ನ ಒಳಗೊಂಡಿದ್ದು, ಮೋತಿ ಮೂವೀ ಮೇಕರ್ಸ್ ಲಾಂಛನದಲ್ಲಿ ರಕ್ಷಾ ವಿಜಯ್ ಕುಮಾರ್ ಈ ಸಿನಿಮಾವನ್ನ ನಿರ್ಮಾಣ ಮಾಡಿದ್ದಾರೆ. ಚಿತ್ರದಲ್ಲಿ ರಂಗಾಯಣ ರಘು, ಸಾಧು ಕೋಕಿಲ, ಅವಿನಾಶ್ ಹಾಗೂ ತಾರಾಮ್ಮ ಅಂತಂಹ ಹಿರಿಯ ನಟರ ಜೊತೆ ನಾನು ಅಭಿನಯಿಸಿರೋದು ನನಗೆ ಹೆಮ್ಮೆ ಇದೆ ಅಂತಾರೆ ಮನುರಂಜನ್.

# ರಮೇಶ್ ಅರವಿಂದ್ ನಿರ್ದೇಶನದ 100 ತೆರೆಗೆ ಸಿದ್ಧ

ಶ್ರೀವಾಜಿ ಸುರತ್ಕಲ್ 2 ಚಿತ್ರದ ಶೂಟಿಂಗ್ ನಲ್ಲಿ ತೊಡಗಿಸಿಕೊಳ್ಳಲಿರುವ ನಟ ರಮೇಶ್ ಅರವಿಂದ್ ಅವರ ನಿರ್ದೇಶದ ಬಹು ನಿರೀಕ್ಷಿತ ಚಿತ್ರ '100' ತೆರೆಗೆ ತರಲು ಉತ್ಸುಕವಾಗಿದ್ದಾರೆ. ಮುಂದಿನ ತಿಂಗಳು ನವೆಂಬರ್ 19 ರಂದು 100 ತೆರೆಗೆ ಬರಲು ಸಜ್ಜಾಗಿದ್ದು ಸೋಷಿಯಲ್ ಮೀಡಿಯಾ ಮೂಲಕ ರಮೇಶ್ ಅರವಿಂದ್ ಅವರೇ ದಿನಾಂಕ ಘೋಷಿಸಿದ್ದಾರೆ.

ಸೈಬರ್ ಕ್ರೈಮ್ ಆಧಾರಿತ ಚಿತ್ರ 100 ಆಗಿದ್ದು, ಗಾಳಿಪಟ-2 ನಿರ್ಮಾಪಕ ರಮೇಶ್ ರೆಡ್ಡಿ ಅವರು ತಮ್ಮ ಬ್ಯಾನರ್ ಸೂರಜ್ ಪ್ರೊಡಕ್ಷನ್ಸ್ ಅಡಿಯಲ್ಲಿ ಚಿತ್ರವನ್ನು ನಿರ್ಮಿಸಿದ್ದಾರೆ. ಚಿತ್ರದಲ್ಲಿ ರಮೇಶ್ ಅರವಿಂದ್ ಪೊಲೀಸ್ ಅಧಿಕಾರಿಯ ಪಾತ್ರದಲ್ಲಿ ನಟಿಸುತ್ತಿದ್ದು, ರಚಿತಾ ರಾಮ್ ಅವರ ಸಹೋದರಿ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಇವರಿಬ್ಬರು ಈ ಹಿಂದೆ ಪುಷ್ಪಕ ವಿಮಾನದಲ್ಲಿ ತೆರೆ ಹಂಚಿಕೊಂಡಿದ್ದರು. 100 ಚಿತ್ರದಲ್ಲಿ ನಟಿ ಪೂರ್ಣಾ ಕೂಡ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಕೆಜಿಎಫ್ ಖ್ಯಾತಿಯ ರವಿ ಬಸ್ರೂರು ಸಂಗೀತ ಸಂಯೋಜನೆ ಮಾಡಿದ್ದು, ಸತ್ಯ ಹೆಗಡೆ 100ಕ್ಕೆ ಛಾಯಾಗ್ರಹಣ ಮಾಡಿದ್ದಾರೆ. ಶಿವಾಜಿ ಸುರತ್ಕಲ್ ಚಿತ್ರದ ನಿರ್ದೇಶಕ ಆಕಾಶ್ ಶ್ರೀವತ್ಸ ಈ ಚಿತ್ರಕ್ಕೆ ಸಂಕಲನಕಾರರಾಗಿ ಕೆಲಸ ಮಾಡಿದ್ದಾರೆ.





# ಕುತೂಹಲ ಮೂಡಿಸಿದ ಬನಾರಸ್

ಶಾಸಕ ಜಮೀರ್ ಅಹ್ಮದ್ ಖಾನ್ ಅವರ ಪುತ್ರ ಝೈದ್ ಖಾನ್ ನಟಿಸಿರುವ ಮೊದಲ ಸಿನಿಮಾ 'ಬನಾರಸ್' ಅನೇಕ ಕಾರಣಗಳಿಂದ ಸದ್ದು ಮಾಡುತ್ತಿದೆ. 'ಬೆಲ್ ಬಾಟಂ' ಸಿನಿಮಾ ಮೂಲಕ ದೊಡ್ಡ ಗೆಲುವು ಪಡೆದ ನಿರ್ದೇಶಕ ಜಯತೀರ್ಥ ಅವರು 'ಬನಾರಸ್' ಚಿತ್ರಕ್ಕೆ ನಿರ್ದೇಶನ ಮಾಡುತ್ತಿದ್ದಾರೆ. ಈ ಸಿನಿಮಾದ ಬಹುತೇಕ ಕೆಲಸಗಳು ಮುಗಿದಿದ್ದು, ಈಗ ಆಡಿಯೋ ರಿಲೀಸ್‌ಗೆ ಸಿದ್ಧತೆ ನಡೆಯುತ್ತಿದೆ. ಪ್ರತಿಷ್ಠಿತ ಲಹರಿ ಮ್ಯೂಸಿಕ್, ಟಿ-ಸಿರೀಸ್ ಸಂಸ್ಥೆಗಳು ಜಂಟಿಯಾಗಿ 'ಬನಾರಸ್' ಚಿತ್ರದ ಆಡಿಯೋ ಹಕ್ಕುಗಳನ್ನು ದಾಖಲೆ ಮೊತ್ತಕ್ಕೆ ಖರೀದಿ ಮಾಡಿವೆ. ಇದು ಝೈದ್ ಖಾನ್ ಪಾಲಿಗೆ ಹೆಮ್ಮೆ ತರುವಂಥ ವಿಚಾರವಾಗಿದೆ. ಸ್ಟಾರ್ ನಟರ ಅಥವಾ ದೊಡ್ಡ ಬ್ಯಾನರ್ ಸಿನಿಮಾಗಳ ಆಡಿಯೋ ಹಕ್ಕುಗಳನ್ನು ಕೋಟ್ಯಂತರ ರೂಪಾಯಿ ಕೊಟ್ಟು ಖರೀದಿ ಮಾಡುವುದು ಸಹಜ. ಆದರೆ ಓರ್ವ ಹೊಸ ಹೀರೋ ನಟಿಸಿರುವ ಚಿತ್ರಕ್ಕೆ ಇಷ್ಟು ದೊಡ್ಡ ಮೊತ್ತ ನೀಡಿರುವುದು ಇದೇ ಮೊದಲ ಎನ್ನಲಾಗುತ್ತಿದೆ. ಆ ಮೊತ್ತ ಎಷ್ಟು ಎಂಬುದನ್ನು ಲಹರಿ ಸಂಸ್ಥೆ ಬಹಿರಂಗಪಡಿಸಿಲ್ಲ. ಒಟ್ಟಿನಲ್ಲಿ ಝೈದ್ ಖಾನ್ ಚೊಚ್ಚಲ ಚಿತ್ರದಲ್ಲೇ ದಾಖಲೆ ಬರೆದಿರುವುದು ಗಮನಾರ್ಹ ಸಂಗತಿ ಎನ್ನುತ್ತಿದೆ ಚಿತ್ರತಂಡ. ಈ ಚಿತ್ರದ ಆಡಿಯೋ ಹಕ್ಕುಗಳು ಖರೀದಿಸಿರುವುದಕ್ಕೆ ಸಂತಸ ಇದೆ ಎಂದಿದೆ ಲಹರಿ ಸಂಸ್ಥೆ. 'ಬನಾರಸ್' ಸಿನಿಮಾ ಮೂಲಕ ಬಣ್ಣದ ಲೋಕಕ್ಕೆ ಝೈದ್ ಖಾನ್‌ಗ್ರ್ಯಾಂಡ್ ಎಂಟ್ರಿ ನೀಡಲಿದ್ದಾರೆ. ಅವರಿಗೆ ಜೋಡಿಯಾಗಿ ಸೋನಲ್ ಮಾಂಥೆರೋ ನಟಿಸಿದ್ದಾರೆ. ಬಹುಪಾಲು ಚಿತ್ರೀಕರಣ ಕಾಶಿಯಲ್ಲಿ ನಡೆದಿದೆ. 'ಒಲವೇ ಮಂದಾರ' ಚಿತ್ರದಿಂದ 'ಬೆಲ್ ಬಾಟಂ' ಸಿನಿಮಾದವರೆಗೆ ಪ್ರತಿ ಬಾರಿಯೂ ವಿಶೇಷ ಕಥಾಹಂದರವನ್ನು ಜನರ ಮುಂದೆ ಪ್ರಸ್ತುತ ಪಡಿಸುತ್ತಿರುವ ಜಯತೀರ್ಥ ಅವರು ಈಗ 'ಬನಾರಸ್' ಮೂಲಕ ಯಾವ ಕಥೆಯನ್ನು ಹೇಳಲಿದ್ದಾರೆ ಎಂಬ ಕುತೂಹಲ ಮೂಡಿದೆ.

KENDHOOLI, Kannada Weekly Printed by, Published by, Owned by & Edited by: T MANJUNATHA, DS MAX SAVVY APARTMENT, PLOT NO 202,2ND FLOOR, JP NAGARA 9TH PHASE, AMRUTHNAGARA MAIN ROAD, ANJANAPURA BANGALORE 560108
Printed at : Brundavan printers, 88/1 1st cross, sameerpura road, Kg nagara Bengaluru-560019
Mob: +91 99161 91222. email: kendhooli18@gmail.com
The Editor is Responsible for selection of news under the PRB Act